ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 11 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 85

ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ:
2496520/21/26/27/28 ಜಾಹೀರಾತು:
2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774,
ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325,
ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com












ಇಂದು ಬೆಂಗಳೂರಲ್ಲಿ ಯುವ ಪುಸ್ತಕಗಳ ಸರಣಿ ಬಿಡುಗಡೆ ಸಮಾರಂಭ



ಮೈಸೂರು, ಜು.10–ಯುವ ಪುಸ್ತಕಗಳ ಸರಣಿ ಬಿಡುಗಡೆ ಸಮಾರಂಭವನ್ನು ನಾಳೆ (ಜು.11) ಸಂಜೆ 4.30 ಗಂಟೆಗೆ ಬೆಂಗಳೂರು ಹೆಬ್ಬಾಳಿನ ಹೋಟೆಲ್ ಕೋರ್ಟ್‌ಯಾರ್ಡ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.


ಡಾ.ವಿಕ್ರಂ ಸಂಪತ್

ಕಾರ್ಯಕ್ರಮವನ್ನು ಖ್ಯಾತ ಇತಿಹಾಸಕಾರ ಮತ್ತು ಲೇಖಕ ಡಾ.ವಿಕ್ರಮ್ ಸಂಪತ್ ಸ್ಥಾಪಿತ ಭಾರತೀಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಶೋಧನಾ ಪ್ರತಿಷ್ಠಾನವು ಓಲಾ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಲಾಗಿದೆ.

ಯುವದ ಹಲವಾರು ಉಪಕ್ರಮಗಳಲ್ಲಿ ವಿದ್ಯಾರ್ಥಿಗಳಿಗಾಗಿ ರಾಷ್ಟ್ರವ್ಯಾಪಿ ಪ್ರಬಂಧ ಸ್ಪರ್ಧೆ, ಭಾರತದ ಶಾಲೆಗಳಲ್ಲಿ ಇತಿಹಾಸ ಶಿಕ್ಷಣದ ಸ್ಥಿತಿಗತಿ ಕುರಿತು ಸಮೀಕ್ಷೆ ಮತ್ತು ಉತ್ತಮ ಗುಣಮಟ್ಟದ ಇತಿಹಾಸ ವಿಷಯದ ಮಕ್ಕಳ ಪುಸ್ತಕಗಳು ಸೇರಿವೆ. ಯುವ ಪುಸ್ತಕ ಸರಣಿಯು ಪ್ರಾಚೀನ ನಾಗರಿಕತೆಗಳು ಮತ್ತು ಮಧ್ಯಕಾಲೀನ ಸಾಮ್ರಾಜ್ಯಗಳಿಂದ ಹಿಡಿದು ಸ್ಫೂರ್ತಿದಾಯಕ ಆಡಳಿತಗಾರರು ಮತ್ತು ಸಾಂಸ್ಕೃತಿಕ ನಾವೀನ್ಯತೆಗಳವರೆಗೆ ಹಲವಾರು ವಿಷಯಗಳನ್ನು ಒಳಗೊಂಡಿದೆ. ಕಾರ್ಯಕ್ರಮವು ಡಾ.ವಿಕ್ರಮ್ ಸಂಪತ್ ಮತ್ತು ತಂತ್ರಜ್ಞ ಸಂದೀಪ್‌ಸಿಂಗ್ ಚೌಹಾನ್ ಅವರು ಸಹ–ಸ್ಥಾಪಿಸಿದ ಎಐ– ನೆರವಿನ, ಮಾನವ ಸಂಸ್ಕರಿಸಿದ ತಂತ್ರಜ್ಞಾನ ಪರಿಹಾರಗಳ ನವೋದ್ಯಮವಾದ NAAVAIನ ಉದ್ಘಾಟನೆ ಮತ್ತು ಮೊದಲ ಸಾರ್ವಜನಿಕ ಕೊಡುಗೆಯನ್ನು ಸಹ ಬಿಂಬಿಸುತ್ತದೆ. ಗೌರವ ಅತಿಥಿಗಳಾಗಿ ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿ, ಸಂಸದ ಯದುವೀರ್ ಒಡೆಯರ್, ಶ್ರೀ ಸತ್ಯಸಾಯಿ ಯೂನಿವರ್ಸಿಟಿ ಫಾರ್ ಹ್ಯೂಮನ್ ಎಕ್ಸಲೆನ್ಸ್ ಅಂಡ್ ಶ್ರೀ ಮಧುಸೂದನ್ ಸಾಯಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಅಂಡ್ ರಿಸರ್ಚ್‌ನ ಸಂಸ್ಥಾಪಕ ಕುಲಪತಿ ಸದ್ಗುರು ಶ್ರೀ ಮಧು ಸೂದನ್ ಸಾಯಿ ಭಾಗವಹಿಸಲಿದ್ದಾರೆ. ಡಾ.ವಿಕ್ರಂ ಸಂಪತ್ ಪ್ರಾಸ್ತಾವಿಕ ನುಡಿಗಳನ್ನಾಡುವರು.

ವಿವಿಧ ಸೌಲಭ್ಯಗಳಿಗೆ ಆಗ್ರಹಿಸಿ ಅನ್ನಭಾಗ್ಯ ಅಕ್ಕಿ ಲೋಡರ್ಸ್ ಪ್ರತಿಭಟನೆ



ಅನ್ನಭಾಗ್ಯ ಯೋಜನೆ ಜಾರಿ ಮಾಡುವ ಲೋಡರ್ ಕಾರ್ಮಿಕರಿಗೆ ಕೂಲಿ ಹೆಚ್ಚಳ ಮಾಡಿ, ಇಎಸ್‌ಐ, ಪಿಎಫ್ ಸೌಲಭ್ಯ ನೀಡಬೇಕೆಂದು ಒತ್ತಾಯಿಸಿ ರಾಜ್ಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜು.10(ಜಿಎ)–ಅನ್ನಭಾಗ್ಯ ಯೋಜನೆ ಜಾರಿ ಮಾಡುವ ಲೋಡರ್‌ಗಳ ಕೂಲಿ ಹೆಚ್ಚಳ ಮಾಡಿ, ಇಎಸ್‌ಐ, ಪಿಎಫ್ ಸೌಲಭ್ಯ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಪಡಿತರ ಯೋಜನೆಗೆ ಅನ್ನಭಾಗ್ಯವೆಂದು ಹೆಸರಿಟ್ಟು 12 ವರ್ಷ ಪೂರೈಸಿದೆ. ಆದರೆ ಯೋಜನೆ ಜಾರಿ ಮಾಡುವ ಲೋಡರ್‌ಗಳ ಬದುಕು ಇನ್ನೂ ಅತಂತ್ರವಾಗಿದೆ. ರಾಜ್ಯಾದ್ಯಂತ ಪಡಿತರ ಅನ್ನಭಾಗ್ಯ ಯೋಜನೆಯಡಿ ಆಹಾರ ನಿಗಮದ ಕೆಎಫ್‌ಸಿಎಸಿ ಹಾಗೂ ಟಿಎಪಿಸಿಎಂಎಸ್ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಎತ್ತುವಳಿ ಲೋಡಿಂಗ್, ಅನ್‌ಲೋಡಿಂಗ್ ಕೆಲಸ ಮಾಡುವ ಕಾರ್ಮಿಕರಿಗೆ ರಾಜ್ಯಾದ್ಯಂತ ಸಮಗ್ರವಾಗಿ ಕಾರ್ಮಿಕ ಕಾನೂನುಗಳು ಇನ್ನೂ ಜಾರಿಯಾಗುತ್ತಿಲ್ಲ. ಸಾಗಾಣಿಕೆ ಗುತ್ತಿಗೆದಾರರಿಂದ ಕಿರುಕುಳ ಮಾತ್ರ ತಪ್ಪಿಲ್ಲ ಎಂದು ಕಿಡಿಕಾರಿದರು.

ಕನಿಷ್ಠ ವೇತನ ಕಾಯಿದೆ ಪ್ರಕಾರ ಪ್ರತಿವರ್ಷ ಬೆಲೆ ಏರಿಕೆ, ತುಟ್ಟಿಭತ್ಯೆಗೆ ಅನುಗುಣವಾಗಿ ಕನಿಷ್ಠವೇತನ ನಿಗದಿ ಮಾಡಬೇಕು. ಆದರೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಯಾವುದೇ ಮಾನದಂಡವಿಲ್ಲದೇ ತನ್ನಿಚ್ಛೆ ಬಂದಾಗ ಕೂಲಿ ಹೆಚ್ಚಳ ಮಾಡುತ್ತಿದ್ದು ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ಟೆಂಡರ್ ಆಗಿರುವ ತಾಲೂಕುಗಳಿಗೆ ಮಾತ್ರ ಕ್ವಿಂಟಾಲ್‌ಗೆ 23.62ರೂ ನಿಗದಿ ಮಾಡಿದ್ದು 120ಕ್ಕೂ ಹೆಚ್ಚು ತಾಲೂಕುಗಳಲ್ಲಿ ತಾಂತ್ರಿಕ ಕಾರಣಗಳಿಂದ ಟೆಂಡರ್ ಆಗದೇ ಉಳಿದಿದೆ. ಅಲ್ಲಿ ಹಳೆಯ ದರವೇ ಇದ್ದು ಕಾರ್ಮಿಕರಿಗೆ ಪ್ರತಿ ತಿಂಗಳು ಲಕ್ಷಾಂತರ ರೂ ನಷ್ಟವಾಗುತ್ತಿದೆ. ಪಿರಿಯಾಪಟ್ಟಣ, ಕೆ.ಆರ್.ನಗರ ಕೆಎಫ್‌ಸಿಎಸ್‌ಸಿ, ಸರಗೂರು, ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು ತಾಲೂಕುಗಳಿಗೆ ಟೆಂಡರ್ ಆಗದೇ ಉಳಿದಿದ್ದು ಆ ತಾಲೂಕುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಈ ಕೂಡಲೇ ಚಿಲ್ಲರೆ ಸಾಗಾಣಿಕೆ ಕ್ವಿಂಟಾಲ್‌ಗೆ 23.62 ರೂ, ಸಗಟು ಸಾಗಾಣಿಕೆ ಟೆಂಡರ್ ಕ್ವಿಂಟಾಲ್‌ಗೆ 10.92 ರೂ ನಿಗದಿ ಮಾಡಿ ಆದೇಶ ಮಾಡಬೇಕು. ಜತೆಗೆ ಕೂಲಿ ಹೆಚ್ಚಳ ಮಾಡಬೇಕು. ಆಹಾರ ನಿಗಮದ ಕೆಎಫ್‌ಸಿಎಸ್‌ಸಿ ಹಾಗೂ ಟಿಎಪಿಸಿಎಂಎಸ್ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಎತ್ತುವಳಿ ಲೋಡಿಂಗ್, ಅನ್‌ಲೋಡಿಂಗ್ ಕೆಲಸ ಮಾಡುವ ಹಮಾಲಿ ಕಾರ್ಮಿಕರಿಗೆ ಇಎಸ್‌ಐ, ಪಿಎಫ್ ಕಡ್ಡಾಯವಾಗಿದ್ದರೂ ಇನ್ನೂ ಜಾರಿಯಾಗಿಲ್ಲ. ಫೆಬ್ರವರಿಯಿಂದಲೂ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರು ಕಾರ್ಮಿಕರಿಂದ ಇಎಸ್‌ಐ, ಪಿಎಫ್ ವಂತಿಗೆ ಕಡಿತ ಮಾಡಿದ್ದು ಇಲ್ಲಿಯವರೆಗೂ ಪಾವತಿ ಮಾಡದೇ ಇರುವುದು ಕಾನೂನುಬಾಹಿರ. ಕೂಡಲೇ ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ಸರಿಯಾಗಿ ಸಂಬಳ ಪಾವತಿಸಿ, ಆಯಾ ತಿಂಗಳು ಇಎಸ್‌ಐ, ಪಿಎಫ್ ವಂತಿಕೆ ಪಾವತಿಸಿ ರಸೀದಿ ನೀಡಲು ಕ್ರಮವಹಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ವರದರಾಜೇಂದ್ರ, ಜಿ.ಮಹದೇವ, ಕರಿನಾಯಕ, ನರಸಿಂಹಮೂರ್ತಿ, ವಿಕ್ರಮ್ ನಾಯಕ, ಕುಮಾರ್, ಕೃಷ್ಣಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ಪೊಲೀಸ್ ಸಂಚಾರಿ ಸೂಚನಾ ಫಲಕಗಳಲ್ಲಿ ಇಂಗ್ಲಿಷ್ ಭಾಷೆ ಬಳಕೆ

ನೋ ಪಾರ್ಕಿಂಗ್ ಬೋರ್ಡ್‌ಗಳಿಗೆ ಕಪ್ಪು ಮಸಿ ಬಳಿದು ಪ್ರತಿರೋಧನೆ



ಪೊಲೀಸರ ಸೂಚನಾ ಫಲಕಕ್ಕೆ ಮಸಿ ಬಳಿದಿರುವುದು.

ಮೈಸೂರು, ಜು.10(ಬಿಎಲ್‌ಯು)– ಆಡಳಿತದಲ್ಲಿ ಕನ್ನಡ ಭಾಷೆ ಬಳಕೆ ಮಾಡಬೇಕೆಂದು ಸರ್ಕಾರದ ಕಟ್ಟುನಿಟ್ಟಿನ ಆದೇಶ ಇದ್ದರೂ ಪೊಲೀಸ್ ಇಲಾಖೆಯ ಸಂಚಾರಿ ಸೂಚನಾ ಫಲಕಗಳಲ್ಲಿ ಇಂಗ್ಲಿಷ್ ಭಾಷೆ ಬಳಸುತ್ತಿರುವುದರ ವಿರುದ್ಧ ಕನ್ನಡ ಪರ ಹೋರಾಟಗಾರರು ಇಂದು ಇಂಗ್ಲಿಷ್ ಭಾಷೆಯಲ್ಲಿರುವ ಸಂಚಾರಿ ಸೂಚನಾ ಫಲಕಕ್ಕೆ ಕಪ್ಪು ಮಸಿ ಬಳಿದು ಪ್ರತಿರೋಧಿಸಿದರು.

ನಗರದ ಹುಣಸೂರು ರಸ್ತೆಯ ಪಡುವಾರಹಳ್ಳಿ ಸಿಗ್ನಲ್ ಮುಂದಿರುವ ನೋ ಪಾರ್ಕಿಂಗ್ ಎಂಬ ಸಂಚಾರಿ ಸೂಚನಾ ಫಲಕಕ್ಕೆ ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಮತ್ತು ಅರವಿಂದ ಶರ್ಮ ಕಪ್ಪು ಮಸಿ ಬಳಿದರು.

ಆಡಳಿತದಲ್ಲಿ ಕನ್ನಡ ಭಾಷೆ ಬಳಸಬೇಕೆಂದು ಜೂನ್ 24 ರಂದು ಸರ್ಕಾರ'ದಿಂದ ಮತ್ತೊಂದು ಆದೇಶವಾಗಿದೆ. ಆದರೂ ಸರ್ಕಾರಿ ಅಧಿಕಾರಿಗಳು ಸರ್ಕಾರದ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಚಾರಿ ಸೂಚನಾ ಫಲಕ, ಪೊಲೀಸ್ ವಾಹನ, ಪೊಲೀಸ್ ಠಾಣೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಬಳಸಲಾಗಿದೆ. ಇದನ್ನು ಬದಲಿಸಿ ಕನ್ನಡ ಭಾಷೆ ಬಳಸುವುದಾಗಿ ನಗರ ಪೊಲೀಸ್ ಆಯುಕ್ತರು ಭರವಸೆ ನೀಡಿದ್ದರು. ಆದರೆ ಈ ತನಕ ಅದು ಭರವಸೆಯಾಗಿಯೇ ಇದೆ ಎಂದು ಕಿಡಿಕಾರಿದರು. ನಾವು ಈಗ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದ್ದೇವೆ. ಕೂಡಲೇ ಇಂಗ್ಲಿಷ್ ಫಲಕ ಬದಲಿಸಿ ಕನ್ನಡ ಬಳಸದಿದ್ದರೆ ತೀವ್ರ ರೀತಿಯ ಹೋರಾಟ ಮಾಡಬೇಕಾಗುತ್ತದೆ ಎಂದು ಸುದರ್ಶನ್ ಹಾಗೂ ಅರವಿಂದ ಶರ್ಮ ಎಚ್ಚರಿಸಿದರು.

ಈ ಮಧ್ಯೆ ಫಲಕಕ್ಕೆ ಮಸಿ ಬಳಿದ ಸಂಬಂಧ ಜಯಲಕ್ಷ್ಮಿಪುರಂ ಠಾಣೆ ಇನ್ಸ್‌ಪೆಕ್ಟರ್ ಅರವಿಂದಶರ್ಮ ಅವರಿಗೆ ಕರೆ ಮಾಡಿ ಸರ್ಕಾರಿ ಆಸ್ತಿ ನಾಶಪಡಿಸಿದ ಸಂಬಂಧ ಕ್ರಮಕೈಗೊಳ್ಳುವುದಾಗಿ ಬೆದರಿಕೆ ಹಾಕಿದ್ದು, ಇದನ್ನು ಖಂಡಿಸುವುದಾಗಿ ಸ.ರ.ಸುದರ್ಶನ್ ತಿಳಿಸಿದ್ದಾರೆ.

ಮೂರನೇ ದಿನವೂ ಮುಂದುವರೆದ ನಗರಪಾಲಿಕೆ ನೌಕರರ ಮುಷ್ಕರ

ಮಾಜಿ ಮೇಯರ್ ಸೇರಿ ಮಾಜಿ ಕಾರ್ಪೊರೇಟರ್‌ಗಳ ಬೆಂಬಲ


ಮೈಸೂರು ಪಾಲಿಕೆ ಮುಂಭಾಗ ಮುಷ್ಕರ ನಿರತ ಪಾಲಿಕೆ ನೌಕರರು ನಡೆಸುತ್ತಿರುವ ಪ್ರತಿಭಟನೆ ಮುಂದುವರೆದಿದ್ದು, ಮಾಜಿ ಮೇಯರ್, ಮಾಜಿ ಉಪ ಮೇಯರ್ ಸೇರಿದಂತೆ ಪಾಲಿಕೆ ಮಾಜಿ ಸದಸ್ಯರು ಪಾಲ್ಗೊಂಡು ಬೆಂಬಲ ಸೂಚಿಸಿದರು.

ಮೈಸೂರು, ಜು.10–ಮೈಸೂರು ಮಹಾನಗರಪಾಲಿಕೆ ಮುಂಭಾಗ ಮುಷ್ಕರನಿರತ ಪಾಲಿಕೆ ನೌಕರರು ನಡೆಸುತ್ತಿರುವ ಪ್ರತಿಭಟನೆ ಮೂರನೇ ದಿನವಾದ ಗುರುವಾರವೂ ಮುಂದುವರೆದಿದ್ದು, ಮಾಜಿ ಮೇಯರ್, ಮಾಜಿ ಉಪ ಮೇಯರ್ ಸೇರಿದಂತೆ ಪಾಲಿಕೆ ಮಾಜಿ ಸದಸ್ಯರು ಪಾಲ್ಗೊಂಡು ಬೆಂಬಲ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಮೇಯರ್ ಶಿವಕುಮಾರ್ ಮಾತನಾಡಿ, ಸಾರ್ವಜನಿಕರಿಗೆ ಮೂಲಸೌಕರ್ಯಗಳನ್ನು ಒದಗಿಸುವ ನೌಕರರ ಬೇಡಿಕೆಗಳನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಬೇಕು. ದೇಶದ ಅಭಿವೃದ್ಧಿಗೆ ರೈತರ ನಂತರ ಕಾರ್ಮಿಕರು ಹೆಚ್ಚು ಶ್ರಮ ಹಾಕುತ್ತಿದ್ದಾರೆ. ಅವರ ಬೇಡಿಕೆಗಳನ್ನು ಈಡೇರಿಸುವುದು ಮುಖ್ಯಮಂತ್ರಿಗಳ ಮೊದಲ ಆದ್ಯತೆ ಆಗಬೇಕಿದೆ.

ರಾಜ್ಯ ಸರ್ಕಾರವು ಸಂವಿಧಾನ, ಪ್ರಜಾಪ್ರಭುತ್ವ ಜೊತೆ ಅಂಬೇಡ್ಕರ್ ಆಶಯಗಳನ್ನು ಒಳಗೊಂಡು ಸರ್ಕಾರ ನಡೆಸುತ್ತೇವೆ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದಿದೆ. ಆದರೆ, ಅಂಬೇಡ್ಕರ್ ಆಶಯಗಳನ್ನು ಪಾಲಿಸುತ್ತಿಲ್ಲ. ಅಂಬೇಡ್ಕರ್ ಅವರು ಕಾರ್ಮಿಕರಿಗಾಗಿಯೇ ಲೇಬರ್ ಪಾರ್ಟಿ ಆರಂಭಿಸಿದರು. ನಂತರ ಕಾರ್ಮಿಕರ ಮೇಲಿನ ಕಾಳಜಿಯಿಂದ 8 ಗಂಟೆ ಕೆಲಸ ಅವಧಿ ನಿಗದಿ, ಭಾನುವಾರ ರಜೆ ಘೋಷಣೆ ಜೊತೆಗೆ ಮಹಿಳಾ ಕಾರ್ಮಿಕರಿಗಾಗಿಯೇ ವಿಶೇಷ ರಜಾಗಳು ನೀಡಿದರು. ಆದರೆ, ರಾಜ್ಯ ಸರ್ಕಾರ ಕಳೆದ ನಾಲ್ಕು ದಿನಗಳಿಂದ ರಾಜ್ಯದಲ್ಲಿ ನಡೆಯುತ್ತಿರುವ ನೌಕರರ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಸ್ಪಂದಿಸುತ್ತಿಲ್ಲ. ಬದಲಾಗಿ ಮುಖ್ಯಮಂತ್ರಿಗಳು ತಮ್ಮ ಖುರ್ಚಿಯನ್ನು ಉಳಿಸಿಕೊಳ್ಳಲು ದೆಹಲಿಗೆ ಓಡಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ರವಿಕುಮಾರ್, ಮಾಜಿ ಉಪ ಮೇಯರ್ ರೂಪ, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಣ್ಣ, ಪ್ರೇಮಾ ಶಂಕರೇಗೌಡ, ಅಶ್ವಿನಿ, ರಮೇಶ್ ರಮಣಿ ಮತ್ತಿತರರು ಪಾಲ್ಗೊಂಡಿದ್ದರು.

ರಾಜ್ಯ ಸರ್ಕಾರ ಶಾಸಕರ ದುಃಖ–ದುಮ್ಮಾನ ಕೇಳಿದರೆ ಸಾಲದು, ಪಾಲಿಕೆ ನೌಕರರ ಬೇಡಿಕೆ ಈಡೇರಿಸಬೇಕು

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಗ್ರಹ



ಮೈಸೂರು, ಜು.10(ಜಿಎ)–ರಾಜ್ಯ ಸರ್ಕಾರ ಶಾಸಕರ ದುಃಖ–ದುಮ್ಮಾನ ಕೇಳಿದರೆ ಸಾಲದು. ಅನಿರ್ದಿಷ್ಟ ಮುಷ್ಕರ ನಡೆಸುತ್ತಿರುವ ಪಾಲಿಕೆಗಳ ನೌಕರರ ಕಷ್ಟ ಕಾರ್ಪಣ್ಯ ಆಲಿಸಿ, ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ತುರ್ತು ಗಮನಹರಿಸಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.


ಪಾಲಿಕೆ ನೌಕರರ ಬೇಡಿಕೆ ಈಡೇರಿಕೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಮೈಸೂರು ಪಾಲಿಕೆ ನೌಕರರ ಸಂಘವು ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಪತ್ರದ ಮೂಲಕ ಮನವಿ ಮಾಡಿಕೊಂಡಿದ್ದು, ಈ ಸಂಬಂಧ ಎಕ್ಸ್ ಮೂಲಕ ಮುಖ್ಯಮಂತ್ರಿಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಶಾಸಕರ ಬಂಡಾಯ ತಣಿಸುವುದಕ್ಕೆ, ಕಾಂಗ್ರೆಸ್ ಪಕ್ಷದಲ್ಲಿನ ಬೇಗುದಿಯನ್ನು ಕಡಿಮೆ ಮಾಡಲು ಸಿಎಂ, ಡಿಸಿಎಂ ಅವರಿಗೆ ಸಮಯವೇ ಸಾಲುತ್ತಿಲ್ಲ. ಇದನ್ನು ನಾನು ತಪ್ಪೆನ್ನಲಾರೆ. ಆದರೆ, ಪಾಲಿಕೆ ನೌಕರರು ಎಸಗಿದ ಪಾಪವೇನು? ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ವಿಳಂಬ ಧೋರಣೆ ಯಾಕೆ? ಸ್ವತಃ ಮುಖ್ಯಮಂತ್ರಿ ಅವರೇ ಮಾನವೀಯ ನೆಲೆಗಟ್ಟಿನಲ್ಲಿ ತಕ್ಷಣವೇ ಕ್ರಮ ವಹಿಸುತ್ತಿಲ್ಲ, ಏಕೆ? ಹಗಲಿರುಳು ಜನರಿಗಾಗಿ ದುಡಿಯುವ ಅವರ ಬದುಕಿಗೂ ಗ್ಯಾರಂಟಿ ಕೊಡಬೇಕಲ್ಲವೇ? ಪಾಲಿಕೆಗಳ ನಿತ್ಯದ ಯಾವ ಕೆಲಸ ಕಾರ್ಯಗಳು ನಿಲ್ಲಬಾರದು. ಸ್ವಚ್ಛತೆ, ನೈರ್ಮಲ್ಯ ಹಾಗೂ ಸ್ಥಳೀಯ ಆಡಳಿತದ ದೃಷ್ಟಿಯಿಂದ ಪಾಲಿಕೆಗಳು ಮಹತ್ವ ಹೊಂದಿವೆ ಎಂಬುದನ್ನು ಆಡಳಿತಗಾರರು ಮರೆಯಬಾರದು ಎಂದು ಕಿಡಿಕಾರಿದ್ದಾರೆ.

ಅನುರಾಗ್ ಬಸವರಾಜ್‌ಗೆ ಸನ್ಮಾನ...


Altamira national salon 2025 ಫೋಟೋಗ್ರಫಿ ಕಾಂಪಿಟೇಶನ್‌ನಲ್ಲಿ ಚಿನ್ನದ ಪದಕ ಪಡೆದ ಮೈಸೂರಿನ ಪತ್ರಿಕಾ ಛಾಯಾಗ್ರಾಹಕ ಎಂ.ಎಸ್.ಅನುರಾಗ್ ಬಸವರಾಜು ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿದರು.

ಡಿಸಿಪಿ ಬಿಂದುಮಣಿ ಅವರಿಗೆ ಅಭಿನಂದನೆ...


ಮೈಸೂರು ನಗರ ನೂತನ ಡಿಸಿಪಿ ಬಿಂದುಮಣಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಕೃಷ್ಣರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಕೆ.ಆರ್ ಬ್ಯಾಂಕ್ ನಿರ್ದೇಶಕ ಶಿವಪ್ರಕಾಶ್ ಇದ್ದರು.

ಆಸ್ತಿ ವಿಚಾರ: ಮಗನಿಂದಲೇ ತಂದೆ, ಸಹೋದರನ ಬರ್ಬರ ಹತ್ಯೆ

ಹೊಳೆನರಸೀಪುರ ತಾಲೂಕು ಗಂಗೂರು ಗ್ರಾಮದಲ್ಲಿ ಘಟನೆ



ಹಾಸನ,ಜು.10–ಆಸ್ತಿ ವಿಚಾರಕ್ಕೆ ಮಗನೇ ತಂದೆ ಹಾಗೂ ಸಹೋದರನನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಗಂಗೂರು ಗ್ರಾಮದಲ್ಲಿ ನಡೆದಿದೆ.

ತಂದೆ ದೇವೇಗೌಡ (70) ಹಾಗೂ ಸಹೋದರ ಮಂಜುನಾಥ್ (50) ಕೊಲೆಯಾದವರು. ಮೋಹನ್ (47) ಕೊಲೆಗೈದ ಆರೋಪಿ. ಮಂಜುನಾಥ್ ಹಾಗೂ ಮೋಹನ್ ಇಬ್ಬರೂ ಅವಿವಾಹಿತರು. ಮಂಜುನಾಥ್, ತಂದೆ–ತಾಯಿಯೊಂದಿಗೆ ವಾಸವಿದ್ದರು. ಆದರೆ ಮೋಹನ್ ಒಂದೇ ಮನೆಯಲ್ಲಿದ್ದರೂ ಪ್ರತ್ಯೇಕವಾಗಿ ವಾಸವಿದ್ದ.

ತಂದೆ ದೇವೇಗೌಡ ಕೆಲ ದಿನಗಳ ಹಿಂದೆ ಆಸ್ತಿ ಮಾರಾಟ ಮಾಡಿದ್ದರು. ಆದರೆ, ಆಸ್ತಿ ಮಾರಾಟ ಮಾಡಿದ ಹಣ ನೀಡಿಲ್ಲ ಎಂದು ಮೋಹನ್ ಗಲಾಟೆ ಮಾಡಿದ್ದ. ಇದೇ ವಿಚಾರವಾಗಿ ಕೋಪಗೊಂಡಿದ್ದ ಮೋಹನ್, ಬುಧವಾರ ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಕುಡಿದ ಮತ್ತಿನಲ್ಲಿ ಮನೆಯ ಗೋಡೆ ನೆಗೆದು, ಮಲಗಿದ್ದ ಅಣ್ಣನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದ್ದ.

ಈ ವೇಳೆ ತಂದೆ ದೇವೇಗೌಡ ಅವರು ಹಿರಿಯ ಮಗ ಮಂಜುನಾಥ್ ಮೇಲೆ ಹಲ್ಲೆಯಾಗುತ್ತಿರುವುದನ್ನು ತಡೆಯಲು ಬಂದಿದ್ದರು. ಈ ವೇಳೆ ಮೋಹನ್, ತಂದೆಯ ಮೇಲೆಯೂ ಮಚ್ಚಿನಿಂದ ಹಲ್ಲೆ ಮಾಡಿದ್ದ. ಮಗನನ್ನು ತಡೆಯಲು ಬಂದ ತಾಯಿ ಜಯಮ್ಮನ ಮೇಲೂ ಮೋಹನ್ ಹಲ್ಲೆಗೆ ಯತ್ನಿಸಿದ್ದ. ಈ ವೇಳೆ ಜಯಮ್ಮ, ಮನೆಯಿಂದ ಹೊರಗೆ ಓಡಿಹೋಗಿ ಪ್ರಾಣ ಉಳಿಸಿಕೊಂಡು, ರಾತ್ರಿ ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದಿದ್ದರು.

ತಂದೆ ಹಾಗೂ ಸಹೋದರನ ಕೊಲೆ ಮಾಡಿ ಮನೆಯ ಮತ್ತೊಂದು ಭಾಗದಲ್ಲಿ ಮೋಹನ್ ಮಲಗಿದ್ದ. ಬಳಿಕ ಅಪ್ಪ ಹಾಗೂ ಅಣ್ಣನನ್ನ ಕೊಲೆ ಮಾಡಿದ್ದೇನೆ. ನನಗೂ ಏಟಾಗಿದೆ ಬಂದು ಆಸ್ಪತ್ರೆಗೆ ಸೇರಿಸು ಎಂದು ಅಕ್ಕನಿಗೆ ಕರೆ ಮಾಡಿ ಮಾಹಿತಿ ನೀಡಿದ್ದ. ಇದರಿಂದ ಗಾಬರಿಗೊಂಡ ಸಹೋದರಿ ಊರಿಗೆ ಬಂದಿದ್ದರು. ಘಟನಾ ಸ್ಥಳಕ್ಕೆ ಎಸ್ಪಿ ಮೊಹಮ್ಮದ್ ಸುಜೀತಾ ಭೇಟಿ ನೀಡಿ, ಪರಿಶೀಲಿಸಿದರು. ಹೊಳೆನರಸೀಪುರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.07.2025 ಶುಕ್ರವಾರ, ಮಳೆ ನಕ್ಷತ್ರ: ಪುನರ್ವಸು, 6.07.2025 ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕಣ್ಣಿನ ಪೊರೆ, ದೃಷ್ಟಿದೋಷ, ಮಧುಮೇಹದಿಂದ ಉಂಟಾಗುವ ಕಣ್ಣಿನ ಕಾಯಿಲೆ, ರಾತ್ರಿ ಕುರುಡುತನ ಉಚಿತ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು ಹಾಗೂ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ** : ತತ್ವಪದಗಳು ಮತ್ತು ಸಂಗೀತ ವೈವಿಧ್ಯ ಕುರಿತು ವಿಚಾರ ಸಂಕಿರಣ, ಬೆಳಗ್ಗೆ 10 ಗಂಟೆಯಿಂದ ಹುಬ್ಬಳ್ಳಿಯ ಡಾ. ಡಿ.ಪಿ. ಜ್ಯೋತಿಲಕ್ಷ್ಮಿ ಅವರಿಂದ ತತ್ವಪದ–ಸುಗಮ ಸಂಗೀತ; ಕಲಬುರಗಿ ಡಾ. ಜಯದೇವಿ ಜಂಗಮಶೆಟ್ಟಿ ಅವರಿಂದ ತತ್ವಪದ–ಹಿಂದೂಸ್ಥಾನಿ ಸಂಗೀತ; ಮೈಸೂರು ಡಾ. ಜಿ. ಗುರುರಾಜ್ ಅವರಿಂದ ತತ್ವಪದ–ಜನಪದ ಸಂಗೀತ; ಸೋಸಲೆ ಎನ್.ಚಂದ್ರಪ್ಪ ಮತ್ತು ತಂಡದವರಿಂದ ತತ್ವಪದ ಗಾಯನ, ಸ್ಥಳ: ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಸಭಾಂಗಣ.

■ **ಶ್ರೀ ಪ್ರಸನ್ನ ಸಾಯಿ ಮಂದಿರ :** 87ನೇ ಗುರುಪೂರ್ಣಿಮಾ ಮಹೋತ್ಸವ, ಬೆಳಗ್ಗೆ 7.30ಕ್ಕೆ ಕಾಕಡಾರತಿ, 11ಕ್ಕೆ ಮಹಾಗಣಪತಿ ಪೂಜೆ, ಕಳಸ ಸ್ಥಾಪನೆ, ನವಗ್ರಹ ಪೂಜೆ ಹಾಗೂ ಶಾಂತಿಹೋಮ, ಮಧ್ಯಾಹ್ನ 1ಕ್ಕೆ ಪೂರ್ಣಾಹುತಿ, ಮಹಾಲಕ್ಷಾರ್ಚನೆ, ಪುಷ್ಪ ವಿಸರ್ಜನೆ, ಶ್ರೀಸಾಯಿನಾಥರಿಗೆ ಅಭಿಷೇಕ, ಅನ್ನಸಂತರ್ಪಣೆ, ಸಂಜೆ 7.30ಕ್ಕೆ ಕು. ಹಂಸಿನಿ ಎಸ್. ಕುಮಾರ್ ಮತ್ತು ತಂಡದವರಿಂದ ಸುಗಮ ಸಂಗೀತ ಹಾಗೂ ಭಕ್ತಿಗೀತೆ, ಸ್ಥಳ: ಶ್ರೀ ಪ್ರಸನ್ನ ಸಾಯಿ ಮಂದಿರ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ, ಶ್ರೀ ಶಾರದಾ ಪೀಠಂ, ಮೈಸೂರು ಶಾಖೆ :** ಆಷಾಢ ಶುಕ್ರವಾರಗಳ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, ವಿಶೇಷ ಪೂಜೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಶ್ರೀ ಸರಸ್ವತೀ ಅಲಂಕಾರ, ಸಂಜೆ 6.30ಕ್ಕೆ ಸಂಕೀರ್ತನ ಸೇವೆ, ಪ್ರಣವ ಮಹೇಶ್ ಉಡುಪ, ಸುದಾಂಶುಧರ ಉಡುಪ, ಶ್ರೀಧರ ಕಶ್ಯಪ್, ಶ್ರೀಮತಿ ವಾಣಿ ಮಹೇಶ್ ಉಡುಪ, ಶ್ರೀಮತಿ ಸಹನಾ ಚಿದಾನಂದ ಅವರಿಂದ, ಅನಘ ಭಟ್–ಪಿಟೀಲು, ಗೌತಮ್ ಗೋಪಾಲಕೃಷ್ಣ–ಮೃದಂಗ, ಸ್ಥಳ: ಶ್ರೀ ಶಾರದಾ ಪೀಠಂ, ವಿದ್ಯಾರಣ್ಯಪುರಂ.

■ **ಅಭಿನವ ಶಂಕರಾಲಯ, ಶಂಕರ ಮಠ ಫೋರ್ಟ್ ಮೊಹಲ್ಲಾ :** ಆಷಾಢ ಶುಕ್ರವಾರಗಳ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆ 10ಕ್ಕೆ ಶ್ರೀ ದುರ್ಗಾ ಹೋಮ, 12ಕ್ಕೆ ಪೂರ್ಣಾಹುತಿ, 12.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 5ಕ್ಕೆ 108 ಮಾತೆಯರಿಂದ ಲಲಿತಾ ಸಹಸ್ರನಾಮ ಕುಂಕುಮಾರ್ಚನೆ, ಸಂಜೆ 6.30 ರಿಂದ ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜು ಮತ್ತು ವೃಂದದವರಿಂದ ಸಂಗೀತ ಗಾಯನ ಕಾರ್ಯಕ್ರಮ, ರಾತ್ರಿ 9.30ಕ್ಕೆ ಪ್ರಾಕಾರೋತ್ಸವ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ವಿದ್ಯಾಗಣಪತಿ ಹಾಗೂ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ :** 6ನೇ ವರ್ಷದ ಶ್ರೀನಿವಾಸ ಕಲ್ಯಾಣೋತ್ಸವ, ಸಂಜೆ 5 ಗಂಟೆಗೆ ಊರಿನ ಪ್ರಮುಖ ರಸ್ತೆಗಳಲ್ಲಿ ಶ್ರೀ ಸ್ವಾಮಿಯವರ ದಿವ್ಯ ರಥೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ವಿನಾಯಕನಗರ.

■ **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಕೌಶಲ ಅಭಿವೃದ್ಧಿ ಕಾರ್ಯಕ್ರಮ, ಸಂಪನ್ಮೂಲ ವ್ಯಕ್ತಿ : ಇಂಜಿನಿಯರ್ ವಿಜಯಾನಂದ ಗುರುದೇವ್, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 5.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಗಣೇಶ್‌ಶರ್ಮಾ ಅವರಿಂದ ಶ್ರೀಮದ್ ಭಾಗವತ ಪ್ರವಚನ, ಸ್ಥಳ: ಶ್ರೀ ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30 ರಿಂದ 7.45 ರವರೆಗೆ


■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ವಿಶ್ರಾಂತ ಕುಲಪತಿ ಪ್ರೊ. ಎಂ. ಮಾದಯ್ಯ ವರ್ಷದ ನೆನಪು ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಪುಷ್ಪಾರ್ಚನೆ : ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ದಾವಣಗೆರೆ ವಿವಿ ವಿಶ್ರಾಂತ ಕುಲಪತಿ ಪ್ರೊ. ಇಂದುಮತಿ, ಉಪಸ್ಥಿತರು : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್.ಶಿವರಾಜಪ್ಪ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ಶಾರದಾ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ. ಎಂ.ಎಸ್. ಚಿಕ್ಕಮಾಧು, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ – ಮಳೆಗಾಲದಲ್ಲಿ ಕಂಡುಬರುವ ಆರೋಗ್ಯ ಸಮಸ್ಯೆಗಳು ಮತ್ತು ತೆಗೆದುಕೊಳ್ಳಬೇಕಾದ ಆರೋಗ್ಯ ಕಾಳಜಿ ಕುರಿತು ಡಾ. ಮಲ್ಲಿಕಾ ಬಿ. ಅವರೊಂದಿಗೆ ಮಾತುಕತೆ ಮತ್ತು ಹದಿಹರೆಯದ ಹೆಣ್ಣುಮಕ್ಕಳನ್ನು ಬಾಧಿಸುವ ಆರೋಗ್ಯ ಸಮಸ್ಯೆಗಳು ಕುರಿತು ಡಾ. ಶಿಲ್ಪಾ ಎನ್.ವಿಜಯ್ ಆವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕಲಾವತಿ ಅವಧೂತ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಾಂಬೆ ಸಹೋದರಿಯರಿಂದ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, 7.20 ಸಂಶೊಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎನ್. ರಮಣಿ–ಕೊಳಲು ವಾದನ, 10.00 ತತ್ವಸಂಚಾರ, ಜನಪದ ತತ್ವಪದ ಗಾಯಕರ ಹಾಡು–ಪಾಡು, ಭಾಗವಹಿಸುತ್ತಾರೆ–ನಂಜನಗೂಡು ತಾಲೂಕು ಹಲ್ಲರೆ ಗ್ರಾಮದ ಶಿವಬುದ್ಧಿ ಮತ್ತು ಸಂಗಡಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.25 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 11 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 85 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಡಿ.ಕೆ.ಶಿವಕುಮಾರ್ ಪರ ಕೆಲವೇ ಶಾಸಕರಿದ್ದಾರೆ...

ನಾನೇ 5 ವರ್ಷ ಮುಖ್ಯಮಂತ್ರಿ

ಆದರೆ, ಪಕ್ಷದ ವರಿಷ್ಠರ ನಿರ್ಧಾರಕ್ಕೆ ಬದ್ಧ

- ದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಂಬ್
- 2023ರ ವಿಧಾನಸಭಾ ಚುನಾವಣೆ ಸಂದರ್ಭದ ಬೆಳವಣಿಗೆಯೇ 2028ಕ್ಕೆ ಮುಂದುವರೆಯಲಿದೆ
- ನಾಯಕತ್ವ ಬದಲಾವಣೆ ಬಗ್ಗೆ ಕಾಂಗ್ರೆಸ್ ವರಿಷ್ಠರು ಯಾರೂ ಪ್ರಸ್ತಾಪ ಮಾಡಿಲ್ಲ



ದೆಹಲಿಯಲ್ಲಿ ಗುರುವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ಮಾಡಿ, ಚರ್ಚೆ ನಡೆಸಿದರು.

ಬೆಂಗಳೂರು, ಜು.10(ಕೆಎಂಶಿ)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯ ಮಂತ್ರಿ ಆಗಬೇಕೆಂದು ಒಂದಿಬ್ಬರು ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ, ಅವರಿಗೆ ಹೆಚ್ಚಿನ ಶಾಸಕರ ಬೆಂಬಲ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಂಬ್ ಸಿಡಿಸಿದ್ದಾರೆ.

ಅವರು ಮುಖ್ಯಮಂತ್ರಿ ಆಗಬೇಕು ಎಂಬುದಾಗಿ ಹೇಗೆ ಹೇಳುವವರಿದ್ದಾರೋ, ಅದೇ ರೀತಿ ನಾನೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂಬುದಾಗಿಯೂ ಹೇಳುವವರಿದ್ದಾರೆ. ನಾಯಕತ್ವ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧ ಎಂದು ಸ್ಪಷ್ಟಪಡಿಸಿದರು.

ನಾನಷ್ಟೇ ಅಲ್ಲ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹಾ ಬದ್ಧರಾಗಿರುತ್ತಾರೆ. ಆದರೆ, ನಾನು ಪೂರ್ಣಾವಧಿ ಮುಖ್ಯಮಂತ್ರಿ ಎಂದು ಮತ್ತೊಮ್ಮೆ ಪುನರುಚ್ಚರಿಸಿದರು.

ಸರ್ಕಾರ ರಚನೆ ವೇಳೆ, ನಮ್ಮ ನಿರ್ಧಾರಕ್ಕೆ ಬದ್ಧರಾಗಿರಬೇಕು ಎಂಬುದಾಗಿ ಹೈಕಮಾಂಡ್ ತಿಳಿಸಿದ್ದು, ಅದಕ್ಕೆ ನಾನು ಹಾಗೂ ಶಿವಕುಮಾರ್ ಬದ್ಧರಾಗಿರುವುದಾಗಿ ತಿಳಿಸಿದ್ದೇವೆ ಎಂದರು.

ನಾಯಕತ್ವ ಬದಲಾವಣೆ ಅಷ್ಟೇ ಅಲ್ಲ, ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಸದ್ಯಕ್ಕಿಲ್ಲ. ನಿಗಮ–ಮಂಡಳಿಗಳಿಗೆ ಕಾರ್ಯಕರ್ತರ ನೇಮಕ ಸಂಬಂಧ ವರಿಷ್ಠರೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗುವುದು ಎಂದರು.

ಕಳೆದ ಎರಡು ದಿನಗಳಿಂದ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿಗೆ ದೆಹಲಿಯಲ್ಲೇ ಬಿಡಾರ ಹೂಡಿರುವ ಮುಖ್ಯಮಂತ್ರಿ, ಇಂದು ಕರ್ನಾಟಕ ಭವನದಲ್ಲಿ ವಿರಾಮವಾಗಿ ಸುದ್ದಿಗೋಷ್ಠಿ ನಡೆಸಿದ್ದಲ್ಲದೆ, ರಾಷ್ಟ್ರಮಟ್ಟದ ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲೂ ನಾಯಕತ್ವ ಬದಲಾವಣೆ ಇಲ್ಲ ಎಂದಿದ್ದಾರೆ. 2023ರ ವಿಧಾನಸಭಾ ಚುನಾವಣೆ ಸಂದರ್ಭದ ಬೆಳವಣಿಗೆಯೇ 2028ಕ್ಕೂ ಮುಂದುವರೆಯಲಿದೆ ಎಂದು ಮಾರ್ಮಿಕವಾಗಿ ತಿಳಿಸಿದರು.

ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯಾಗಲಿ, ಪ್ರಧಾನಕಾರ್ಯದರ್ಶಿ ವೇಣುಗೋಪಾಲ್ ಆಗಲಿ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅಥವಾ ಅಧಿನಾಯಕ ರಾಹುಲ್ ಗಾಂಧಿಯಾಗಲೀ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಮುಖ್ಯಮಂತ್ರಿ ಖುರ್ಚಿ ಖಾಲಿ ಇಲ್ಲ ಎಂಬುದಾಗಿ ಮಿಸ್ಟರ್ ಶಿವಕುಮಾರ್ ಅವರೇ ಹೇಳಿದ್ದಾರೆ. ಜುಲೈ 2ರಂದು ನಂದಿಬೆಟ್ಟದಲ್ಲಿ ನಾನು ಪೂರ್ಣಾವಧಿ ಮುಖ್ಯಮಂತ್ರಿ ಎಂಬುದಾಗಿ ಘೋಷಣೆ ಮಾಡಿದ ಸಂದರ್ಭದಲ್ಲಿ ಉಪಮುಖ್ಯಮಂತ್ರಿಯೂ ಇದ್ದರು. ನಂತರ ಸಂಪುಟ ಸಭೆಯೂ ನಡೆಯಿತು. ಅದನ್ನೇ ನಾನು ಇಂದೂ ಪುನರುಚ್ಚರಿಸಿದ್ದೇನೆ. ಆದರೆ, ನಾಯಕತ್ವ ಸೇರಿದಂತೆ ಯಾವುದೇ ವಿಷಯದಲ್ಲಿ ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಇಬ್ಬರೂ ತಲೆಬಾಗುತ್ತೇವೆ ಎಂದು ಪದೇ ಪದೆ ಹೇಳಿದರು.

ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂಬುದಾಗಿ ಪಕ್ಷದ ಕೆಲವು ಶಾಸಕರು ಹೇಳಿದ್ದಾರೆ. ಅದು ಅವರ ಅಭಿಪ್ರಾಯ, ಪಕ್ಷದ ಹೈಕಮಾಂಡ್ ಅಭಿಪ್ರಾಯವಲ್ಲ.

ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ನಾಯಕತ್ವ ಕುರಿತು ಶಾಸಕರ ಬಳಿ ಯಾವುದೇ ಪ್ರಶ್ನೆ ಕೇಳಿಲ್ಲ. ಪಕ್ಷ ಸಂಘಟನೆ ಮತ್ತು ಗ್ಯಾರಂಟಿ ಅನುಷ್ಠಾನಕ್ಕೆ ಸೀಮಿತವಾಗಿ ಅಭಿಪ್ರಾಯ ಕೇಳಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಮಾಡಿದರೆ ಪಕ್ಷ ವಿಭಜನೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಳಿ ಸಿದ್ದರಾಮಯ್ಯ ಬೆಂಬಲಿತ ಸಚಿವರ ಎಚ್ಚರಿಕೆ

ಬೆಂಗಳೂರು, ಜು.10(ಕೆಎಂಶಿ)– ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಗಾದಿಗೆ ತಂದರೆ ಪಕ್ಷ ವಿಭಜನೆ ಹಾದಿ ಹಿಡಿಯಲಿದೆ ಎಂದು ಸಿದ್ದರಾಮಯ್ಯ ಬೆಂಬಲಿತ ಸಚಿವರುಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಎಚ್ಚರಿಸಿದ್ದಾರೆ.

ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ಎಐಸಿಸಿ ಮಟ್ಟದಲ್ಲಿ ಬಿರುಸಿನ ಚಟುವಟಿಕೆ ಆರಂಭಗೊಂಡ ಬೆನ್ನಲ್ಲೇ ಮುಖ್ಯಮಂತ್ರಿ ಆಪ್ತರು ಕೊನೆ ಕಸರತ್ತು ನಡೆಸಿದ್ದಾರೆ. ದೆಹಲಿಗೆ ಹೊರಟಿದ್ದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸದಾಶಿವನಗರ ನಿವಾಸದಲ್ಲಿ ಭೇಟಿ ಮಾಡಿದ ಸಚಿವರು, ಶಿವಕುಮಾರ್ ಅವರಿಗೆ ಅಧಿಕಾರ ಕೊಟ್ಟರೆ ರಾಜಕೀಯವಾಗಿ ಏನೆಲ್ಲಾ ಬದಲಾವಣೆ ಆಗಲಿದೆ ಎಂಬುದನ್ನು ಮನದಟ್ಟು ಮಾಡಿದ್ದಾರೆ.

ಸಚಿವರಾದ ಸತೀಶ್ ಜಾರಕಿಹೊಳಿ, ಡಾ.ಜಿ.ಪರಮೇಶ್ವರ್, ಎಚ್.ಕೆ. ಪಾಟೀಲ್, ಜಮೀರ್ ಅಹಮದ್ ಖಾನ್, ದಿನೇಶ್ ಗುಂಡೂ ರಾವ್, ಡಾ.ಎಚ್.ಸಿ.ಮಹದೇವಪ್ಪ ಈಶ್ವರ್ ಬಿ. ಖಂಡ್ರೆ ಅವರುಗಳು ಖರ್ಗೆ ಭೇಟಿ ಮಾಡಿ, ಸಿದ್ದರಾಮಯ್ಯ

■ 6ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಇಂದಲ್ಲ ನಾಳೆ ಸಿಎಂ ಆಗೇ ಆಗ್ತಾರೆ


ಬೆಂಗಳೂರು, ಜು.10– ಸದ್ಯ ರಾಜ್ಯದಲ್ಲಿ ಸಿಎಂ ಕುರ್ಚಿ ಖಾಲಿ ಇಲ್ಲ. ಆದರೆ ಇಂದಲ್ಲ ನಾಳೆ ಉಪ ಮುಖ್ಯಮಂತ್ರಿ



ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗೇ ಆಗ್ತಾರೆ ಎಂದು ಕಾಂಗ್ರೆಸ್ ಶಾಸಕ ರಂಗನಾಥ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

5 ವರ್ಷ ನಾನೇ ಸಿಎಂ ಆಗಿರುತ್ತೇನೆ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಸಿಎಂ, ಡಿಸಿಎಂ ದೆಹಲಿಗೆ ಹೋಗಿದ್ದಾರೆ. ಕೇಂದ್ರ ಮತ್ತು ರಾಜ್ಯದ ನಾಯಕರ ಮಟ್ಟದ ಚರ್ಚೆ ಮಾಡುತ್ತಾರೆ. ರಾಜ್ಯ ಸರ್ಕಾರ ದೇಶದಲ್ಲಿ ಮುಖ್ಯವಾದ ಸ್ಥಾನದಲ್ಲಿದೆ ಎಂದರು. ಬಿಜೆಪಿಗೆ ಸೆಡ್ಡು ಹೊಡೆದು ಕಾಂಗ್ರೆಸ್ ಸರ್ಕಾರ ಬಡವರ ಜೊತೆ ಇದ್ದೇವೆ ಎಂದು ತೋರಿಸಿದ್ದೇವೆ. ಹಾಗಾಗಿ ಕಾಂಗ್ರೆಸ್ ಪಕ್ಷದ ಹಿರಿಯರಿಗೆ ಯಾವ ರೀತಿ ಬಲ ಕೊಡಬೇಕು ಎಂದು ಮಾತಾಡಿರಬಹುದು ಎಂದು ಭಾವಿಸುತ್ತೇನೆ. ಬುಧ ವಾರವೂ ಸುರ್ಜೇವಾಲ ಅವರು ಶಾಸಕರ ಕಷ್ಟ ಸುಖ ಕೇಳಿ ದ್ದಾರೆ. ನಮ್ಮ ವಿಚಾರಗಳನ್ನು ತಿಳಿಸಿದ್ದೇವೆ. ಸಮಸ್ಯೆಗಳು ಬಗೆಹರಿಯುವ ವಿಶ್ವಾಸ ಇದೆ ಎಂದರು.

ವಿಜೃಂಭಣೆಯ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವ



ಚಾಮರಾಜನಗರದ ಇತಿಹಾಸ ಪ್ರಸಿದ್ಧ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವ ಗುರುವಾರ ವಿಜೃಂಭಣೆಯಿಂದ ನೆರವೇರಿತು. /ಸಚಿತ್ರ ವರದಿ ಪುಟ–8

ಸ್ನೇಹಿತನ ಅಪ್ರಾಪ್ತ ಮಗಳ ಅಪಹರಿಸಿದ್ದ ವ್ಯಕ್ತಿ, ಆತನ ತಾಯಿ, ಪತ್ನಿ ಮೇಲೆ ಮಾರಣಾಂತಿಕ ಹಲ್ಲೆ

- ಆಟೋದಲ್ಲಿ ಹೋಗುತ್ತಿದ್ದವರ ಕಾರಿನಲ್ಲಿ ಬಂದು ತಡೆದು ಅಟ್ಟಹಾಸ
- ಬೆಚ್ಚಿ ಬಿದ್ದ ನೆರೆದ ಜನ, ವಾಹನ ಚಾಲಕರು, ಸವಾರರು
- ರಾಮಾನುಜ ರಸ್ತೆಯಲ್ಲಿ ಘಟನೆ



ಮೈಸೂರಿನ ರಾಮಾನುಜ ರಸ್ತೆಯಲ್ಲಿ ಆಟೋದಲ್ಲಿ ಹೋಗುತ್ತಿದ್ದವರ ತಡೆದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ತಂಡ.

ಮೈಸೂರು, ಜು.10–ಸ್ನೇಹಿತನ ಅಪ್ರಾಪ್ತ ಮಗಳನ್ನು ಅಪಹರಿಸಿದ್ದ ವ್ಯಕ್ತಿ ಹಾಗೂ ಆತನ ತಾಯಿ ಮತ್ತು ಪತ್ನಿಯ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ಘಟನೆ ಮೈಸೂರಿನ ರಾಮಾನುಜ ರಸ್ತೆ 12ನೇ ಕ್ರಾಸ್‌ನಲ್ಲಿ ಗುರುವಾರ ರಾತ್ರಿ ನಡೆದಿದೆ.

ರಾಜಣ್ಣ ಎಂಬ ವ್ಯಕ್ತಿ ತನ್ನ ತಾಯಿ ಮತ್ತು ಪತ್ನಿಯೊಂದಿಗೆ ಆಟೋದಲ್ಲಿ ತೆರಳುತ್ತಿದ್ದ ವೇಳೆ ಕಪ್ಪು ಬಣ್ಣದ ಕಾರಿನಲ್ಲಿ ಬಂದವರು ಆಟೋವನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಮೂವರ ಮೇಲೂ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಈ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಜನ ನೆರೆದಿದ್ದು, ವಾಹನಗಳು ಸಂಚರಿಸುತ್ತಿದ್ದರೂ ಹಲ್ಲೆಕೋರರು ಯಾವುದೇ ಅಂಜಿಕೆ ಇಲ್ಲದೆ ಆಕ್ರೋಶದಿಂದ ಮಾರಕಾಸ್ತ್ರಗಳನ್ನು ಹಿಡಿದು ಹಲ್ಲೆ ನಡೆಸಿರುವುದು ನಗರವನ್ನು ಬೆಚ್ಚಿ ಬೀಳಿಸಿದೆ.

ಸ್ನೇಹಿತನ ಅಪ್ರಾಪ್ತ ಮಗಳನ್ನೇ ಅಪಹರಿಸಿದ್ದ: ಹಲ್ಲೆಗೊಳಗಾದ ರಾಜಣ್ಣ ವಿದ್ಯಾರಣ್ಯಪುರಂ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ತನ್ನ ಸ್ನೇಹಿತನ ಅಪ್ರಾಪ್ತ ಮಗಳನ್ನು ಪ್ರೇಮದ ಪಾಶಕ್ಕೆ ಸಿಲುಕಿಸಿಕೊಂಡು ಆಕೆಯನ್ನು ಕರೆದೊಯ್ದಿದ್ದು,

■ 6ನೇ ಪುಟಕ್ಕೆ

ಮೈಸೂರು ಕಾರಂಜಿಕೆರೆಯಲ್ಲಿ ಪೆಂಗ್ವಿನ್ ಪಾರ್ಕ್

- ■ ಪ್ರಸ್ತಾವನೆ ಸಲ್ಲಿಸಲು ಅರಣ್ಯ ಸಚಿವರ ಸೂಚನೆ
- ■ ಮೃಗಾಲಯ ಪ್ರವೇಶ ದರ ಹೆಚ್ಚಳಕ್ಕೆ ಒಪ್ಪಿಗೆ

ಬೆಂಗಳೂರು, ಜು.10– ಮೈಸೂರು ಮೃಗಾಲಯಕ್ಕೆ ಹೊಂದಿಕೊಂಡಿರುವ ಕಾರಂಜಿಕೆರೆಯಲ್ಲಿ ಮತ್ಸ್ಯಾಗಾರದ ಬದಲಿಗೆ 'ಪೆಂಗ್ವಿನ್ ಪಾರ್ಕ್' ನಿರ್ಮಿಸಲು ಪ್ರಸ್ತಾವನೆ ಸಲ್ಲಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ವಿಕಾಸಸೌಧ'ದಲ್ಲಿಂದು ನಡೆದ ಕರ್ನಾಟಕ ಮೃಗಾಲಯ ಪ್ರಾಧಿಕಾರದ 159ನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಮತ್ಸ್ಯಾಗಾರದ ಕಟ್ಟಡದಲ್ಲಿ 'ಪೆಂಗ್ವಿನ್ ಪಾರ್ಕ್' ಮಾಡುವುದು ಸೂಕ್ತವೆಂದು ತಜ್ಞರು ಅಭಿಪ್ರಾಯ ಪಟ್ಟಿರುವ ಹಿನ್ನೆಲೆಯಲ್ಲಿ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.



ಈಶ್ವರ ಬಿ.ಖಂಡ್ರೆ

ಪ್ರವೇಶದರ ಶೇ.20ರಷ್ಟು ಹೆಚ್ಚಳ: ಮೈಸೂರಿನ ಜಗದ್ವಿಖ್ಯಾತ ಶ್ರೀ ಚಾಮರಾಜೇಂದ್ರ ಮೃಗಾಲಯ ಮತ್ತು ಬನ್ನೇರುಘಟ್ಟ ಮೃಗಾಲಯದಲ್ಲಿನ ಪಶು–ಪಕ್ಷಿಗಳ ನಿರ್ವಹಣಾ ವೆಚ್ಚ ಮತ್ತು ಸಿಬ್ಬಂದಿ ವೇತನ ಹೆಚ್ಚಳ ಹಿನ್ನೆಲೆಯಲ್ಲಿ ಪ್ರವೇಶ ದರವನ್ನು ಶೇ.50ರಷ್ಟು ಹೆಚ್ಚಿಸಬೇಕೆಂಬ ಪ್ರಾಧಿಕಾರದ ಪ್ರಸ್ತಾವನೆಗೆ ಪ್ರತಿಕ್ರಿಯಿಸಿದ ಈಶ್ವರ ಖಂಡ್ರೆ, ಏಕಾಏಕಿ ಶೇ.50ರಷ್ಟು ಹೆಚ್ಚಳ ಮಾಡುವುದು ಸರಿಯಲ್ಲ. ಶೇ.20ರಷ್ಟು ಮಾತ್ರವೇ ದರ ಹೆಚ್ಚಳ ಮಾಡಿ ಎಂದು ಪ್ರಸ್ತಾವನೆಗೆ ಅನುಮೋದನೆ ನೀಡಿದರು. ಸಫಾರಿ ದರ ಹೆಚ್ಚಿಸದಂತೆ ಸೂಚಿಸಿದರು.

ಹೆಚ್ಚು ಆಕರ್ಷಕಗೊಳಿಸಲು ಸೂಚನೆ: ಮೃಗಾಲಯಗಳಲ್ಲಿ ಆಧುನಿಕ ಸೌಲಭ್ಯ ಕಲ್ಪಿಸಿದರೆ, ಹೊಸ ವನ್ಯಜೀವಿಗಳು ಸೇರ್ಪಡೆ ಯಾದರೆ ಪ್ರವಾಸಿಗರಿಗೆ ಹೆಚ್ಚಿನ ಆಕರ್ಷಣೆ ಇರುತ್ತದೆ. ಈ ನಿಟ್ಟಿನಲ್ಲಿ ವಿದೇಶೀ ಮೃಗಾಲಯಗಳೊಂದಿಗೆ ವಿನಿಮಯ ಕಾರ್ಯಕ್ರಮಕ್ಕೆ ಕ್ರಮ ವಹಿಸಬೇಕು. ಮುಂದಿನ 5 ವರ್ಷಗಳಲ್ಲಿ ಆಯಾ ಮೃಗಾಲಯಗಳು ತಮ್ಮ ಖರ್ಚು, ವೆಚ್ಚವನ್ನು ತಾವೇ ನಿರ್ವಹಿಸಲು ಶಕ್ತವಾಗುವಂತೆ ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸಲು ಅನುವಾಗುವಂತೆ ಯೋಜನೆ ರೂಪಿಸಲು ತಿಳಿಸಿದರು.

ವನ್ಯಜೀವಿ ವೀಕ್ಷಣೆಗೆ ದೇಶ ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಮೃಗಾಲಯದಲ್ಲಿ ಮತ್ತು ಜೈವಿಕ ಉದ್ಯಾನದಲ್ಲಿ ಶುದ್ಧ ಕುಡಿಯುವ ನೀರು, ವಿಶ್ರಾಂತಿ ಧಾಮ, ಪುರುಷ ಮತ್ತು ಮಹಿಳೆಯರ ಶೌಚಾಲಯದ ಜೊತೆಗೆ ಹೆಚ್ಚಿನ ಸೌಲಭ್ಯ, ಸೌಕರ್ಯಗಳನ್ನು ಒದಗಿಸಬೇಕು ಎಂದರು.



ಬೇಕಾಗಿದ್ದಾರೆ
ಚಿನ್ನ, ಬೆಳ್ಳಿ ಕೆಲಸ ಮಾಡುವವರು ಬೇಕಾಗಿದ್ದಾರೆ
9164946160
8548089469

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 25,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8548089469/9164946160

ಅಮಾಯಕ ಮಹಿಳೆಯರ ಬಳಸಿಕೊಂಡು ದಾಖಲೆ ತಿದ್ದಿ ಭೂ ಮಾಫಿಯಾದಿಂದ ಕೋಟ್ಯಾಂತರ ಮೌಲ್ಯದ ಆಸ್ತಿ ಕಬಳಿಕೆ

ಗ್ರಾಮಲೆಕ್ಕಿಗನ ಸಮಯಪ್ರಜ್ಞೆಯಿಂದ ಅಕ್ರಮ ಬಯಲು

- ಆಸ್ತಿ ಮಾಲೀಕರ ಹೆಸರಿನ ಮಹಿಳೆಯ ಆಧಾರ್ ಕಾರ್ಡ್ ತಿದ್ದಿ ದಾನಪತ್ರ ನೋಂದಣಿ
- ಗುಡಿಸಲಲ್ಲಿ ವಾಸಿಸುವ ಇಬ್ಬರು ಅಮಾಯಕ ಮಹಿಳೆಯರ ಬಳಸಿಕೊಂಡು ಕೋಟ್ಯಾಂತರ ಆಸ್ತಿ ಕಬಳಿಸಲು ಯತ್ನಿಸಿದ್ದ ಭೂ ಮಾಫಿಯಾ
- ಹಿರಿಯ ಉಪನೋಂದಣಾಧಿಕಾರಿಯಿಂದ ಮೈಸೂರು ದಕ್ಷಿಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಜು.10– ಕಂಡ ಕಂಡವರ ಭೂಮಿಯನ್ನು ಅಮಾಯಕರ ಹೆಸರಿಗೆ ನೋಂದಣಿ ಮಾಡಿಸಿ, ನಂತರ ಅದನ್ನು ಮಾರಾಟ ಮಾಡುವ ಮೂಲಕ ಕೋಟ್ಯಾಂತರ ರೂ. ಕಬಳಿಸುವ ಮಾಫಿಯಾ ಮೈಸೂರಿನಲ್ಲಿ ಸಕ್ರಿಯವಾಗಿದೆ. ಇದೀಗ ಬೆಳಕಿಗೆ ಬಂದಿರುವ ಪ್ರಕರಣದಲ್ಲಿ ಮಾಫಿಯಾದವರು ಭೂ ಮಾಲೀಕರ ಹೋಲುವ ಹೆಸರನ್ನು ಬಳಸಿಕೊಂಡು ಅದೇ ಹೆಸರನ್ನು ಹೋಲುವ ಬೇರೊಬ್ಬರ ಮೂಲಕ ಕೋಟ್ಯಾಂತರ ರೂ. ಮೌಲ್ಯದ ಭೂಮಿಯನ್ನು ದಾನಪತ್ರ ಮಾಡಿಸಿಬಿಟ್ಟಿದ್ದಾರೆ.

ಆದರೆ ದಾನಪತ್ರದ ಆಧಾರದ ಮೇರೆಗೆ ಖಾತೆ ಬದಲಾವಣೆಗಾಗಿ ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ ವೇಳೆ ಕಡತ ಗ್ರಾಮಲೆಕ್ಕಿಗನ ಕೈಸೇರಿದ್ದು, ಆತನ ಕರ್ತವ್ಯಪ್ರಜ್ಞೆಯಿಂದ ಪ್ರಕರಣ ಬೆಳಕಿಗೆ ಬಂದಿದ್ದು, ಭೂ ಮಾಲೀಕರ ಕೋಟ್ಯಾಂತರ ಬೆಲೆ ಬಾಳುವ ಆಸ್ತಿ ಅವರಲ್ಲೇ ಉಳಿಯುವಂತಾಗಿದೆ.

ಈ ಪ್ರಕರಣದಲ್ಲಿ ಮೈಸೂರು ಪೂರ್ವ ಉಪ ನೋಂದಣಾಧಿಕಾರಿಗಳ ಕಚೇರಿಯ ಹಿರಿಯ ಉಪ ನೋಂದಣಾಧಿಕಾರಿ ಹೆಚ್.ಜಿ. ನಾಗರಾಜು ಅವರೇ ಮೈಸೂರು ದಕ್ಷಿಣ (ಗ್ರಾಮಾಂತರ) ಠಾಣೆಗೆ ದೂರು ಸಲ್ಲಿಸಿದ್ದು, ಅದರನ್ವಯ ಮೈಸೂರಿನ ಸಾತಗಳ್ಳಿ ನೆಹರು ನಗರದ ಉಮೇರಾ ಖಾನಂ (47, ದಾನಪತ್ರ ಬರೆದುಕೊಟ್ಟವಳು). ಆಕೆಯ ಪುತ್ರಿ ಎಂದು ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನಮೂದಾಗಿರುವ ನೆಹರು ನಗರದ ಸಲ್ಮಾ ಸುಲ್ತಾನ (24, ದಾನಪತ್ರ ಬರೆಸಿಕೊಂಡಾಕೆ), ಸಾಕ್ಷಿದಾರರಾದ ಗೌಸಿಯಾನಗರದ ಸಯ್ಯಾದ್ ಇರ್ಫಾನ್, ಅಕ್ರಂ ಮತ್ತು ಜೋಹರ್ ಆಲಂ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 319(2), 318(4), 336(2), 336(3), 340, ರೆಡ್‌ವಿತ್ 3(5)ರಡಿ ಪ್ರಕರಣ ದಾಖಲಾಗಿದೆ.

ವಿವರ: ಮೈಸೂರಿನ ಗಾಯಿತ್ರಿಪುರಂ ಮಹದೇವಪುರ ಮುಖ್ಯ ರಸ್ತೆಯ ನಿವಾಸಿ ಫರ್ವೀಜ್ ಖಾನ್ ಎಂಬುವರ ಪತ್ನಿ ಉಮೇರಾ ಖಾನಂ

■ 6ನೇ ಪುಟಕ್ಕೆ



ಉಮೇರಾ ಖಾನಂ



ಅಜೀಂ ಖಾನ್



ಉಮೇರಾ ಬಾನು

ಆಧಾರ್ ಸೀಡಿಂಗ್ ಮಾಡಿಸದಿದ್ದರೆ ಆಸ್ತಿಗಳನ್ನು ಅಕ್ರಮವಾಗಿ ಪರಭಾರೆ ಮಾಡಲು ಸಾಧ್ಯವಾಗುತ್ತದೆ. ಆಸ್ತಿಗೆ ಆಧಾರ್ ಸೀಡಿಂಗ್ ಮಾಡಿದ್ದರೆ, ನೋಂದಣಿ ವೇಳೆ ಆಸ್ತಿ ಮಾಲೀಕರ ಮೊಬೈಲ್‌ಗೆ ಓಟಿಪಿ ಹೋಗುತ್ತದೆ. ಆ ಸಂಖ್ಯೆಯನ್ನು ನಮೂದಿಸಿದರೆ ಮಾತ್ರ ನೋಂದಣಾ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಈಗ ಎಫ್‌ಐಆರ್ ಆಗಿರುವ ಪ್ರಕರಣದಲ್ಲಿ ಆಸ್ತಿಗೆ ಆಧಾರ್ ಸೀಡಿಂಗ್ ಮಾಡಿಸಿರಲಿಲ್ಲ.
- ಮಹೇಶ್, ತಹಶೀಲ್ದಾರ್, ಮೈಸೂರು ತಾಲೂಕು.

ನಕಲಿ ಆಧಾರ್ ಕಾರ್ಡ್, ಪಾನ್ ಕಾರ್ಡ್ ಬಳಸಿ ತಮ್ಮ ಜಮೀನನ್ನು ಬೇರೊಬ್ಬ ಮಹಿಳೆ ಆಕೆಯ ಪುತ್ರಿ ಹೆಸರಿಗೆ ದಾನಪತ್ರ ನೋಂದಣಿ ಮಾಡಿಸಿದ್ದಾಳೆ ಎಂದು ಉಮೇರಾ ಖಾನಂ ದೂರು ಸಲ್ಲಿಸಿದಾಗ ಪರಿಶೀಲನೆ ನಡೆಸಿದ ವೇಳೆ 'ಉಮೇರಾ ಬಾನು' ಎಂಬ ಹೆಸರಿನ ಆಧಾರ್ ಕಾರ್ಡ್ ಜೆರಾಕ್ಸ್ ಮಾಡಿಸಿ 'ಬಾನು' ಎಂಬುದನ್ನು 'ಖಾನಂ' ಎಂದು ತಿದ್ದಿರುವುದು ಗೊತ್ತಾಗಿದೆ. ಈ ಪ್ರಕರಣದಲ್ಲಿ ರಮ್ಮನಹಳ್ಳಿ ಗ್ರಾಮ ಸಹಾಯಕರಾದ ಅಜೀಂ ಖಾನ್ ಅವರು ಕರ್ತವ್ಯಪ್ರಜ್ಞೆ ಮೆರೆದಿದ್ದರಿಂದ ವಂಚನೆ ಬೆಳಕಿಗೆ ಬಂದಿದೆ. ಒಂದು ವೇಳೆ ಅವರು ಉದಾಸೀನತೆಯಿಂದ ಖಾತೆ ಮಾಡಿಸಿಕೊಟ್ಟುಬಿಟ್ಟಿದ್ದರೆ ಆಸ್ತಿ ಬೇರೆಯವರ ಪಾಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಅಸಲಿ ಮಾಲೀಕರು ನ್ಯಾಯಾಲಯದ ಮೊರೆ ಹೋದಾಗ ನಮಗೂ ಸೇರಿದಂತೆ ಅಧಿಕಾರಿಗಳಿಗೆ ತೊಂದರೆಯಾಗುತ್ತಿತ್ತು. ಈ ಕುರಿತು ನಾನೇ ಪೊಲೀಸರಿಗೆ ದೂರು ನೀಡಿ ಕ್ರಿಮಿನಲ್ ಕೇಸ್ ಹಾಕಿದ್ದೇನೆ. ಹಾಲಿ ನೋಂದಣಿ ಆಗಿರುವುದನ್ನು ನೋಂದಣಿ ಮಾಡಿಸಿದವರೇ ಬಂದು ರದ್ದುಪಡಿಸಬೇಕು. ಅಥವಾ ನ್ಯಾಯಾಲಯ ನಿರ್ದೇಶನ ನೀಡಿದರೆ ನಾವೇ ರದ್ದುಪಡಿಸುತ್ತೇವೆ. ಅಲ್ಲಿಯವರೆವಿಗೂ ಈ ನೋಂದಣಿಯು ಚಾಲ್ತಿಯಲ್ಲಿರುತ್ತದೆ. ಆದರೆ ಅದರ ಬಗ್ಗೆ ನಾವು ನಿಗಾ ವಹಿಸುತ್ತೇವೆ.



- ಹೆಚ್.ಜಿ.ನಾಗರಾಜು, ಹಿರಿಯ ಉಪ ನೋಂದಣಾಧಿಕಾರಿ(ಪೂರ್ವ).

ನಕ್ಕರೆ ಅದೇ ಸ್ವರ್ಗ

ಪತ್ರಕರ್ತ : ನಿಮ್ಮ ಸಾಧನೆ ಬಗ್ಗೆ ಎಲ್ಲರಿಗೂ ಖುಷಿ ಇದೆ. ಎಲ್ಲರೂ ನಿಮ್ಮನ್ನು ಭಾರತ ಮಾತೆಯ ಹೆಮ್ಮೆಯ ಪುತ್ರಿ ಅನ್ನುತ್ತಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯ?

ಸಿನಿಮಾ ನಟಿ : ಈ ಮಾತನ್ನು ನಾನು ಒಪ್ಪೋದಿಲ್ಲ. ನಾನು ನಮ್ಮಪ್ಪನ ಪುತ್ರಿ!

ಮೈಸೂರು ಮಿತ್ರ

ಶುಕ್ರವಾರ, 11 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೂರು ಮನಸ್ಸುಗಳ ನೋಯಿಸಿ, ಹಚ್ಚಿದರೇನು ದೇವರ ಮುಂದೆ ದೀಪ!
ತಡೆಯುವುದೇನು ಅದು ನೊಂದ ಮನಸ್ಸುಗಳು ಹಾಕುವ ಶಾಪ...!!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿಂದಿನದನ್ನು ನೆನೆದು ಹಿತ್ತಲಲ್ಲಿ ಕುಳಿತು ಅತ್ತಂತೆ.

ನಿಮ್ಮ ಪತ್ರಗಳು

■ ಶ್ರೀ ನಾದಬ್ರಹ್ಮ ಸಂಗೀತ ಸಭಾ ನವೀಕರಣ ಮಾಡುವುದು ಒಳ್ಳೆಯದು



ಮಾನ್ಯರೆ,

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಶ್ರೀ ನಾದಬ್ರಹ್ಮ ಸಂಗೀತ ಸಭಾದಲ್ಲಿ ಇತ್ತೀಚೆಗೆ ವಾರದಲ್ಲಿ ಮೂರ್ನಾಲ್ಕು ದಿನ ಸಂಗೀತ ಕಾರ್ಯಕ್ರಮಗಳು ಮತ್ತು ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವುದು ಹಿರಿಯ ನಾಗರಿಕರು ಮತ್ತು ಸಂಗೀತ ಪ್ರಿಯರಿಗೆ ಒಂದು ರೀತಿಯ ಸಂತೋಷ ತರುವ ಸಂಗತಿ. ಸಂಜೆ ವೇಳೆ ಕೆಲವು ಸಂಗೀತ ಕಾರ್ಯಕ್ರಮಗಳು ನಡೆಯುವ ದಿನಗಳಲ್ಲಿ ಇದು ನಗರದ ಮಧ್ಯಭಾಗದಲ್ಲಿರುವುದರಿಂದ ಇಡೀ ಸಭಾಂಗಣವೇ ತುಂಬಿ ಹೋಗಿರುತ್ತದೆ. ಹಿರಿಯ ನಾಗರಿಕರಂತೂ ಸಂಜೆ ವೇಳೆ ಬೇಸರ ಕಳೆಯಲು ಇಲ್ಲಿಗೆ ಬರುತ್ತಾರೆ.

ಆದರೆ ಸಭಾಂಗಣದಲ್ಲಿ ಆಸನಗಳೆಲ್ಲಾ ಮುರಿದು ದುಸ್ಥಿತಿಯಲ್ಲಿವೆ. ಇರುವ ಆಸನಗಳು ಕುಳಿತುಕೊಳ್ಳಲು ಸೂಕ್ತವಾಗಿಲ್ಲದೆ ಇರುವುದರಿಂದ ಇಲ್ಲಿ ನಡೆಯುವ ಕಾರ್ಯಕ್ರಮವನ್ನು ಕಷ್ಟಪಟ್ಟು ಪ್ರೇಕ್ಷಕರು ವೀಕ್ಷಿಸುವಂತಾಗಿದೆ. ಈ ಕಾರಣಕ್ಕಾಗಿಯೇ ಹಲವು ಹಿರಿಯ ನಾಗರಿಕರು ಕಾರ್ಯಕ್ರಮ ನಡೆಯುವ ಮಧ್ಯದಲ್ಲೇ ಎದ್ದು ಹೋಗುತ್ತಾರೆ. ಈ ಸಂಗೀತ ಸಭಾ ಭವನವನ್ನು ನಿರ್ಮಾಣ ಮಾಡಿ ಹಲವು ವರ್ಷಗಳಾಗಿದ್ದು, ಸುಣ್ಣ – ಬಣ್ಣ ಕಂಡು ಬಹಳ ವರ್ಷಗಳೇ ಕಳೆದಿವೆ.

ಆಡಳಿತ ಮಂಡಳಿಯು ಈ ಸಂಗೀತ ಭವನವನ್ನು ನವೀಕರಣ ಮಾಡಿ ಪ್ರೇಕ್ಷಕರು ಕುಳಿತುಕೊಳ್ಳಲು ಒಳ್ಳೆಯ ಆಸನ ವ್ಯವಸ್ಥೆ ಮಾಡಿದರೆ ಹಿರಿಯ ನಾಗರಿಕರಿಗೂ ಅನುಕೂಲವಾಗುತ್ತದೆ. ಹೆಚ್ಚು ಹೆಚ್ಚು ಸಂಗೀತ ಕಾರ್ಯಕ್ರಮಗಳು ನಡೆಯುತ್ತವೆ. ಈ ಭಾಗದ ಅತ್ಯಂತ ಕ್ರಿಯಾಶೀಲ ಶಾಸಕರಾದ ಶ್ರೀವತ್ಸ ಅವರು ತಮ್ಮ ಕ್ಷೇತ್ರಾಭಿವೃದ್ಧಿ ಯೋಜನೆಯಡಿ ಈ ಭವನವನ್ನು ನವೀಕರಣ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಕೊಳ್ಳೇಗಾಲ–ತಮಿಳುನಾಡು ಮಾರ್ಗದ ರಸ್ತೆ ಶೀಘ್ರ ರಿಪೇರಿ ಅಗತ್ಯ

ಮಾನ್ಯರೆ,

ಮೈಸೂರಿನಿಂದ ತಮಿಳುನಾಡಿನ ಹಲವು ಭಾಗಗಳಿಗೆ ಚಾಮರಾಜನಗರದ ಮೂಲಕ ನೂರಾರು ವಾಹನಗಳು ಚಲಿಸುತ್ತಿದ್ದು, ವನ್ಯ ಪ್ರಾಣಿಗಳ ರಕ್ಷಣೆ ಹಾಗೂ ಸುರಕ್ಷತೆ ದೃಷ್ಟಿಯಿಂದ ರಾತ್ರಿ ವೇಳೆ ಈ ಮಾರ್ಗದಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ. ಇದಕ್ಕೆ ಪರ್ಯಾಯವಾಗಿ ತಿ.ನರಸೀಪುರ, ಕೊಳ್ಳೇಗಾಲ ಮಾರ್ಗದ ಮೂಲಕ ರಾತ್ರಿ ವೇಳೆ ವಾಹನಗಳು ಸಂಚರಿಸುತ್ತಿವೆ. ಆದರೆ ಈ ಮಾರ್ಗದ ರಸ್ತೆಗಳು ಅತ್ಯಂತ ದುಸ್ಥಿತಿಯಲ್ಲಿದ್ದು, ರಿಪೇರಿ ಕಾಣದೆ ಶೋಚನೀಯವಾಗಿವೆ. ಹಾಗಾಗಿ ವಾಹನ ಚಾಲಕರು ಹಾಗೂ ಪ್ರಯಾಣಿಕರು ತೀವ್ರ ಬವಣೆ ಅನುಭವಿಸುತ್ತಿದ್ದಾರೆ. ರಸ್ತೆ ತೆರಿಗೆ ಹಾಗೂ ಟೋಲ್ ರೂಪದಲ್ಲಿ ನೂರಾರು ಕೋಟಿ ವಸೂಲಿ ಮಾಡಿ ಲೂಟಿ ಹೊಡೆಯುತ್ತಿರುವ ಸರ್ಕಾರಕ್ಕೆ ಈ ಮಾರ್ಗದ ರಸ್ತೆ ಅಭಿವೃದ್ಧಿ ಕಾಣದಿರುವುದು ಅತ್ಯಂತ ವಿಷಾದನೀಯ. ರಾಜ್ಯದ ಲೋಕೋಪಯೋಗಿ ಸಚಿವರಾಗಲೀ, ಜಿಲ್ಲಾ ಉಸ್ತುವಾರಿ ಸಚಿವರಾಗಲೀ, ಕ್ಷೇತ್ರದ ಜನಪ್ರತಿನಿಧಿಗಳಾಗಲೀ ಈ ಮಾರ್ಗದ ರಸ್ತೆ ಅಭಿವೃದ್ಧಿ ಕೈಗೊಳ್ಳದಿರುವುದು ಆಶ್ಚರ್ಯಕರ. ಈ ಕೂಡಲೇ ಈ ವಿಷಯದಲ್ಲಿ ಗಮನಹರಿಸಿ ಈ ಮಾರ್ಗದ ರಸ್ತೆ ಅಭಿವೃದ್ಧಿ ಹಾಗೂ ರಿಪೇರಿ ಕಾಮಗಾರಿಗಳನ್ನು ಮಾಡಬೇಕೆಂದು ಈ ಮೂಲಕ ಮನವಿ.

–ಎಸ್. ರಂಗನಾಥ್, ರಾಮಾನುಜ ರಸ್ತೆ, ಮೈಸೂರು.

■ ಶೌಚಾಲಯ ತೆರೆಯದೆ ತೊಂದರೆ




ಮಾನ್ಯರೆ,

ಇದು ಮೈಸೂರು ಮಹಾರಾಣಿ ಕಾಲೇಜು, ಹುಣಸೂರು ರಸ್ತೆ ಬಸ್ ಸ್ಟಾಪ್ ಬಳಿ ಇರುವ ಶೌಚಾಲಯ. ಇದನ್ನು ನಿರ್ಮಾಣವಾದಂದಿನಿಂದ ಬಂದ್ ಮಾಡಲಾಗಿದೆ. ಇಲ್ಲಿಗೆ ಬಸ್ ಹತ್ತಲು ಬರುವ ಸಾವಿರಾರು ಪ್ರಯಾಣಿಕರಿಗೆ ತೊಂದರೆ ಆಗುತ್ತಿದೆ. ಪಾಲಿಕೆಯ ನಿರ್ಲಕ್ಷ್ಯಕ್ಕೆ ಇದೊಂದು ಉದಾಹರಣೆ. ಇದಕ್ಕೆ ಬೀಗ ಹಾಕಿ ಹಲವಾರು ತಿಂಗಳುಗಳೇ ಆಗಿದೆ. ಇದನ್ನು ನಿರ್ಮಿಸಿಯೂ ಸಾರ್ವಜನಿಕರಿಗೆ ಏನು ಪ್ರಯೋಜನ? ಜನರ ತೆರಿಗೆ ಹಣ ಈ ರೀತಿ ದುರುಪಯೋಗ ಆಗುವುದು ಎಷ್ಟು ಸರಿ? ಪಾಲಿಕೆ ಅಧಿಕಾರಿಗಳು ಉತ್ತರಿಸಲಿ.

–ವಿ. ಕೇಶವಮೂರ್ತಿ, ಜ್ಯೋತಿಷ್ಯ ವಿದ್ವಾಂಸ, ಮೈಸೂರು.

■ ಕಸ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಲಷ್ಕರ್ ಮೊಹಲ್ಲಾದ ಮೊಹಮ್ಮದ್ ಸೇಠ್ ಬ್ಲಾಕ್‌ನಲ್ಲಿ ಕಸದ ರಾಶಿ ಬಿದ್ದಿದೆ. ಬಹಳ ದಿನಗಳಿಂದ ಇದನ್ನು ತೆರವುಗೊಳಿಸುವ ಕಾರ್ಯ ನಗರಪಾಲಿಕೆ ಸಿಬ್ಬಂದಿ ಮಾಡುತ್ತಿಲ್ಲ. ಕಸದ ರಾಶಿಯಿಂದ ದುರ್ವಾಸನೆ ಬೀರುತ್ತಿದ್ದು, ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಈ ಸ್ಥಳ ಬೀದಿನಾಯಿಗಳು, ಹಾವು, ಹೆಗ್ಗಣ, ವಿಷ ಜಂತುಗಳ ಆವಾಸ ಸ್ಥಾನವಾಗಿದೆ. ಇಲ್ಲಿನ ನಿವಾಸಿಗಳು ಕಸವನ್ನು ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಾರೆ. ಇದರ ಬಗ್ಗೆ ಹಲವಾರು ಬಾರಿ ದೂರು ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಕಸ ತೆರವುಗೊಳಿಸಿ ಇಲ್ಲಿನ ನಿವಾಸಿಗಳು ನೆಮ್ಮದಿಯ ಬದುಕು ಸಾಗಿಸಲು ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಶಫೀ ಉಲ್ಲಾ, ಲಷ್ಕರ್ ಮೊಹಲ್ಲಾ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಆಧುನಿಕ ಜೀವನ ಶೈಲಿ ಮಾರಕವಾಗಬಾರದು...!

ಇತ್ತೀಚೆಗೆ ರಾಜ್ಯದಲ್ಲಿ ಹೃದಯಾಘಾತದಿಂದ ಸಾವಿಗೀಡಾಗುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಮೃತಪಟ್ಟವರಲ್ಲಿ ಕಿರು ವಯಸ್ಸಿನವರು, ಹದಿಹರೆಯದವರೂ ಸೇರಿರುವುದು ಆಶ್ಚರ್ಯದ ಜೊತೆಗೆ ಆಘಾತವನ್ನೂ ಉಂಟುಮಾಡುತ್ತಿದೆ. ಇದರ ಕಾರಣಗಳ ಪರಿಶೀಲನೆಗೆ ಮೊದಲೇ ಇದು ಕೊರೊನಾ ಲಸಿಕೆಯ ಪ್ರಭಾವದಿಂದ ಆಗುತ್ತಿರುವುದು ಎಂದು ರಾಜ್ಯದ ಮುಖ್ಯಸ್ಥರು ನೀಡಿದ ಹೇಳಿಕೆ ಸರಿಯಲ್ಲ ಎಂದು ನಂತರದ ಸಂಶೋಧನಾ ವರದಿಗಳು ತಿಳಿಸಿವೆ. ಇಲ್ಲಿಯೂ ರಾಜಕಾರಣ ನುಸುಳಿದ್ದು ಬೇಸರದ ಸಂಗತಿ. ಕೊರೊನಾ ಲಸಿಕೆ ನೀಡಿದ್ದು ಕೇಂದ್ರ ಸರ್ಕಾರ. ಆದ್ದರಿಂದ ಈ ಸಾವುಗಳ ಜವಾಬ್ದಾರಿಯೂ ಕೇಂದ್ರದ್ದೇ ಎಂದು ದೂರುವ ದುರಾಲೋಚನೆ ಬೇಸರ ಮೂಡಿಸಿತು. ನಂತರದ ಸಂಶೋಧನೆಗಳು ಹಲವು ರೀತಿಯ ವರದಿ ನೀಡುತ್ತಿವೆ. ಅವೆಲ್ಲದರಲ್ಲೂ ಇದಕ್ಕೆ ಕೊರೊನಾ ಲಸಿಕೆ ಕಾರಣವಲ್ಲ ಎಂದು ಹೇಳಿ, ಇತರೆ ಕಾರಣಗಳನ್ನು ತಿಳಿಸಲಾಗುತ್ತಿದೆ.

ಇದನ್ನು ಸ್ವಲ್ಪ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಏಕೆಂದರೆ ದೇಶದ ಶೇ.90ಕ್ಕಿಂತ ಹೆಚ್ಚಿನ ಮಂದಿ ಕೊರೊನಾ ಸಮಯದಲ್ಲಿ ಲಸಿಕೆ ಪಡೆದಿದ್ದಾರೆ. ಅದರಿಂದ ಜೀವವನ್ನೂ ಉಳಿಸಿಕೊಂಡಿದ್ದಾರೆ. ಅಲ್ಲದೆ ಅನೇಕ ದೇಶಗಳು ಭಾರತದ ಲಸಿಕೆ ಪಡೆದು ತಮ್ಮ ನಾಗರಿಕರಿಗೆ ನೀಡಿವೆ. ಇಂತಹ ಸಮಯದಲ್ಲಿ ಆ ಲಸಿಕೆಯ ಕುರಿತಾದ ಅಪಸ್ವರ ಅನೇಕರನ್ನು ಚಿಂತೆಗೆ ದೂಡಿದ್ದಂತೂ ನಿಜ. ನಾವು ಇಂದು ಸುಳ್ಳು ಸುದ್ದಿಗಳಿಗೆ ಹೆಚ್ಚು ಮನ್ನಣೆ ನೀಡುತ್ತಿದ್ದೇವೆ. ಇದೂ ನಿಜ ಎಂದಾಗಿದ್ದರೆ, ಅನೇಕರು ಮಾನಸಿಕವಾಗಿ ಜರ್ಜರಿತರಾಗುತ್ತಿದ್ದರು. ಆ ಆತಂಕ ಅನೇಕರ ಪ್ರಾಣವನ್ನೂ ಬಲಿ ಪಡೆಯುತ್ತಿತ್ತು.

ಈ ಬಗ್ಗೆ ಪರಿಶೀಲಿಸಿದ ವರದಿಯಲ್ಲಿ ಎರಡು ಅಂಶಗಳು ಕಂಡುಬಂದಿವೆ. ಒಂದು ಕೊರೊನಾಪೀಡಿತರು ಆ ಸಮಯದಲ್ಲಿ ಬೇಡವಾದರೂ ಅನೇಕ ಔಷಧಗಳನ್ನು ಸೇವಿಸಿರುವುದು ಒಂದು ಕಾರಣ ಎಂದರೆ, ಮತ್ತೊಂದು ನಮ್ಮಲ್ಲಿ ದೈಹಿಕ ಚಟುವಟಿಕೆ ಕಡಿಮೆಯಾಗುತ್ತಿರುವುದು. ವ್ಯಾಯಾಮ, ನಡಿಗೆ ಇತ್ಯಾದಿಗಳನ್ನು ಮರೆತಿರುವುದು ಸಹ ಕಾರಣ. ಇದು ನಮಗೆ ಗೊತ್ತಿಲ್ಲದ ಸಂಗತಿ ಏನಲ್ಲ. ಆದರೆ ಒಂದು ರೀತಿಯ ಕಡೆಗಣಿಸುವ ಮನೋಭಾವ ಹಾಗೂ ಮುಂದೆ ಏನಾದರೂ ಆರೋಗ್ಯ ತಪ್ಪಿದರೆ ಆಸ್ಪತ್ರೆಗೆ ಸೇರುವುದು, ಕೆಲವು ಮಾತ್ರೆಗಳನ್ನು ತೆಗೆದುಕೊಂಡರಾಯಿತು ಎಂಬ ತಾತ್ಸಾರ ಮನೋಭಾವ ಇದಕ್ಕೆ ಕಾರಣವಾಗಿ ಕಂಡುಬರುತ್ತದೆ.

ಇಂದು ವೈದ್ಯಕೀಯ ಲೋಕದಲ್ಲಿ ಕೇಳಿಬರುವ ಮಾತೆಂದರೆ; ಒಂದು ಔಷಧವನ್ನು ಒಂದು ಖಾಯಿಲೆಗೆ ಎಂದು ನೀಡಿ ಅದನ್ನು ಗುಣಪಡಿಸಬಹುದು. ಆದರೆ ಅದರಿಂದ ಆಗುವ ಅಡ್ಡ ಪರಿಣಾಮಗಳನ್ನು ತಡೆಯಲು ಸಾಧ್ಯವಿಲ್ಲ ಎಂಬುದು. ಇತ್ತೀಚೆಗೆ ಭೇಟಿಯಾದ ಒಬ್ಬರು ಹೇಳಿದ್ದು, ನಾನು ಸ್ವಲ್ಪ ಮೈಕೈ ನೋವು ಕಾಣಿಸಿಕೊಂಡರೆ, ಸ್ವಲ್ಪ ಜ್ವರ ಬರುವ ಸೂಚನೆ ಕಂಡ ಕೂಡಲೇ ಡೋಲೋ ಮಾತ್ರೆ ತೆಗೆದುಕೊಳ್ಳುತ್ತೇನೆ. ಅದರಿಂದ ಜ್ವರ ಬರುವುದಿಲ್ಲ ಹಾಗೂ ಮಾತ್ರೆ ನುಂಗಿದ ನಂತರ ನಿದ್ರೆ ಬರುತ್ತದೆ. ಎದ್ದಾಗ ಮೈಕೈ ನೋವು ಕಡಿಮೆ ಎನ್ನಿಸುತ್ತದೆ. ಆದರೆ ಇತ್ತೀಚೆಗೆ ನನಗೆ ಬೇರೆ ಬೇರೆ ಸಮಸ್ಯೆ ಕಂಡುಬರುತ್ತಿದೆ. ಇದಕ್ಕೆ ಕಾರಣ ನಾನು ಯಾವ ವೈದ್ಯರನ್ನೂ ಸಂಪರ್ಕಿಸದೆ ಮಾತ್ರೆ ನುಂಗುತ್ತಿದ್ದುದೇ ಆಗಿರಬಹುದು. ಈಗ ನನಗೆ ಒಂದು ರೀತಿಯ ಆಲಸ್ಯ ಹಾಗೂ ಮರೆವು ಜಾಸ್ತಿಯಾಗುತ್ತಿದೆ. ಬಹುಶಃ ಇದು ನಾನು ವಿವೇಚನೆ ಇಲ್ಲದೆ ತೆಗೆದುಕೊಂಡ ಮಾತ್ರೆಗಳ ಪರಿಣಾಮವೂ ಇರಬಹುದು ಎನಿಸುತ್ತದೆ ಎಂದು ಹೇಳಿದರು.

ಇದು ಒಬ್ಬರ ವಿಷಯವಲ್ಲ. ಮಕ್ಕಳು ಸ್ವಲ್ಪ ಕೆಮ್ಮಿದರೆ, ಅವರ ಮೈ ಸ್ವಲ್ಪ ಬಿಸಿಯಾಗುತ್ತಿದೆ ಎಂದ ಕೂಡಲೇ ಪೋಷಕರು ಮಕ್ಕಳಿಗೆ ಸಿರಪ್ ಕುಡಿಸುವುದು, ಮಾತ್ರೆ ನುಂಗಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಅದು ಅವರಿಗೆ ತಪ್ಪು ಎನ್ನಿಸುವುದೇ ಇಲ್ಲ. ಆ ಸಿರಪ್, ಮಾತ್ರೆಗಳೂ ವೈದ್ಯರು ಸೂಚಿಸಿದ್ದಲ್ಲ. ಅದು ಸ್ನೇಹಿತರು, ಅಕ್ಕಪಕ್ಕದವರು ಹೇಳಿದ್ದು. ಅದು ಸರಿಯೇ, ತಪ್ಪೇ ಎಂದೂ ವಿವೇಚಿಸದೆ ಮಕ್ಕಳಿಗೆ ಅವನ್ನು ನೀಡುತ್ತಿದ್ದೇವೆ. ಇಂತಹ ಮಕ್ಕಳೇ ಮುಂದೆ ಅನೇಕ ಆರೋಗ್ಯದ ಸಮಸ್ಯೆಗಳಿಗೆ ತುತ್ತಾಗುತ್ತಿರುವುದು. ಒಬ್ಬರು ಆಯುರ್ವೇದ ವೈದ್ಯರ ಹೇಳಿಕೆ ಏನೆಂದರೆ, ನಿಮಗೆ ಜ್ವರ ಬಂದರೆ ಸಂತೋಷ ಪಡಿ. ನಿಮ್ಮ ದೇಹದಲ್ಲಿದ್ದ ಹೆಚ್ಚಿನ ಉಷ್ಣಾಂಶ ಹೊರಹೋಗಲು ಅದು ಉತ್ತಮ ಸಾಧನ. ಅದನ್ನು ನೀವು ಮಾತ್ರೆಗಳಿಂದ ಮುಚ್ಚಿಡಬಾರದು. ಅದು ಒಂದು ನೈಸರ್ಗಿಕ ಪ್ರಕ್ರಿಯೆ. ದೇಹದಲ್ಲಿ ಉಷ್ಣಾಂಶ ಏರಿಕೆಯಾದಾಗ ಅದು ಹೊರಹೋಗಲು ಬಿಡಬೇಕು. ಜ್ವರ ಬಂದ ನಂತರ ನೀವು ಮಾತ್ರೆಗಳನ್ನು ತೆಗೆದುಕೊಳ್ಳದಿದ್ದರೂ ಅದು ಮೂರ್ನಾಲ್ಕು ದಿನಗಳಲ್ಲಿ ಕಡಿಮೆಯಾಗುತ್ತದೆ.



> **ನಮಗೆ ನಾವೇ ಮೋಸ ಮಾಡಿಕೊಂಡು ಆಧುನಿಕತೆಯ ಹೆಸರಿನಲ್ಲಿ ನಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ಅದರ ಪ್ರತಿಫಲವೇ ಈಗಿನ ಆಧುನಿಕ ಖಾಯಿಲೆಗಳು, ಇತ್ತೀಚಿನ ಹೃದಯಾಘಾತಗಳು. ನಮ್ಮ ದೇಹವನ್ನು ಸೂಕ್ಷ್ಮ ಮಾಡಿಕೊಳ್ಳಬಾರದು. ಅದನ್ನು ದಂಡಿಸಿ ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಹಾಗೆ ಮಾಡುವುದು ನಮ್ಮ ಕೈಯಲ್ಲೇ ಇದೆ.**

ಮಾತ್ರೆಗಳು ನಂತರದ ಸುಸ್ತು ಮುಂತಾದ ಅಡ್ಡ ಪರಿಣಾಮಗಳಿಗೆ ಕಾರಣವಾಗುತ್ತದೆ ಎಂದು. ಬೇಡದ್ದನ್ನು ತಿಂದು ಅಜೀರ್ಣವಾಗಿ ಮಾತ್ರೆ ಸೇವಿಸುವುದಕ್ಕಿಂತ ಬೇಡದ್ದನ್ನು ಸೇವಿಸದಿರುವುದು ಬುದ್ಧಿವಂತಿಕೆ ಎನ್ನಿಸುತ್ತದೆ.

ಇತ್ತೀಚಿನ ಹೃದಯಾಘಾತ ಪ್ರಕರಣ ರಾಜ್ಯದ ಯಾವುದೋ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ. ಇಡೀ ರಾಜ್ಯದಲ್ಲಿ/ದೇಶದಲ್ಲಿ ಅಲ್ಲಲ್ಲಿ ಕಂಡುಬರುತ್ತಿದೆ. ಬೇಸರದ ಸಂಗತಿ ಚಿಕ್ಕ ವಯಸ್ಸಿನವರು ಇದಕ್ಕೆ ಬಲಿಯಾಗುತ್ತಿರುವುದು. ಈ ಹಿಂದೆ ಇಂತಹ ಹೃದಯಾಘಾತದ ಬಗ್ಗೆ ನಾವು ಕೇಳುತ್ತಿದ್ದುದು ಅಲ್ಲಲ್ಲಿ ಮಾತ್ರ. ಅದೂ ಸಾಮಾನ್ಯವಾಗಿ ವಯಸ್ಸಾದವರು ಹೃದಯಾಘಾತಕ್ಕ ಒಳಗಾಗುತ್ತಾರೆ ಎಂದು ಕೇಳಿದ್ದೆವು. ಆದರೆ ಕಳೆದ ಮೂರ್ನಾಲ್ಕು ದಶಕಗಳಿಂದ ಎಲ್ಲಾ ವಯೋಮಾನದವರು, ಅದರಲ್ಲೂ ಮಧ್ಯ ವಯಸ್ಕರು ಇದಕ್ಕೆ ಬಲಿಯಾಗುತ್ತಿದ್ದಾರೆ ಎಂದು ವರದಿಗಳಿಂದ ತಿಳಿಯುತ್ತಿತ್ತು. ಆದರೆ ಈಗ ಕಿರಿ ವಯಸ್ಸಿನವರು ಇದಕ್ಕೆ ತುತ್ತಾಗುತ್ತಿದ್ದಾರೆ ಎಂದಾಗ ಗಾಬರಿಯಾಗುತ್ತದೆ. ಅದರಲ್ಲೂ ಒಂದು ವರದಿಯಲ್ಲಿ ಒಬ್ಬ ಯುವ ರೈತ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ತೀವ್ರ ಹೃದಯಾಘಾತಕ್ಕೆ ಒಳಗಾಗಿ ಮೃತನಾದ ಎಂಬ ಸುದ್ದಿ ಓದಿದಾಗ. ಇದರ ವಿಶ್ಲೇಷಣೆ ಅಷ್ಟು ಸರಳವಲ್ಲ ಎನ್ನಿಸುತ್ತದೆ. ಅದರಲ್ಲೂ ಮುಖ್ಯವಾಗಿ ನಮ್ಮ ಆಹಾರ ಹಾಗೂ ಜೀವನ ಶೈಲಿ ಇದಕ್ಕೆ ಬಹುತೇಕ ಕಾರಣ ಎಂಬುದು ಕಂಡುಬರುತ್ತಿದೆ. ಆಹಾರದಲ್ಲಿ ನಿಯಮ ಅನುಸರಿಸದೆ ಜಿಮ್ಮುಗಳಿಗೆ ಹೋಗಿ ವ್ಯಾಯಾಮ ಮಾಡುವವರು ತೀವ್ರವಾದ ಹೃದಯಾಘಾತಕ್ಕೆ ತುತ್ತಾಗುತ್ತಿರುವ ಹಲವು ಪ್ರಕರಣಗಳು ಕಂಡುಬರುತ್ತಿವೆ. ಈಗ ಎಚ್ಚೆತ್ತುಕೊಳ್ಳುವ ಸಮಯ ಬಂದಿದೆ ಎನ್ನಿಸುತ್ತದೆ. ನಮ್ಮಲ್ಲಿ ಇಂದಿಗೂ ಸತ್ತವರನ್ನು ಬದುಕಿಸುವ ಯಾವ ಅಸ್ತ್ರಗಳೂ ಕಂಡುಬರುವುದಿಲ್ಲವಾದ್ದರಿಂದ ಸಾಯದಂತೆ ಏನೆಲ್ಲಾ ಎಚ್ಚರ ವಹಿಸಬೇಕು ಎಂಬ ಬಗ್ಗೆ ಚಿಂತನೆ ಅವಶ್ಯ ಎನ್ನಿಸುತ್ತದೆ.

ಇಲ್ಲೆಲ್ಲಾ ಮುಖ್ಯವಾಗಿ ನಾವು ಆಧುನಿಕ ಉಪಕರಣ ಉಪಯೋಗಿಸುವುದು ಜಾಸ್ತಿಯಾದಂತೆ ನಮ್ಮ ದೇಹ ದುರ್ಬಲವಾಗುತ್ತಿದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಇಂದು ವೈದ್ಯರು ದಿನಕ್ಕೆ ಕೆಲವು ಸಮಯವಾದರೂ ಸೂರ್ಯನ ಬಿಸಿಲಿನಲ್ಲಿ ನಿಲ್ಲಿ ಎಂದು ಹೇಳುತ್ತಾರೆ. ಅಂದರೆ ಅಷ್ಟೊಂದು ಸಹಜವಾದ ಸೂರ್ಯನ ಬೆಳಕನ್ನೇ ನಾವು ತಪ್ಪಿಸಿಕೊಳ್ಳುತ್ತಿದ್ದೇವೆ. ಇಡೀ ವಿಶ್ವದ ಜನರಿಗೆ ಸುಲಭವಾಗಿ ಸಿಗುವ ಸೂರ್ಯನ ಕಿರಣವನ್ನೂ ನಾವು ನಿರ್ಲಕ್ಷಿಸಿದ್ದೇವೆ. ನೀವು ಯಾವ ವ್ಯಾಯಾಮ ಶಾಲೆಗೂ ಹೋಗುವುದು ಬೇಡ. ಬೆಳಗಿನ ಹಾಗೂ ಸಂಜೆಯ ಸಮಯದಲ್ಲಿ ನಡಿಗೆ ಮಾಡಿ ಎಂಬುದನ್ನೂ ಇಂದು ಹೇಳಿಕೊಡಬೇಕಾಗಿರುವುದು ದುರ್ದೈವದ ಸಂಗತಿ.

ನಾವು ಕಂಡುಹಿಡಿದಿರುವ ಆಧುನಿಕ ಉಪಕರಣಗಳು ನಮ್ಮ ಉಪಯೋಗಕ್ಕೆ ಎಂಬುದು ಸರಿ. ಆದರೆ ಅದು ಅನಿವಾರ್ಯ ಸಮಯದಲ್ಲಿ ಎಂಬುದನ್ನು ನಾವು ಮರೆತಿರುವುದೇ ಇಂದಿನ ಆರೋಗ್ಯದ ಸಮಸ್ಯೆಗಳಿಗೆ ಮೂಲ ಎನಿಸುತ್ತದೆ. ಇಂದಿನ ಮಕ್ಕಳು ಎಲ್ಲಿ ಆಟವಾಡುತ್ತಾರೆ ಎಂದರೆ, ಅದು ಕಂಪ್ಯೂಟರ್‌ನಲ್ಲಿ ಎಂದಂತೆ, ಎಲ್ಲಿ ಈಜುತ್ತಾರೆ ಎಂದರೆ ಮೊಬೈಲ್ ಅಪ್ಲಿಕೇಶನ್‌ಗಳಲ್ಲಿ ಎಂದು ಹೇಳುವಂತೆ ಆಗಿದೆ. ಮೊದಲಿಗೆ ಮಕ್ಕಳನ್ನು ಬಯಲಿನಲ್ಲಿ ಆಟವಾಡಲು ಬಿಡದಿರುವುದು ಸಮಸ್ಯೆಯ ಮೂಲ ಎನ್ನಿಸುತ್ತದೆ. ದೊಡ್ಡ ನಗರಗಳಲ್ಲಿ ಇಂದು ಆಟದ ಮೈದಾನಗಳೇ ಕಂಡುಬರುವುದಿಲ್ಲ. ಮಕ್ಕಳು ಎಲ್ಲಿ ಆಟವಾಡುವುದು ಎಂಬ ಸಮಸ್ಯೆ ಅನೇಕ ಪಾಲಕರದ್ದಾಗಿದೆ. ಆದರೆ ಇರುವ ಮೈದಾನಗಳನ್ನಾದರೂ ಎಷ್ಟು ಜನ ಉಪಯೋಗಿಸುತ್ತಾರೆ ಎಂಬುದು ಪ್ರಶ್ನೆಯೇ. ಈ ಹಿಂದೆ ಮಕ್ಕಳು ಮಣ್ಣಿನಲ್ಲಿ ಆಟವಾಡಿದಷ್ಟೂ ಅವರು ಗಟ್ಟಿಯಾಗುತ್ತಾರೆ, ಮಣ್ಣಿನಲ್ಲಿ ಆ ಗುಣವಿದೆ ಎಂದು ಹೇಳುತ್ತಿದ್ದರು. ಬಿದ್ದು ಗಾಯವಾದರೆ ಅದೇ ಮಣ್ಣನ್ನು ಗಾಯದ ಮೇಲೆ ಲೇಪಿಸಿ ಅದು ವಾಸಿಯಾಗುವಂತೆ ಮಾಡಲಾಗುತ್ತಿತ್ತು. ಇದನ್ನು ಹಿರಿಯರು ಹೇಳಿದ್ದು, ಮಕ್ಕಳಿಗೂ ಗೊತ್ತಿತ್ತು. ಹಾಗಾಗಿ ಮಣ್ಣಿನಲ್ಲಿ ನಿರ್ಭಿಡೆಯಿಂದ ಆಟವಾಡುತ್ತಿದ್ದರು. ಆದರೆ ಬೇಸರದ ಸಂಗತಿ ಎಂದರೆ ಅವರು ಈಗ ತಂದೆತಾಯಿಯಾದಾಗ ತಮ್ಮ ಮಕ್ಕಳಿಗೆ ಮಣ್ಣಿನಲ್ಲಿ ಆಟವಾಡಲು ಬಿಡುತ್ತಿಲ್ಲ.

ಇನ್ನು ನಮ್ಮ ಸದ್ಬಳಕೆಗಾಗಿ ಕಂಡುಹಿಡಿದ ವಾಹನಗಳೂ ಇಂದು ನಮಗೆ ಶತ್ರುವಾಗುತ್ತಿದೆ. ಅರ್ಧ ಕಿಲೋಮೀಟರಿಗೂ ಇಂದು ನಮಗೆ ವಾಹನ ಬೇಕು. ಇದರಿಂದ ನಡಿಗೆಯೇ ಮರೆಯಾಗುತ್ತಿದೆ. ಹಿಂದೆ ನಾವು ಚಿಕ್ಕವರಿದ್ದಾಗ ನಮಗೆ ಇದ್ದ ಅಮೂಲ್ಯವಾದ ವಾಹನ ಎಂದರೆ ಬೈಸಿಕಲ್ ಮಾತ್ರ. ಅದನ್ನು ಚಲಾಯಿಸಲೂ ದೈಹಿಕ ಶ್ರಮ ಬೇಕಾಗಿದ್ದರಿಂದ ಸೈಕಲ್ ಸವಾರಿ ಆರೋಗ್ಯಕ್ಕೆ ಪೂರಕ ಎಂಬಂತೆ ಆಗಿತ್ತು. ದಿನಕ್ಕೆ ಹತ್ತಾರು ಕಿಲೋಮೀಟರುಗಳನ್ನು ಸೈಕಲ್ಲುಗಳಲ್ಲಿ ಚಲಿಸುತ್ತಿದ್ದೆವು. ಕೆಲವೊಮ್ಮೆ ಊರಿಂದೂರಿಗೂ ಸೈಕಲ್ಲೇ ವಾಹನವಾಗಿತ್ತು. ಆದರೆ ಇಂದು ಬಂದ ಮೋಟಾರ್ ವಾಹನಗಳು ನಮ್ಮನ್ನು ದಾರಿ ತಪ್ಪಿಸಿವೆ. ಒಂದಷ್ಟು ದೂರವೂ ಕಾಲು ನಡಿಗೆಯಲ್ಲಿ ಸಾಗಲು ಮನಸ್ಸು ಒಪ್ಪುತ್ತಿಲ್ಲ. ಟಿವಿಗಳು ಬಂದ ನಂತರವಂತೂ ನಮ್ಮ ದೈಹಿಕ ಚಟುವಟಿಕೆ ಮತ್ತಷ್ಟು ಕುಗ್ಗಿತು. ದಿನದ ನಾಲ್ಕಾರು ಗಂಟೆ ಟಿವಿಗೆ ಅರ್ಪಣೆಯಾಗುತ್ತಿದೆ. ಇದರಿಂದ ನಮಗೆ ಸಮಯದ ನಷ್ಟದ ಜೊತೆಗೆ ದೇಹದಲ್ಲಿ ಬೊಜ್ಜು ಬೆಳೆಯಲು ಕಾರಣವಾಗುತ್ತಿದೆ. ಇದಕ್ಕೆ ನಾವು ಟಿವಿಯನ್ನು ಹೊಣೆಗಾರನಾಗಿ ಮಾಡಬಹುದೇ?

ಇತ್ತೀಚೆಗೆ ಸಿಕ್ಕ ಮಧ್ಯವಯಸ್ಕರೊಬ್ಬರು ತಮಗೆ ಈಗ ಕೈಬರಹ ಮಾಡಲಾಗುತ್ತಿಲ್ಲ. ನಾನು ಹಲವು ವರ್ಷಗಳಿಂದ ಕಂಪ್ಯೂಟರ್‌ನಲ್ಲೇ ಬರೆಯುವುದು. ಹಾಗಾಗಿ ಈಗ ಬರವಣಿಗೆ ಸಾಧ್ಯವಾಗುತ್ತಿಲ್ಲ. ಕೊನೆಗೆ ಬ್ಯಾಂಕುಗಳಿಗೆ ನೀಡುವ ಚೆಕ್ಕಿಗೂ ಸಹಿ ಮಾಡಲು ಸಾಧ್ಯವಾಗುತ್ತಿಲ್ಲ ಎಂದರು. ಕಂಪ್ಯೂಟರ್ ನಮ್ಮ ಬರವಣಿಗೆಯನ್ನು ಕಸಿಯಿತು ಎಂದು ಕಂಪ್ಯೂಟರನ್ನು ನಿಂದಿಸಲಾಗುವುದೇ? ನಮ್ಮ ನಡಿಗೆಯನ್ನು ವಾಹನ ಹಾಳುಮಾಡಿತು ಎಂದರೆ ನಂಬಲು ಸಾಧ್ಯವೇ? ನಾನು ಎಲ್ಲ ಪುಸ್ತಕವನ್ನೂ ಆನ್‌ಲೈನ್‌ನಲ್ಲಿ ಓದುತ್ತೇನೆ ಎನ್ನುವವರು ಏನನ್ನೂ ಓದದಿರುವಾಗ ಅದಕ್ಕೆ ಆನ್‌ಲೈನ್ ಕಾರಣ ಎನ್ನಲಾದೀತೆ?

ಮತ್ತೊಬ್ಬರು ಹಿರಿಯರ ಮಾತೆಂದರೆ ಹಿಂದೆ ನಾವು ಪತ್ರಗಳನ್ನು ಬರೆಯುತ್ತಾ ಒಬ್ಬರಿಗೊಬ್ಬರು ಹತ್ತಿರವಾಗಿದ್ದೆವು. ಇಂದು ಈ ಮೊಬೈಲ್ ಬಂದ ನಂತರ ಪತ್ರ ಬರೆಯುವುದು ತಪ್ಪಿಹೋಗಿದೆ. ಇದರಿಂದ ನನಗೆ ಆತ್ಮೀಯರ ಸಂಖ್ಯೆ ಕಡಿಮೆಯಾಗಿದೆ ಎಂದರು. ಕೈಯಲ್ಲಿ ಮೊಬೈಲ್ ಇದೆ. ಅದರಲ್ಲಿ ಇಷ್ಟದವರ ನಂಬರುಗಳೂ ಇದೆ. ಕ್ಷಣದಲ್ಲಿ ಅವರನ್ನು ಸಂಪರ್ಕಿಸಬಹುದು. ಆದರೆ ಇಂದು ಪ್ರತಿದಿನ ನಾವು ಎಷ್ಟು ಆತ್ಮೀಯರೊಡನೆ ಮಾತನಾಡುತ್ತಿದ್ದೇವೆ? ಎಂಬುದನ್ನು ಗಮನಿಸಿದಾಗ ಉತ್ತರ ಋಣಾತ್ಮಕವೇ ಹೊರತು ಧನಾತ್ಮಕವಾಗಿಲ್ಲ. ಮನೆಗಳಲ್ಲಿ ಫ್ಯಾನ್, ಎಸಿಗಳು ಬಂದ ನಂತರ ನಾವು ಮರಗಳ ಗಾಳಿಯನ್ನೇ ಮರೆಯುವಂತಾಗಿದೆ.

ಹೀಗೆ ನಮಗೆ ನಾವೇ ಮೋಸ ಮಾಡಿಕೊಂಡು ಆಧುನಿಕತೆಯ ಹೆಸರಿನಲ್ಲಿ ನಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ಅದರ ಪ್ರತಿಫಲವೇ ಈಗಿನ ಆಧುನಿಕ ಖಾಯಿಲೆಗಳು, ಇತ್ತೀಚಿನ ಹೃದಯಾಘಾತಗಳು. ನಮ್ಮ ದೇಹವನ್ನು ಸೂಕ್ಷ್ಮ ಮಾಡಿಕೊಳ್ಳಬಾರದು. ಅದನ್ನು ದಂಡಿಸಿ ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಹಾಗೆ ಮಾಡುವುದು ನಮ್ಮ ಕೈಯಲ್ಲೇ ಇದೆ.

ಮೈಸೂರು ವಿವಿ ಪರೀಕ್ಷಾ ಮೌಲ್ಯಮಾಪನದಲ್ಲಿ ಹೊಸ ಸುಧಾರಣೆ

ವಿವಿಯ 'ಮೌಲ್ಯ ಭವನ'ದಲ್ಲಿ ಸ್ನಾತಕೋತ್ತರ ಪರೀಕ್ಷೆಗೆ ಸಿಂಡಿಕೇಟ್ ಸದಸ್ಯರ ಪ್ರಶಂಸೆ




ಮೈಸೂರು, ಜು.10(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯ ಭವನದ ಒಂದೇ ಸೂರಿನಡಿ ಸ್ನಾತಕೋತ್ತರ ಪರೀಕ್ಷೆ ನಡೆಸುತ್ತಿರುವುದರಿಂದ ಆರ್ಥಿಕ ಹೊರೆ ತಪ್ಪುತ್ತದೆ. ಪರೀಕ್ಷಾ ಚಟುವಟಿಕೆಗಳಲ್ಲಿ ಸುಧಾರಣೆ ತರಲು ಸಾಧ್ಯವಾಗಲಿದೆ ಎಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಸಿಂಡಿಕೇಟ್ ಸದಸ್ಯರಾದ ಮಹದೇಶು, ಕ್ಯಾತನಹಳ್ಳಿ ನಾಗರಾಜು, ಗೋಕುಲ್ ಗೋವರ್ಧನ್, ಡಾ.ಶಿಲ್ಪ, ಡಾ.ನಟರಾಜ್ ಶಿವಣ್ಣ ಹಾಗೂ ಶಂಕರ್ ಅವರು ಪರೀಕ್ಷಾ ಹೊಸ ಸುಧಾರಣೆ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ. ಇದೂವರೆಗೆ ವಿಶ್ವವಿದ್ಯಾನಿಲಯದ ಆಯಾಯ ವಿಭಾಗಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿತ್ತು. ಆದರೆ ಈ ಸಾಲಿನಿಂದ ಮೈಸೂರು ವಿವಿಯ ಮೌಲ್ಯಭವನದಲ್ಲಿ ಪರೀಕ್ಷೆ ನಡೆಸುತ್ತಿರುವುದು ಪರೀಕ್ಷಾ ಚಟುವಟಿಕೆಗಳಲ್ಲಿ ಸುಧಾರಣೆ ತರಲು ಮುನ್ನುಡಿಯಾಗಿದೆ ಎಂದು ಹೇಳಿದ್ದಾರೆ.

ಈ ಮೊದಲು ಪ್ರತಿ ವಿಭಾಗಕ್ಕೆ ಪ್ರಶ್ನೆಪತ್ರಿಕೆ ತಲುಪಿಸಿ, ಪರೀಕ್ಷೆ ಮುಗಿದ ನಂತರ ಮತ್ತೆ ಉತ್ತರ ಪ್ರತಿಕೆಗಳನ್ನು ಮತ್ತೆ ವಾಪಸು ತರಲು ವಾಹನದ ಅವಶ್ಯಕತೆ ಇತ್ತು. ಇದರಿಂದ ಆರ್ಥಿಕವಾಗಿ ಹೊರೆಯಾಗುತ್ತಿತ್ತು. ಆದರೆ ಹೊಸ ಸುಧಾರಣೆಯಿಂದ ಆರ್ಥಿಕ ಹೊರೆ ತಪ್ಪಲಿದೆ ಎಂದು ವಿವಿ ಸಿಂಡಿಕೇಟ್ ಸದಸ್ಯರು ತಿಳಿಸಿದ್ದಾರೆ.

ವಿಶ್ವವಿದ್ಯಾನಿಲಯದ ಒಟ್ಟು 53 ವಿಭಾಗಗಳ ವಿದ್ಯಾರ್ಥಿಗಳು ಇಲ್ಲಿ ಒಟ್ಟಿಗೆ ಪರೀಕ್ಷೆ ಬರೆಯುವುದರಿಂದ ಶಿಸ್ತು ಬರಲಿದೆ. ಇಷ್ಟು ದಿನ ಮೌಲ್ಯ ಭವನದಲ್ಲಿ ಮಾಲ್ಯ ಮಾಪನ ಕಾರ್ಯ ಮಾತ್ರ ನಡೆಯುತ್ತಿತ್ತು. ಆದರೆ ಈಗ ಪರೀಕ್ಷೆ ಕೂಡ ನಡೆಯುತ್ತಿದೆ. ಇದರಿಂದ ಮೌಲ್ಯ ಭವನ ಪೂರ್ಣ ಪ್ರಮಾಣದಲ್ಲಿ ಸದ್ಬಳಕೆಯಾಗಲಿದೆ. ಇದಕ್ಕೆ ಕಾರಣರಾದ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ನಾಗರಾಜ್ ಸೇರಿದಂತೆ ಎಲ್ಲಾ ಅಧಿಕಾರಿಗಳ ಕಾರ್ಯದ ಬಗ್ಗೆ ವಿವಿ ಸಿಂಡಿಕೇಟ್ ಸದಸ್ಯರು ಮೆಚ್ಚುಗೆ ಸೂಚಿಸಿದ್ದಾರೆ.



ಯಡಿಯೂರಪ್ಪಗೆ ಅಭಿನಂದನೆ

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಗುರುಪೂರ್ಣಿಮೆ ಪ್ರಯುಕ್ತ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಅಭಿನಂದಿಸಿ, ಆಶೀರ್ವಾದ ಪಡೆದರು. ಈ ವೇಳೆ ಮಾಜಿ ಎಂಎಲ್‌ಸಿ ಅಣ್ಣಯ್ಯ, ಶಾಸಕರಾದ ಸಿಮೆಂಟ್ ಮಂಜುನಾಥ್, ಚಂದ್ರು ಲಮಾಣಿ ಇನ್ನಿತರರಿದ್ದರು.

ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ ನೂತನ ಅಧ್ಯಕ್ಷರಾಗಿ ಅಜ಼ೀಜ಼್ ಉಲ್ಲಾ ನೇಮಕ



ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ ನೂತನ ಅಧ್ಯಕ್ಷರಾಗಿ ನೇಮಕವಾದ ಅಜ಼ೀಜ಼್ ಉಲ್ಲಾರನ್ನು ಮಾಜಿ ಕಾರ್ಪೋರೇಟರ್ ಸುಹೇಲ್ ಬೇಗ್, ಇನ್ನಿತರರು ಹೂಗುಚ್ಛ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು, ಜು.10– ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ ನೂತನ ಅಧ್ಯಕ್ಷರಾಗಿ ಅಜ಼ೀಜ಼್ ಉಲ್ಲಾ (ಅಜ್ಜು) ಅಧಿಕಾರ ಸ್ವೀಕರಿಸಿದ್ದಾರೆ.

ಬೆಂಗಳೂರಿನ ಕರ್ನಾಟಕ ವಕ್ಫ್ ಬೋರ್ಡ್ ಸಂಸ್ಥೆಯು ಅಜೀಜುಲ್ಲಾ ಅಜ್ಜು ಅವರನ್ನು ಮುಂದಿನ ಮೂರು ವರ್ಷಗಳ ಅವಧಿಗೆ ಮೈಸೂರು ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ ನೂತನ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಇದರೊಂದಿಗೆ ಉಪಾಧ್ಯಕ್ಷರಾಗಿ ಎಸ್.ಎ. ರೆಹಮಾನ್ ಮತ್ತು ಮೀರ್ ಬಹಾವುದ್ದೀನ್, ಜ಼ಹೀರ್–ಉಲ್–ಹಕ್, ಸರ್ಫುದ್ದೀನ್, ಮೌಲಾನಾ ಸೈಯದ್ ಇಬ್ರಾಹಿಂ, ಖತೀಬ್–ಒ–ಇಮಾಮ್, ಸಮೀರ್, ನಸೀರುದ್ದೀನ್ ಬಾಬು, ಅಸ್ಗರ್ ಪಾಷ, ಅಬ್ದುಲ್ ಸಲಾಂ, ನಿಸಾರ್ ಅಹಮದ್, ಪಿ.ಅಮ್ಜದ್ ಪಾಷ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಸುಹೇಲ್ ಬೇಗ್, ಸಮೀರ್ ಉಲ್ಲಾ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಹೈಕೋರ್ಟ್‌ನಿಂದ ನೋಟಿಸ್ ಜಾರಿ

ಬೆಂಗಳೂರು, ಜು.10(ಬಿಎಲ್‌ಯು)– ಮುಡಾ ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ ಆರೋಪ ಕುರಿತ ಪ್ರಕರಣವನ್ನು ಸಿಬಿಐಗೆ ವಹಿಸುವ ಬಗ್ಗೆ ವಕಾಲತು ವಹಿಸದ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಹೈಕೋರ್ಟ್ ಇಂದು ನೋಟಿಸ್ ಜಾರಿ ಮಾಡಿದೆ.

ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಹಾಗೂ ನ್ಯಾಯಮೂರ್ತಿ ಸಿ.ಎಂ.ಜೋಷಿ ಅವರಿದ್ದ ವಿಭಾಗೀಯ ಪೀಠದಲ್ಲಿ ಇಂದು ಈ ವಿಚಾರದ ಬಗ್ಗೆ ವಿಚಾರಣೆ ನಡೆಯಿತು.

ಮುಡಾದಿಂದ ಅಕ್ರಮವಾಗಿ ನಿವೇಶನ ಮಂಜೂರಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತರು ನಡೆಸುತ್ತಿರುವ ವಿಚಾರಣೆಯಲ್ಲಿ ನನಗೆ ನಂಬಿಕೆಯಿಲ್ಲ. ಲೋಕಾಯುಕ್ತ ಅಧಿಕಾರಿಗಳನ್ನು ರಾಜ್ಯ ಸರ್ಕಾರ ನೇಮಕ ಮಾಡುವ ಹಿನ್ನೆಲೆಯಲ್ಲಿ ಅವರ ಮೇಲೆ ಸರ್ಕಾರ ಪ್ರಭಾವ ಬೀರುವ ಸಾಧ್ಯತೆ ಇದೆ. ಅದರಲ್ಲೂ ಈ ಪ್ರಕರಣದಲ್ಲಿ ಮೊದಲ ಆರೋಪಿ ಮುಖ್ಯಮಂತ್ರಿಗಳೇ ಆಗಿರುವ ಕಾರಣ ಪ್ರಭಾವ ಬೀರುವುದರಲ್ಲಿ ಸಂಶಯವಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ದೂರುದಾರ ಸ್ನೇಹ ಮಯಿ ಕೃಷ್ಣ ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದರು. ಈ ಸಂಬಂಧ ಸ್ನೇಹಮಯಿ ಕೃಷ್ಣ ಪರ ವಕೀಲ ವಸಂತಕುಮಾರ್ ಅವರು ವಾದ ಮಾಡಿ, ಲೋಕಾಯುಕ್ತರು ಯಾವ ರೀತಿ ನಿಷ್ಪಕ್ಷಪಾತ ತನಿಖೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ವಿವರಿಸಿದ್ದರು. ಈ ಹಿನ್ನೆಲೆಯಲ್ಲಿ ಇಂದು ಇದರ ವಿಚಾರಣೆ ನಡೆಯಿತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಸ್ವಾಮಿ ಹಾಗೂ ದೇವರಾಜು ಅವರು ಪರ ವಕಾಲತು ವಹಿಸಲಾಗಿದೆ. ಆದರೆ ಈ ತನಕ ಸಿದ್ದರಾಮಯ್ಯ ಪತ್ನಿ ಪಾರ್ವತಿ ಪರ ಯಾರೂ ವಕಾಲತು ವಹಿಸಿರಲಿಲ್ಲ.

ಈ ಹಿನ್ನೆಲೆ ವಕಾಲತು ವಹಿಸದಿರಲು ಕಾರಣವೇನು ಎಂದು ಹೈಕೋರ್ಟ್ ವಿಭಾಗೀಯ ಪೀಠವು ಇಂದು ಪಾರ್ವತಿ ಅವರಿಗೆ ನೋಟಿಸ್ ಜಾರಿ ಮಾಡಿ ಸೆಪ್ಟಂಬರ್ 4ಕ್ಕೆ ವಿಚಾರಣೆ ಮುಂದೂಡಿದೆ.



ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

WANTED INDUSTRIAL LAND

Required LAND FOR Purchase 20 to 30 Acres Industrial Converted close to Mysore City Centre

Contact: **9880414447**

Mail: **sitypropman@gmail.com**

ಹಕೋಬಾ ಕಂಪನಿಯ ಮಹಿಳೆಯರ ಉಡುಪುಗಳು ಭಾರಿ ರಿಯಾಯಿತಿ ಮಾರಾಟ 6 ದಿನಗಳು ಮಾತ್ರ

ಜುಲೈ 11, 12, 13, 14, 15 ಮತ್ತು 16, ಜುಲೈ 2025



SINCE 1960 hakoba

ನಿಮ್ಮ ಊಹೆಗೂ ನಿಲುಕದ ಎಂಬ್ರಾಯಿಡರಿ ಉತ್ಪನ್ನಗಳು

ಇದೀಗ ಹೊಸ ಸ್ಟಾಕ್‌ನೊಂದಿಗೆ ಮೈಸೂರಿನಲ್ಲಿ ಪ್ರದರ್ಶನ ಮತ್ತು ಮಾರಾಟ

ಹಕೋಬಾ ಮಹಿಳೆಯರ ಉಡುಪುಗಳು – ಚಿಕಾನ್ ಎಂಬ್ರಾಯಿಡರೀಸ್

- ಒಮ್ಮೆ ಪರೀಕ್ಷಿಸಿ ಎಕ್ಸ್‌ಪೋರ್ಟ್ ಡ್ರೆಸ್ ಮೆಟರಿಯಲ್ಸ್
- ಪಂಜಾಬಿ ಸೂಟ್ ಫ್ಯಾಬ್ರಿಕ್ಸ್ • ಸೀರೆಗಳು • ಆರ್ಗಾಂಡಿ ಸೀರೆ
- ವಾಯಿಲ್ ಸೀರೆ • ಟೆರ್ರೆನ್ ಸೀರೆ • ಶಿಫಾನ್ ಸೀರೆ • ತಸ್ಸಾ ಸೀರೆ
- ಸ್ವಿಸ್ ವಾಯಿಲ್ ಸೀರೆ • ರೆಡಿಮೆಡ್ ಪಲಾಜೋ ಪ್ಯಾಂಟ್
- ಕುರ್ತೀಸ್ • ಎಂಬ್ರಾಯಿಡರಿ ಲೆಗ್ಗಿಂಗ್ಸ್ ಮತ್ತು ದುಪ್ಪಟ್ಟಗಳ ಸಂಗ್ರಹ

ಭಾರಿ ರಿಯಾಯಿತಿ **50%** ರವರೆಗೆ

Scan to Follow us on: Shop online at : www.hakoba.in

Timing : 10 am to 8.30 pm Cards Accepted

ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಆಡಿಟೋರಿಯಂ ಹಾಲ್), ಜೆ.ಎಲ್.ಬಿ. ರಸ್ತೆ, ಮೈಸೂರು 05



ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ, ಮೈಸೂರು ತಾಲ್ಲೂಕು, ವರುಣ ಹೋಬಳಿ, ವರುಣ ಗ್ರಾಮದಲ್ಲಿ ವಾಸವಾಗಿರುವ ಶ್ರೀ ವಿ.ಎಸ್. ದೊಡ್ಡ ಬಸವರಾಜುರವರ ಮಗನಾದ ಸುಮಾರು 51 ವರ್ಷ ವಯಸ್ಸಿನ ಶ್ರೀ. ವರುಣ ಮಹೇಶ್ ರವರ ಇರಾದೆಯ ಮೇರೆಗೆ ಪ್ರಕಟಿಸುತ್ತಿರುವ ಈ ಸಾರ್ವಜನಿಕ ಪ್ರಕಟಣೆಯ ಕ್ರಮವೇನೆಂದರೆ,

ಆದಾಗಿ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ಎಲ್.ವಿ. ಚನ್ನವೀರಾಚಾರ್ ರವರ ಮಗನಾದ ಸುಮಾರು 68 ವರ್ಷ ವಯಸ್ಸಿನ ಶ್ರೀ ಪುರುಷೋತ್ತಮ್ ಎಲ್.ಸಿ. ರವರಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಈ ಬಗ್ಗೆ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರೂ ಹಕ್ಕು, ಅಧಿಕಾರ, ಹಿತಾಸಕ್ತಿ, ಹೆಣ್ಣು ಮಕ್ಕಳ ಭಾಗಾಂಶ, ಅಡಮಾನ, ಮೈನರ್ ಕ್ಲೈಮ್ಸ್ ಇತ್ಯಾದಿ ಇದಲ್ಲಿ, ಈ ಪ್ರಕಟಣೆ ಹೊರಡಿಸಿದ 7 ದಿನಗಳ ಒಳಗಾಗಿ ತಮ್ಮ ತಕರಾರನ್ನು ಲಿಖಿತ ರೂಪದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರುಗಳು ಇರುವುದಿಲ್ಲವೆಂದು ತಿಳಿದು ನಮ್ಮ ಕಕ್ಷಿದಾರರು ಸ್ವತ್ತಿನ ಸಂಬಂಧಿಸಿದಂತೆ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಬಾಧ್ಯರಾಗಿರುತ್ತಾರೆ. ಒಂದು ವೇಳೆ ನಿಗಧಿತ ಅವಧಿಯ ನಂತರ ಬರುವಂತಹ ಯಾವುದೇ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ನಂಜನಗೂಡು ತಾಲ್ಲೂಕು, ಚಿಕ್ಕಯ್ಯನ ಛತ್ರ ಹೋಬಳಿ, ಕುರಹಟ್ಟಿ ಕಾವಲ್ ಗ್ರಾಮಕ್ಕೆ ಸೇರಿದ ಖುಷ್ಕಿ ಸರ್ವೆ ನಂ.4 (ನಾಲ್ಕು) ರಲ್ಲಿನ ವಿಸ್ತೀರ್ಣ 9 ಎಕರೆ 31 ಗುಂಟೆ ಪೂಟ್ ಖರಾಬು 30 ಗುಂಟೆ ಜಾತಾ ಉಳಿಕೆ ಸಾಗುವಳಿ 9 ಎಕರೆ 01 ಗುಂಟೆ ಆಕಾರ ಪೈಸೆ ಉಳ್ಳ ಜಮೀನಿಗೆ ಚಕ್ಕುಬಂಧಿ: ಪೂರ್ವಕ್ಕೆ : ಹದಿನಾರು ಗ್ರಾಮದ ಗಡಿ ; ಪಶ್ಚಿಮಕ್ಕೆ : ಸರ್ವೆ ನಂ. 3 ಮತ್ತು 5 ರ ಜಮೀನು ; ಉತ್ತರಕ್ಕೆ : ಸರ್ವೆ ನಂ. 1 ಬ್ಲಾಕ್, 31ರ ಜಮೀನು ; ದಕ್ಷಿಣಕ್ಕೆ : ಹದಿನಾರು ಗ್ರಾಮದ ಗಡಿ.

Sd- H.S. Kumar B.A.L., LL.B.
Advocate, Law Lexicon Associates, No. 1411, 1st Floor, 6th Cross, Thyagaraja Road, Mysuru. Mob: 9448797546

ಕರ್ನಾಟಕ ಸರ್ಕಾರ
(Govt. of Karnataka)

ಕಾವೇರಿ ನೀರಾವರಿ ನಿಗಮ ನಿಯಮಿತ, ಜಲಸಂಪನ್ಮೂಲ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ಬಲದಂಡೆ ನಾಲಾ ವಿಭಾಗ. ಹೊಳೆನರಸೀಪುರ, ಹಾಸನ ಜಿಲ್ಲೆ–573211

Office of the Executive Engineer, Hemavathy Right Bank Canal, Division, Holenarasipura, Hassan District-573211

ದೂ.: 08175-273238 e-mail: eehrbchnp@gmail.com
Phone: 08175-273238

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2025–26 ದಿನಾಂಕ: 10.07.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಅರ್ಹ ಕರ್ನಾಟಕ ಲೋಕೋಪಯೋಗಿ/ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ '3' ಮತ್ತು ಮೇಲ್ಪಟ್ಟ ದರ್ಜೆಯಲ್ಲಿ ನೊಂದಣಿ ಹೊಂದಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯಿದೆ KW-2 ಅನ್ವಯ ಐಟಂವಾರು ಟೆಂಡರ್‌ಗಳನ್ನು https://kppp.karnataka.gov.in Plat form ನಲ್ಲಿ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿದೆ. 1.ಟೆಂಡರ್ ಪ್ರೋಸೆಸ್ಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು 2.Karnataka Public Procurement portal (https://kppp.karnataka.gov.in) ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ ದಿನಾಂಕ:10.07.2025 ರಿಂದ 17.07.2025 ಸಂಜೆ 4.00 ಘಂಟೆಯವರೆಗೆ 3.ಮೊದಲನೇ ಲಕೋಟೆ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ:19.07.2025 ರ 11.00 ರ ನಂತರ 4.ಎರಡನೇ ಲಕೋಟೆ (ಆರ್ಥಿಕ ಬಿಡ್) ತೆರೆಯುವ ದಿನಾಂಕ:21.07.2025ರ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಗುತ್ತಿಗೆದಾರರ ಬಿಡ್‌ಗಳನ್ನು ಮಾತ್ರ, 5.ಕಾಮಗಾರಿಗಳ ಸಂಖ್ಯೆ: 01 ಕಾಮಗಾರಿ 6.ಕೆಲಸದ ರೀತಿ: ಕಟ್ಟಡ ಕಾಮಗರಿ 7.ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ: ರೂ. 40.00 ಲಕ್ಷ 8.ಇ.ಎಂ.ಡಿ.: The prescribed format EMD declaration, as per Govt., order fd675exp-12/2020 Bangalore dated: 22.12.2020 9.ಗುತ್ತಿಗೆದಾರರ ವರ್ಗ: III ಮತ್ತು ಮೇಲ್ಪಟ್ಟು ಸೂಚನೆ: 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು Karnataka Public Procurement portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. 3.ಟೆಂಡರ್‌ಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಹೇ.ಬ.ನಾಲಾ ವಿಭಾಗ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/323/ಕೆಎಸ್‌ಎಂಸಿಎ/2025–26

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ. ನಮ್ಮ ಕಕ್ಷಿದಾರರಾದ ಶ್ರೀ ಶಿವ ಕುಮಾರ್ ಬಿನ್ ಲೇಟ್ ವೆಂಕಟಾಚಲ ರವರೊಂದಿಗೆ ಇದೇ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮೂಗನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಲೇಟ್, ಕೆಂಚೇಗೌಡ ರವರ ಮಗನಾದ ಸುಮಾರು 58 ವರ್ಷದ ಶ್ರೀ ಭಾಸ್ಕರ್ ಕೆ. ಮತ್ತು ಅವರ ಕುಟುಂಬದವರಿಂದ ನಮ್ಮ ಕಕ್ಷಿದಾರರು ಖರೀದಿಸುವ ಉದ್ದೇಶದಿಂದ ದಿ: 30-09-2022 ರಂದು "ಸ್ಥಿರ ಸ್ವತ್ತಿನ ಕ್ರಯದ ಕರಾರು" ಪತ್ರವನ್ನು ಮಾಡಿಕೊಂಡಿದ್ದು, ಸದರಿ ಕರಾರಿನ ಷರತ್ತಿನಂತೆ ಸರ್ವೆ ಕಾರ್ಯ ಹಾಗೂ ಷೆಡ್ಯೂಲ್ ಸ್ವತ್ತಿನ ಇತರೆ ದಾಖಲೆಗಳನ್ನು ಒದಗಿಸಲು ಕಾಲಾವಕಾಶ ತೆಗೆದುಕೊಂಡಿರುತ್ತಾರೆ. ಆದರೆ ಸ್ವತ್ತಿನ ಮಾಲೀಕರು ಸದರಿ ಷೆಡ್ಯೂಲ್ ಸ್ವತ್ತನ್ನು ಮೂರನೇ ವ್ಯಕ್ತಿಗಳೊಂದಿಗೆ ಶಾಮೀಲಾಗಿ ನಮ್ಮ ಕಕ್ಷಿದಾರರೊಂದಿಗೆ ಆಗಿರುವ "ಸ್ಥಿರ ಸ್ವತ್ತಿನ ಕ್ರಯದ ಕರಾರು" ವಿಷಯವನ್ನು ಮರೆಮಾಚಿ ಷೆಡ್ಯೂಲ್ ಸ್ವತ್ತನ್ನು ಇತರರೊಂದಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿದ್ದು, ಆದುದರಿಂದ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮೇಲೆ ನಮ್ಮ ಕಕ್ಷಿದಾರರಿಗೆ ಹಕ್ಕು, ಅಧಿಕಾರ ಇದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರು ವ್ಯವಹರಿಸದಂತೆ ಹಾಗೂ ಒಂದು ವೇಳೆ ಯಾವುದೇ ವ್ಯವಹಾರ ಮುಂದುವರೆಸಿದರು ಅದು ಕಾನೂನು ಬದ್ಧ ಪಡಿಸುವುದಿಲ್ಲವೆಂದು, ಅಂತಹ ವ್ಯವಹಾರಗಳು ನಮ್ಮ ಕಕ್ಷಿದಾರರ ಯಾವುದೇ ಹಕ್ಕಿಗೆ ಚ್ಯುತಿ ಬರುವುದಿಲ್ಲವೆಂದು, ಅಂತಹ ವ್ಯವಹಾರಗಳಿಂದ ಆಗುವ ನಷ್ಟಗಳಿಗೆ ತಾವುಗಳೇ ಹೊಣೆಗಾರರಾಗುತ್ತೀರಿ ಎಂದು ಈ ಮೂಲಕ ಸಾರ್ವಜನಿಕರ ಅವಗಾಹನೆಗೆ ತರುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮದ ಸರ್ವೆ ನಂ. 72/3 ರಲ್ಲಿ ವಿಸ್ತೀರ್ಣ 0.33 ಗುಂಟೆ ಪೈಕಿ 0.16.08 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಗೌರಮ್ಮ ಕೋಂ ಮಲ್ಲೇಗೌಡ, ಸರ್ವೆ ನಂ.72/3 ; ಪಶ್ಚಿಮಕ್ಕೆ: ಸರ್ಕಾರಿ ರಸ್ತೆ ; ಉತ್ತರಕ್ಕೆ: ಎನ್.ಬಿ. ಉಮೇಶ್ ಬಿನ್ ಬೋರೇಗೌಡ, ಸರ್ವೆ ನಂ. 72/4 ; ದಕ್ಷಿಣಕ್ಕೆ: ಮಹೇಶ್ ಕೆ. ರವರ ಉಳಿಕೆ ಜಮೀನು, ಸರ್ವೆ ನಂ. 72/3.

ಸಹಿ/– ದಿನೇಶ್ ಸೋಲಂಕಿ, ವಕೀಲರು.
ನಂ.1197, 12/2, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ, ಚಾಮರಾಜಪುರಂ, ಮೈಸೂರು.
Mob: 9343430011

ದಿನಾಂಕ: 09–07–2025
ಸ್ಥಳ: ಮೈಸೂರು



ಪಿ.ಎಂ. ಶ್ರೀ ಕೇಂದ್ರೀಯ ವಿದ್ಯಾಲಯ ಮೈಸೂರು
ಜಿ.ಐ.ಟಿ.ಬಿ ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು–570011

पी .एम .श्री केन्द्रीय वद्यिालय मैसूरु,
जी .आई .टी .बी प्रेस परसिर , सद्धिार्थनगर , मैसूरु - 570011
(शक्षिा मंत्रालय , भारत सरकार के अधीन एक स्वायत्त नकिाय)

PM SHRI KENDRIYA VIDYALAYA, MYSURU,
GITB, Press Campus, Siddharthanagar, Mysuru - 570011
Tel:0821-2473515, Website :https. mysore.kvs.ac.in
E-mail: kvmysore@gmail.com

F.NO.13-49/PM SHRI KVMysuru/2025-26 Date: 10.7.2025

2025–2026ರ ಅವಧಿಗೆ ಒಪ್ಪಂದದ ಆಧಾರದ ಮೇಲೆ ಸಮಿತಿಯನ್ನು ತಯಾರಿಸಲು ವಿವಿಧ ಹುದ್ದೆಗಳಿಗೆ 16.07.2025 ರಂದು ಪಿ.ಎಂ. ಶ್ರೀ ಕೇಂದ್ರೀಯ ವಿದ್ಯಾಲಯ ಸಂದರ್ಶನದಲ್ಲಿ ನಡೆಯಲಿದೆ. ನೋಂದಣಿ ಸಮಯ – ಬೆಳಗ್ಗೆ 8:30 ರಿಂದ 10:30 ರವರೆಗೆ.
ಸಂದರ್ಶನ ಸಮಯ – ಬೆಳಗ್ಗೆ 11:00 ರಿಂದ

ದಿನಾಂಕ : 16.07.2025

ಪೋಸ್ಟ್ ಮತ್ತು ವಿಷಯ:

1. ಹುದ್ದೆ: ಪಿಜಿಟಿ–ಭೌತಶಾಸ್ತ್ರ
2. ಹುದ್ದೆ: ಟಿಜಿಟಿ– ಸಂಸ್ಕೃತ, ಸಮಾಜ ವಿಜ್ಞಾನ, ವಿಜ್ಞಾನ
3. ಹುದ್ದೆ: ಪ್ರಾಥಮಿಕ ಶಿಕ್ಷಕ
4. ಇತರ ಹುದ್ದೆಗಳು: ಕನ್ನಡ ಅಧ್ಯಾಪಕರು, ಕಂಪ್ಯೂಟರ್ ಬೋಧಕ, ಕೌನ್ಸಿಲರ್, ಕ್ರೀಡಾ ತರಬೇತುದಾರ.

1. ಅಭ್ಯರ್ಥಿಗಳು ನೋಂದಣಿಗಾಗಿ ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ಅರ್ಹತೆಯ ಮೂಲ ಪ್ರಮಾಣಪತ್ರಗಳ ಒಂದು ಸೆಟ್ ಸ್ವಯಂ ದೃಢೀಕರಿಸಿದ ಪ್ರಮಾಣಪತ್ರದ ಪ್ರತಿಗಳು ಮತ್ತು 2 ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರಗಳೊಂದಿಗೆ ಹಾಜರಾಗಬೇಕು.
2. ಸಂದರ್ಶನಕ್ಕೆ ಯಾವುದೇ ಟಿಎ/ಡಿಎ ಒದಗಿಸಲಾಗುವುದಿಲ್ಲ.
3. ಅರ್ಜಿ ನಮೂನೆಯನ್ನು ಅರ್ಹತಾ ಮಾನದಂಡಗಳು, ಕನಿಷ್ಠ ಅರ್ಹತೆ, ಸಂಬಳ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಲು, ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ: https://mysore.kvs.ac.in

ಸಹಿ/– ಪ್ರಾಂಶುಪಾಲರು

JSS MAHAVIDYAPEETHA

JSS COLLEGE OF ARTS, COMMERCE & SCIENCE


Autonomous, NAAC 'A+' Grade (CGPA 3.30) & College with Potential for Excellence
Ooty Road, Mysuru – 570 025. Ph: 0821-2548379, 2548380, 2548236 Fax: 0821-2548238
Email: jssautonomous@gmail.com; Website: www.jsscacs.edu.in

ADMISSIONS FOR POSTGRADUATE DEGREE PROGRAMMES: 2025-26

PROGRAMMES OFFERED
Duration: 2 Years / 4 Semesters

M.Sc.	Physics, Chemistry, Mathematics, Computer Science, Biochemistry, Bio-Technology, Botany, Zoology
M.A.	Kannada, English
M.S.W	
M.Com	
MCA	
M.Voc.	Food Processing & Engineering, Software Development

The college lies amid lush-green environment with excellent infrastructure and lush facilities for women. We foster research activities and career opportunities to the students through various programmes.



Registration

Registration at www.uompgadmissions.com is compulsory for candidates seeking admissions to PG degree programmes of this college under College Quota and University Quota.

Entrance Examination

I. Entrance Examination conducted by University of Mysore is compulsory for all candidates seeking admissions to PG degree programmes (Foreign Nationals are exempted from Entrance Examination).
II. Entrance Examination for M.Voc degree programmes will be conducted by the College.

Applications

I. Candidates are advised to submit applications either online at www.jsscacs.edu.in or in-person for seeking admissions under College Quota.
II. Candidates seeking admissions to this College under University Quota need to apply only in online mode at www.uompgadmissions.com as per University Notification.
III. Separate applications should be submitted for each PG degree programmes

We provide special coaching for competitive examinations

MCA Admissions

60 Seats are filled by Management and 60 seats by KEA.

For more details visit our website: www.jsscacs.edu.in

ಶ್ರೀ ಕಾಳಿಕಾಂಬ ಕಮಠೇಶ್ವರಸ್ವಾಮಿ ದೇವಸ್ಥಾನ

ಕಾಳಮ್ಮನಗುಡಿ ರಸ್ತೆ (ಕೆ.ಟಿ. ರಸ್ತೆ), ಇರ್ವಿನ್ ರೋಡ್, ಮೈಸೂರು

ಲೋಕ ಕಲ್ಯಾಣಾರ್ಥವಾಗಿ ನಡೆಸುವ 40ನೇ ವರ್ಷದ

ಶ್ರೀ ಗಿರಿಜಾಕಲ್ಯಾಣ ಮಹೋತ್ಸವ ಆಹ್ವಾನ ಪತ್ರಿಕೆ

ದಿನಾಂಕ 12-07-2025 ರಿಂದ 15-07-2025ರ ವರೆಗೆ



ಅಧ್ಯಕ್ಷರು: ಶ್ರೀ ಎಂ.ಆರ್. ರಾಜಾರಾಮ್ ಎಂ.ಬಿ.ಎ., ✆ : 98459 79797

ಉಪಾಧ್ಯಕ್ಷರು	ಕಾರ್ಯದರ್ಶಿ	ಸಹಕಾರ್ಯದರ್ಶಿ	ಖಜಾಂಚಿ
ಶ್ರೀ ಎಸ್.ಎನ್. ಕೇಶವಮೂರ್ತಿ ಬಿ.ಕಾಂ.,	ಶ್ರೀ ಎನ್. ಕುಮಾರ್ ಡಿ.ಎಂ.ಇ.,	ಶ್ರೀ ವಿ. ವಸಂತಕುಮಾರ್	ಶ್ರೀ ಎಂ. ವಾಸು ಬಿ.ಇ.,
✆ : 93435 27921	✆ : 99006 65995	✆ : 87622 05235	✆ : 89708 34353

ಸದಸ್ಯರುಗಳು

ಶ್ರೀ ಎಂ.ವಿ. ವರದರಾಜು, ಶ್ರೀ ಕೆ. ನಾಗಭೂಷಣ್, ಶ್ರೀ ಕೆ. ನಾಗರಾಜು, ಶ್ರೀ ಎನ್. ಮಹೇಶ್, ಶ್ರೀ ವಿ. ರಾಮಕೃಷ್ಣಾಚಾರ್, ಶ್ರೀ ಎಂ. ಪುಟ್ಟಸ್ವಾಮಾಚಾರ್, ಶ್ರೀ ಅರುಣ್‌ಕುಮಾರ್, ಶ್ರೀಮತಿ ಬಿ. ಶ್ಯಾಮಲರಾಜ್, ಶ್ರೀಮತಿ ಸಿ. ಪುಷ್ಪ

ಶ್ರೀ ವಿಶ್ವಕರ್ಮ ಕುಟುಂಬದವರಿಗೆಲ್ಲರಿಗೂ ಮತ್ತು ಭಕ್ತಾದಿಗಳಿಗೂ ಆತ್ಮೀಯ ಸುಸ್ವಾಗತ

ಶ್ರೀ ಕಾಳಿಕಾಂಬ ಕಮಠೇಶ್ವರಸ್ವಾಮಿ ದೇವಸ್ಥಾನಕ್ಕೆ 159 ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಿರುವ ಏಕೈಕ ಕುಟುಂಬ



ಶ್ರೀ ಬ್ರಹ್ಮಶ್ರೀ ಚಲುವಾಚಾರ್ | ಶ್ರೀ ಮೇಸ್ತ್ರಿ ತಿಮ್ಮಯ್ಯಾಚಾರ್ ಅರಮನೆ ಕಂಟ್ರಾಕ್ಟರ್ | ವಾಸ್ತುಕಲಾ ಸೇವಾಸಕ್ತ ಶ್ರೀ ಟಿ. ಚೆಲುವಾಚಾರ್ ಅರಮನೆ ಕಂಟ್ರಾಕ್ಟರ್ | ಶ್ರೀ ಟಿ. ಯಾಲಕ್ಕಾಚಾರ್ ಅರಮನೆ ಕಂಟ್ರಾಕ್ಟರ್ | ಶ್ರೀ ಎಂ.ಸಿ. ತಿಮ್ಮಯ್ಯಾಚಾರ್ ಗಾಯತ್ರಿ ಚಿತ್ರಮಂದಿರದ ಮಾಲೀಕರು | ಶ್ರೀ ಎಂ.ಟಿ. ರಾಮಚಂದ್ರ ಬಿ.ಇ., ಗಾಯತ್ರಿ ಚಿತ್ರಮಂದಿರದ ಮಾಲೀಕರು ಅಧ್ಯಕ್ಷರು 1990–2023 | ಶ್ರೀ ಎಂ.ಆರ್. ರಾಜಾರಾಮ್ ಬಿ.ಬಿ.ಎಂ. ಎಂ.ಬಿ.ಎ. ದೇವಸ್ಥಾನದ ಅಧ್ಯಕ್ಷರು ಆಡಳಿತಗಾರರು, ಗಾಯತ್ರಿ ಟಾಕೀಸ್, ಮೈಸೂರು

ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಆಹ್ವಾನ ಪತ್ರಿಕೆಯ ಸೇವಾರ್ಥದಾರರು : ರೂ. 26,000/–

12ನೇ ವರ್ಷದ ಶ್ರೀ ಗಾಯತ್ರಿ ಪ್ರತಿಭಾ ಪುರಸ್ಕಾರ

ದಿ|| ಎಂ. ಆರ್. ರಘುರಾಮ್ (ಕೆನಡ) ರವರ ಸ್ಮರಣಾರ್ಥ

2024–25 ದಾನಿಗಳು ಶ್ರೀ ಗಾಯತ್ರಿ ಕುಟುಂಬ, ಎಂ.ಆರ್. ರಾಜಾರಾಮ್ ಎಂ.ಬಿ.ಎ., ಅಧ್ಯಕ್ಷರು ಹಾಗೂ ಗಾಯತ್ರಿ ಚಿತ್ರಮಂದಿರದ ಮಾಲೀಕರಿಂದ 2024–25ನೇ ವರ್ಷದ ಎಸ್.ಎಸ್.ಎಲ್.ಸಿ. 531 ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 540 ಮೇಲ್ಪಟ್ಟು ಅಂಕಗಳಿಸಿ ತೇರ್ಗಡೆಯಾಗಿರುವ ಮೈಸೂರು ಜಿಲ್ಲೆಯ ವಿಶ್ವಕರ್ಮ ಜನಾಂಗದ ವಿದ್ಯಾರ್ಥಿಗಳಿಗೆ ಶ್ರೀ ಗಿರಿಜಾಕಲ್ಯಾಣ ಮಹೋತ್ಸವದ ಸಂದರ್ಭದಲ್ಲಿ ತಾ|| 14–07–2025ರ ಸಂಜೆ 5:30 ಗಂಟೆಗೆ ಪ್ರತಿಭಾ ಪುರಸ್ಕಾರ ಮತ್ತು ರೂ. 1000 ಪ್ರೋತ್ಸಾಹ ಧನವನ್ನು ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ 2 ಭಾವಚಿತ್ರ, ಅಂಕಪಟ್ಟಿಯ ಜೆರಾಕ್ಸ್‌ನ್ನು ಅರ್ಜಿಯ ಜೊತೆ ಲಗತ್ತಿಸಿ, ತಾರೀಖು 07–07–2025ರ ಒಳಗೆ ದೇವಸ್ಥಾನದ ಆಫೀಸಿನಲ್ಲಿ ಸಲ್ಲಿಸತಕ್ಕದು.

ಶ್ರೀ ವಿಶ್ವಕರ್ಮ ಕುಟುಂಬದವರಿಗೆಲ್ಲರಿಗೂ ಮತ್ತು ಭಕ್ತಾದಿಗಳಿಗೂ ಆತ್ಮೀಯ ಸುಸ್ವಾಗತ

AnuSan Innovation, Mysuru. ✆: 95913 59038, Email: asimysuru@gmail.com

ಆರೀಫ್ ಪಾಷಾಗೆ ಸೇವೆ ಮಾಡಲು ಚಾಮುಂಡೇಶ್ವರಿ ಶಕ್ತಿ ನೀಡಲಿ: ಕೆ.ಮರೀಗೌಡ



ಮೈಸೂರು, ಜು.10– ಆರೀಫ್ ಪಾಷಾರವರು ಹಲವಾರು ವರ್ಷಗಳಿಂದ ಸಮಾಜಮುಖಿ ಸೇವಾ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದ್ದು ಇನ್ನೂ ಹೆಚ್ಚಿನ ಸಮಾಜಸೇವೆ ಮಾಡಲು ತಾಯಿ ಚಾಮುಂಡೇಶ್ವರಿ ಶಕ್ತಿ ನೀಡಲಿ ಎಂದು ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ ಹೇಳಿದರು.

ಕಾಂಗ್ರೆಸ್ ಪಕ್ಷದ ಚಾಮುಂಡೇಶ್ವರಿ ಕ್ಷೇತ್ರದ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷರಾದ ಆರೀಫ್ ಪಾಷಾರವರ ಹುಟ್ಟುಹಬ್ಬದ ಅಂಗವಾಗಿ ಎನ್.ಆರ್. ಮೊಹಲ್ಲಾದಲ್ಲಿರುವ ಶ್ರೀ ಶ್ರೀನಿವಾಸ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯರವರು ರಾಜ್ಯದ ಬಡಜನರಿಗೆ 5 ಗ್ಯಾರಂಟಿಗಳನ್ನು ನೀಡುವ ಮೂಲಕ ಆರ್ಥಿಕವಾಗಿ ಸದೃಢರನ್ನಾಗಿ ಮಾಡಿದ್ದಾರೆ. ರಾಜ್ಯದ 224 ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ವಿರೋಧ ಪಕ್ಷದವರು ಹೊಟ್ಟೆಕಿಚ್ಚಿಗೋಸ್ಕರ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಮೈಸೂರು ನಗರಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ನಂತರದಲ್ಲಿ ಅತೀ ಹೆಚ್ಚು ಅನುದಾನವನ್ನು ನೀಡಿ ಸಿದ್ದರಾಮಯ್ಯನವರು ಅಭಿವೃದ್ಧಿಪಡಿಸಿದ್ದಾರೆ. ಆರೀಫ್ ಪಾಷಾರಿಗೆ ಮುಂದಿನ ರಾಜಕೀಯ ಭವಿಷ್ಯ ಉಜ್ವಲವಾಗಲಿದೆ ಎಂದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ ಆರೀಫ್ ಪಾಷಾ ಸಮಾಜದಲ್ಲಿ ಉತ್ತಮ ಕೆಲಸಗಳನ್ನು ಮಾಡಿ ಪಕ್ಷದಲ್ಲಿ ಗುರುತಿಸಿಕೊಂಡಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಸಿದ್ದರಾಮಯ್ಯ ಬ್ರಿಗೇಡ್‌ನ ರಾಜ್ಯಾಧ್ಯಕ್ಷ ಹಿನಕಲ್ ಉದಯ್, ಶ್ರೀನಿವಾಸ್ ಆಸ್ಪತ್ರೆಯ ವ್ಯವಸ್ಥಾಪಕರಾದ ಗಂಧನಹಳ್ಳಿ ವೆಂಕಟೇಶ್, ನಝರ್‌ಬಾದ್ ನಾಗರಾಜ್ ಫಂಡ್ ಆಯುಷ್ ಪಾಷಾ ಅಕ್ರಂ ಷರೀಫ್, ಡಾ. ವೇಣುಗೋಪಾಲ್, ಡಾ. ಪೂಜಾ, ಶೋಭಾ ಸುನೀಲ್, ಅಜ್ಮಲ್ ಪಾಷಾ, ಮೋಸಿನ್‌ಖಾನ್, ರಕ್ಷಿತ್, ಅನಿರುದ್ಧ್, ಸಂತೋಷ್ ಕಿರಾಳು, ರಹಮತ್ ಉಲ್ಲಾ ಟಿಪ್ಪು, ಅಯಾನ್ ಉದ್ದೀನ್, ಶಿವರಾಂ ರಾಜರಿದ್ದರು.

3ನೇ ಟೆಸ್ಟ್: ಮೊದಲ ದಿನದಂತ್ಯಕ್ಕೆ ಇಂಗ್ಲೆಂಡ್ 251/4

ಲಾರ್ಡ್ಸ್, ಜು.10– ಜೋ ರೂಟ್ ಅವರ ಅರ್ಧಶತಕದ ನೆರವಿನಿಂದ ಇಂಗ್ಲೆಂಡ್, ಭಾರತ ವಿರುದ್ಧದ 3ನೇ ಟೆಸ್ಟ್ ಪಂದ್ಯದ ಮೊದಲ ದಿನದ ಅಂತ್ಯಕ್ಕೆ 83 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 251 ರನ್ ಗಳಿಸಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಂಭಿಸಿದ ಇಂಗ್ಲೆಂಡ್ ಪರ ಆರಂಭಿಕರಾದ ಬೆನ್ ಡಕೆಟ್ ಹಾಗೂ ಝಾಕ್ ಕ್ರಾಲಿ ಮೊದಲ ವಿಕೆಟ್‌ಗೆ 43 ರನ್ ಜೊತೆಯಾಟವಾಡಿದರು. ಈ ವೇಳೆ 23 ರನ್ ಗಳಿಸಿದ್ದ ಬೆನ್ ಡಕೆಟ್ ಹಾಗೂ ಕ್ರಾಲಿ 18 ರನ್ ಗಳಿಸಿ ನಿತೀಶ್ ಕುಮಾರ್ ರೆಡ್ಡಿಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಓಲಿ ಪೋಪ್ 44 ರನ್ ಗಳಿಸಿ ನಿರ್ಗಮಿಸಿದರೆ, ಹ್ಯಾರಿ ಬ್ರೂಕ್ 11 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ 5 ವಿಕೆಟ್‌ಗೆ ಜೊತೆಯಾದ ಜೋ ರೂಟ್ ಹಾಗೂ ನಾಯಕ ಬೆನ್ ಸ್ಟೋಕ್ಸ್ 79 ರನ್ ಗಳಿಸುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ತಾಳ್ಮೆಯ ಬ್ಯಾಟಿಂಗ್ ಪ್ರದರ್ಶನ ನೀಡಿದ ಜೋ ರೂಟ್ 9 ಬೌಂಡರಿ ಒಳಗೊಂಡ 99 ರನ್ ಗಳಿಸಿ ಶತಕದ ಹೊಸ್ತಿನಲ್ಲಿದ್ದರೆ, ಸ್ಟೋಕ್ಸ್ ಅಜೇಯ 39 ರನ್ ಗಳಿಸಿ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತದ ಪರ ನಿತೀಶ್ ಕುಮಾರ್ ರೆಡ್ಡಿ 2, ರವೀಂದ್ರ ಜಡೇಜಾ ಹಾಗೂ ಬೂಮ್ರಾ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

ಹೃದಯಾಘಾತ ತಂದ ಆತಂಕ; ನಿತ್ಯವೂ ಜನರ ನೂಕು-ನುಗ್ಗಲು

ಜಯದೇವ ಆಸ್ಪತ್ರೆಗೆ ನೆರವಾಗಲು 'ಮಹಾನ್' ತಂಡ ನಿರ್ಧಾರ

ಮೈಸೂರು, ಜು.10(ಆರ್‌ಕೆ)–ಹಾಸನದಲ್ಲಿ ಹೃದಯಾಘಾತದಿಂದ ಸರಣಿ ಸಾವು. ಇನ್ನಿತರೆಡೆಯೂ ಸಾವಿನ ಸಂಖ್ಯೆ ಹೆಚ್ಚಿದ ಹಿನ್ನೆಲೆಯಲ್ಲಿ ಆತಂಕಗೊಂಡ ಜನರು ನಿತ್ಯವೂ ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಗೆ ಮುಗಿಬೀಳುತ್ತಿದ್ದಾರೆ. ಇದರಿಂದ ಉಂಟಾಗಿರುವ ನೂಕು–ನುಗ್ಗಲು ನಿರ್ವಹಣೆಗೆ 'ಮಹಾನ್' (Mysore Association of Hospitals, Nursing Homes, Clinics and Diagnostic Centres)ವೈದ್ಯರ ತಂಡ ಮುಂದಾಗಿದೆ.

ಆತಂಕ, ಆಘಾತಗೊಂಡ ಜನರು ಹೃದಯ ತಪಾಸಣೆ ಮಾಡಿಸಿಕೊಳ್ಳಲೆಂದು ಮೈಸೂರು ನಗರ, ಜಿಲ್ಲೆ, ಚಾಮರಾಜನಗರ, ಕೊಡಗು, ಹಾಸನ, ಮಂಡ್ಯ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಜಯದೇವ ಆಸ್ಪತ್ರೆಗೆ ನಿತ್ಯವೂ ಧಾವಿಸುತ್ತಿರುವುದರಿಂದ ಅಲ್ಲಿ ನೂಕು–ನುಗ್ಗಲು ಉಂಟಾಗುತ್ತಿದ್ದು, ತ್ವರಿತ ತಪಾಸಣೆಗೆ ಅಲ್ಲಿನ ವೈದ್ಯರು, ಸಿಬ್ಬಂದಿಗಳಿಗೆ ಕಷ್ಟವಾಗುತ್ತಿದೆ.

ಮುಂಜಾನೆ 6 ಗಂಟೆಗೆ ಆಸ್ಪತ್ರೆ ಬಳಿ ಜಮಾಯಿಸುತ್ತಿರುವುದರಿಂದ ಅವರನ್ನು ಸರತಿ ಸಾಲಿನಲ್ಲಿ ನಿಲ್ಲಿಸಿ ಓಪಿಡಿ ನೋಂದಣಿ ಮಾಡಿ,



ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಜನ ಜಂಗುಳಿ.

ರಕ್ತ ಪರೀಕ್ಷೆ, ಇಸಿಜಿ, ಎಕೋ, ಟ್ರೆಡಮಿಲ್ ಟೆಸ್ಟ್ ಪ್ರಕ್ರಿಯೆ ನಡೆಸಿ, ಅವುಗಳ ವರದಿ ನೋಡಿ ವೈದ್ಯರು ಪರೀಕ್ಷಿಸಿ ಸೂಕ್ತ ಸಲಹೆ, ಚಿಕಿತ್ಸೆ ನೀಡಬೇಕಾಗುತ್ತದೆ.

ಏಕಾಏಕಿ ಭಾರೀ ಸಂಖ್ಯೆಯಲ್ಲಿ ಲಗ್ಗೆ ಇಡುತ್ತಿರುವುದರಿಂದ ಅವರನ್ನು ನಿರ್ವಹಿಸುವುದು ಇರುವ ಸಿಬ್ಬಂದಿಗೆ ಸಾಕು ಸಾಕಾಗುತ್ತಿದೆ. ಹಾಗಾಗಿ ಈ ಆತಂಕ ಪರಿಸ್ಥಿತಿ ಕಡಿಮೆಯಾಗಿ ಸಾಮಾನ್ಯ ಪರಿಸ್ಥಿತಿಗೆ ಮರಳುವವರೆಗೆ ಜಯದೇವ ಆಸ್ಪತ್ರೆಗೆ ಸ್ವಯಂ ಪ್ರೇರಣೆಯಿಂದ ಸೇವೆ ಸಲ್ಲಿಸಬಹುದಲ್ಲವೇ ಎಂಬ 'ಸ್ಟಾರ್ ಆಫ್ ಮೈಸೂರ್' ಪ್ರಸ್ತಾಪವನ್ನು MAHAN ನಿಕಟಪೂರ್ವ ಅಧ್ಯಕ್ಷರೂ ಹಾಗೂ 'ಸ್ಟಾರ್ ಆಫ್ ಮೈಸೂರ್' ಅಂಕಣಕಾರರಾದ ಡಾ. ಕೆಜಾವಿದ್ ನಯೀಂ ಮುಕ್ತ ಮನಸ್ಸಿನಿಂದ ಸ್ವಾಗತಿಸಿದ್ದಾರೆ.

ಇಂತಹ ಸಂದರ್ಭದಲ್ಲಿ ನಾವು ಜಯದೇವ ಆಸ್ಪತ್ರೆಯೊಂದಿಗೆ ಕೈಜೋಡಿಸುತ್ತೇವೆ. ಸ್ವಯಂ ಸೇವಕರಾಗಿ ನಮ್ಮ ಸಂಘದ ಹೃದ್ರೋಗ ತಜ್ಞರು ಕೆಲಸ ಮಾಡಿ ಆಸ್ಪತ್ರೆ ವೈದ್ಯರು, ಸಿಬ್ಬಂದಿಯ ಮೇಲಿನ ಒತ್ತಡ ಕಡಿಮೆ ಮಾಡುವುದಲ್ಲದೆ, ಇದರಿಂದ ರೋಗಿಗಳಿಗೂ ಅನುಕೂಲವಾಗಲಿದೆ ಎಂದು ಡಾ. ಜಾವಿದ್ ನಯೀಂ ತಿಳಿಸಿದ್ದಾರೆ.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಕೆ.ಎಸ್.ರವೀಂದ್ರನಾಥ, ಸಹ ಈ ಸಲಹೆಯನ್ನು ಸ್ವಾಗತಿಸಿದ್ದು, ಅದರಿಂದ ಜನರಿಗೆ ಮತ್ತಷ್ಟು ಅನುಕೂಲವಾಗುತ್ತದೆ. ಮಹಾನ್ ವೈದ್ಯರ ಸಹಾಯ ಪಡೆದುಕೊಳ್ಳುವ ಸಂಬಂಧ ಮೈಸೂರಿನ ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ ಅವರೊಂದಿಗೆ ಮಾತನಾಡುವುದಾಗಿ ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಡಾ. ಸದಾನಂದ ಅವರು, ಇಂದು ಆಸ್ಪತ್ರೆಯಲ್ಲಿ ಜನರ ಸಂಖ್ಯೆ ಸ್ವಲ್ಪ ಕಡಿಮೆಯಾಗಿದೆ. ಪರಿಸ್ಥಿತಿ ಅವಲೋಕಿಸಿ ನಿರ್ದೇಶಕರ ಮಾರ್ಗದರ್ಶನದಂತೆ 'ಮಹಾನ್' ಅಧ್ಯಕ್ಷರೊಂದಿಗೆ ಮಾತನಾಡುತ್ತೇನೆ ಎಂದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನಾನಿರತ ಪಾಲಿಕೆ ನೌಕರರ ಕ್ಯಾಂಡಲ್ ಲೈಟ್ ಮೆರವಣಿಗೆ



ಪ್ರತಿಭಟನಾ ನಿರತ ಮೈಸೂರು ನಗರಪಾಲಿಕೆ ನೌಕರರು ಗುರುವಾರ ಸಂಜೆ ಕ್ಯಾಂಡಲ್ ಲೈಟ್ ಮೆರವಣಿಗೆ ನಡೆಸಿದರು

ಮೈಸೂರು, ಜು.10(ಎಂಕೆ)– 7ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ಸೌಲಭ್ಯಗಳನ್ನು ತಮಗೂ ಒದಗಿಸುವಂತೆ ಹಾಗೂ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತು ನೀಡಿರುವ ಮುಷ್ಕರ ಕರೆ ಬೆಂಬಲಿಸಿ ಮೈಸೂರು ನಗರಪಾಲಿಕೆ ನೌಕರರು, ಪೌರಕಾರ್ಮಿಕರ ಪ್ರತಿಭಟನೆ ಮುಂದುವರೆದಿದ್ದು, ಗುರುವಾರ ಸಂಜೆ ಕ್ಯಾಂಡಲ್ ಲೈಟ್ ಬೆಳಗಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಗರಪಾಲಿಕೆ ಕೇಂದ್ರ ಕಚೇರಿ ಎದುರು 500ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜಮಾವಣೆಗೊಂಡ ಪಾಲಿಕೆ ನೌಕರರು ಹಾಗೂ ಪೌರಕಾರ್ಮಿಕರು, ಕ್ಯಾಂಡಲ್ ಲೈಟ್ ಬೆಳಗಿಸಿ, ಗನ್‌ಹೌಸ್ ಸಮೀಪದ ಬಸವೇಶ್ವರ ವೃತ್ತದವರೆಗೆ ಮೌನ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪಾಲಿಕೆ ನೌಕರರ ಕುಂದು ಕೊರತೆಗಳ ಬೇಡಿಕೆಗಳಿಗೆ ಸರ್ಕಾರದ ವತಿಯಿಂದ ಇಲ್ಲಿಯವರೆಗೆ ಯಾವುದೇ ಸಕಾರಾತ್ಮಕ ಸ್ಪಂದನೆ ದೊರಕದ ಕಾರಣ ಪ್ರತಿಭಟನೆ ಮುಂದುವರೆಸಿದ್ದೇವೆ ಎಂದು ಕೆಲ ಪಾಲಿಕೆ ನೌಕರರು ತಿಳಿಸಿದರು. ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲಿಕೆ ಅಧಿಕಾರಿ–ಸಿಬ್ಬಂದಿ ಹಾಗೂ ನೂರಾರು ಪೌರಕಾರ್ಮಿಕರು ಭಾಗವಹಿಸಿದ್ದರು.

ಹೃದಯಾಘಾತ ಬಗ್ಗೆ ಜನರು ಆತಂಕ ಪಡಬೇಕಾದ ಅಗತ್ಯವಿಲ್ಲ: ಡಾ.ಶರಣಪ್ರಕಾಶ್ ಪಾಟೀಲ್



ಬೆಂಗಳೂರು, ಜು.10– ರಾಜ್ಯದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಹೃದಯಾಘಾತ ಪ್ರಕರಣಗಳ ಬಗ್ಗೆ ಜನರು ಆತಂಕ ಪಡಬೇಕಾದ ಅಗತ್ಯವಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಆರ್. ಪಾಟೀಲ್ ತಿಳಿಸಿದ್ದಾರೆ.

ಬೆಂಗಳೂರಿನ ಸದಾಶಿವನಗರದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದ ಮುಂದೆ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಹೃದಯಾಘಾತದ ಬಗ್ಗೆ ಜನರು ಆತಂಕ ಪಡಬೇಡಿ. ಮಾಧ್ಯಮದಲ್ಲಿ ಇದರ ಬಗ್ಗೆ ಹೆಚ್ಚು ವೈಭವೀಕರಿಸಲಾಗುತ್ತಿದೆ. ಜನರಿಗೆ ಭೀತಿ ಉಂಟಾಗುವುದು ಸಹಜ. ಆದರೆ ವೈದ್ಯರು ಹಾಗೂ ಇಲಾಖೆಯ ಅಧಿಕಾರಿಗಳು ನೀಡುವ ಸಲಹೆಗಳನ್ನು ಪಾಲಿಸಿ ಎಂದು ಸಚಿವರು ತಿಳಿಸಿದರು.

ಸಾರ್ವಜನಿಕರು ನಿಯಮಿತ ಆಹಾರ, ಪೌಷ್ಟಿಕಯುಕ್ತ ಆಹಾರ, ವ್ಯಾಯಾಮ ಹಾಗೂ ಯೋಗ ಹಾಗೂ ಇತರೆ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಿ. ಜೀವನ ಶೈಲಿಯನ್ನು ಆದಷ್ಟು ಬಳಸಿಕೊಳ್ಳಿ. ನಮ್ಮ ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಕೈಯ್ಯಲ್ಲಿಯೇ ಇದೆ. ಆದಷ್ಟು ಜಂಕ್ ಫುಡ್ ನಿಯಂತ್ರಣ ಮಾಡಬೇಕು. ಕರಿದ ಪದಾರ್ಥಗಳ ಸೇವನೆ ನಿಯಂತ್ರಿಸುವ ಮೂಲಕ ಆರೋಗ್ಯ ಸಂರಕ್ಷಿಸಿಕೊಳ್ಳಬಹುದು. ಜನರು ಎಚ್ಚರದಿಂದಿರಿ, ಸುರಕ್ಷಿತವಾಗಿರಿ, ಆತಂಕದಿಂದ ದೂರವಿರಿ ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಸಲಹೆ ನೀಡಿದರು.

ಮೂರನೇ ಪುಟದಿಂದ

ಭೂ ಮಾಫಿಯಾದಿಂದ ಕೋಟ್ಯಾಂತರ ಮೌಲ್ಯದ ಆಸ್ತಿ ಕಬಳಿಕೆ

ಅವರಿಗೆ ರಮ್ಮನಹಳ್ಳಿ ಗ್ರಾಮದ ಸರ್ವೆ ನಂ.210/1ರಲ್ಲಿ 1 ಎಕರೆ 07 ಗುಂಟೆ ಮತ್ತು ಅದೇ ಗ್ರಾಮದ ಸರ್ವೆ ನಂ.210/4ರಲ್ಲಿ 1 ಎಕರೆ 05 ಗುಂಟೆ ಜಮೀನಿದೆ. ಕಳೆದ ಜೂನ್ 5ರಂದು ಪೂರ್ವ ಉಪ ನೋಂದಣಾಧಿಕಾರಿ ಕಚೇರಿಗೆ ತನ್ನ ಪುತ್ರಿ ಎನ್ನಲಾದ ಸಲ್ಮಾ ಸುಲ್ತಾನ ಜೊತೆ ಆಗಮಿಸಿದ ನೆಹರು ನಗರ ನಿವಾಸಿ ಉಮೇರಾ ಖಾನಂ ರಮ್ಮನಹಳ್ಳಿ ಸರ್ವೆ ನಂಬರ್ 210/1ರ 1 ಎಕರೆ 07 ಗುಂಟೆ ಭೂಮಿಯನ್ನು ಮಗಳ ಹೆಸರಿಗೆ ದಾನಪತ್ರ ನೋಂದಣಿ ಮಾಡಿಸಿದ್ದಾಳೆ. ನಂತರ ಜೂನ್ 9ರಂದು ಮತ್ತೆ ಬಂದು ಅದೇ ಗ್ರಾಮದ ಸರ್ವೆ ನಂಬರ್ 210/4ರ 1 ಎಕರೆ 05 ಗುಂಟೆ ಜಮೀನನ್ನೂ ಕೂಡ ಸಲ್ಮಾ ಸುಲ್ತಾನ ಹೆಸರಿಗೆ ದಾನಪತ್ರ ನೋಂದಣಿ ಮಾಡಿಸಿದ್ದಾಳೆ.

ಖಾತೆಗಾಗಿ ತಹಶೀಲ್ದಾರ್ ಕಚೇರಿಗೆ ಮಧ್ಯವರ್ತಿಗಳಿಂದ ಅರ್ಜಿ: ಈ ದಾನಪತ್ರಗಳ ಆಧಾರದ ಮೇರೆಗೆ ಜಮೀನನ್ನು ಸಲ್ಮಾ ಸುಲ್ತಾನ ಹೆಸರಿಗೆ ಖಾತೆ ವರ್ಗಾವಣೆಗಾಗಿ ಮಧ್ಯವರ್ತಿಗಳು ಮೈಸೂರು ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದ್ದಾರೆ. ನಿಯಮದಂತೆ ರೆವೆನ್ಯೂ ಇನ್ಸ್‌ಪೆಕ್ಟರ್ ಅವರಿಂದ ಪರಿಶೀಲನೆಗಾಗಿ ರಮ್ಮನಹಳ್ಳಿ ಗ್ರಾಮ ಲೆಕ್ಕಿಗ ಅಜೀಂ ಖಾನ್ ಅವರ ಬಳಿಗೆ ಕಡತ ಬಂದಿದೆ.

ತನಿಖಾಧಿಕಾರಿಯಾದ ಗ್ರಾಮ ಲೆಕ್ಕಿಗ: ಈ ಕಡತವನ್ನು ನೋಡಿದ ಅಜೀಂ ಖಾನ್, ಆಸ್ತಿಗೆ ಆಧಾರ್ ಸೀಡಿಂಗ್ ಆಗದೇ ಇರುವುದನ್ನು ಗಮನಿಸಿದ್ದಾರೆ. ಸದ್ಯ ಕಡತ ಬಂತಲ್ಲಾ, ಜಮೀನು ಮಾಲೀಕರನ್ನು ಭೇಟಿ ಮಾಡಿ ಮೊದಲು ಆಧಾರ್ ಸೀಡಿಂಗ್ ಮಾಡಿಸಿಬಿಡೋಣ ಎಂದುಕೊಂಡ ಅವರು, ನೋಂದಣಿ ಪತ್ರದಲ್ಲಿದ್ದ ನೆಹರು ನಗರ ವಿಳಾಸಕ್ಕೆ ತೆರಳಿದ್ದಾರೆ.

ಉಮೇರಾ ಖಾನಂ ಅಲ್ಲ, ಉಮೇರಾ ಬಾನು: ಗ್ರಾಮ ಲೆಕ್ಕಿಗ ಅಜೀಂ ಖಾನ್ ತಲುಪಿದ್ದು ಒಂದು ಗುಡಿಸಲಿಗೆ. ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ಹೊಂದಿರುವ ಮಹಿಳೆ ಈ ಗುಡಿಸಲಿನಲ್ಲಿ ವಾಸವಿದ್ದಾರೆಯೇ? ಎಂದು ಸಂಶಯಗೊಂಡ ಅವರು, ಆಕೆಯನ್ನು ಕರೆದು ತಾನು ಗ್ರಾಮ ಲೆಕ್ಕಿಗ ಹಾಗೂ ಯಾವ ಕೆಲಸಕ್ಕೆ ಬಂದಿದ್ದೇನೆ ಎಂಬುದನ್ನು ತಿಳಿಸದೇ, ಆಧಾರ್ ವೆರಿಫಿಕೇಷನ್‌ಗೆ ಬಂದಿರುವುದಾಗಿ ತಿಳಿಸಿದ್ದಲ್ಲದೇ, ಆಕೆಯ ಹೆಸರನ್ನು ಕೇಳಲಾಗಿ 'ಉಮೇರಾ ಬಾನು' ಎಂದು ಹೇಳಿದ್ದಾಳೆ. ಪತಿಯ ಹೆಸರನ್ನು ಅಕ್ರಂ ಎಂದು ಹೇಳಿದಾಗ ಇದು ಭೂ ಮಾಲೀಕರಾದ ಉಮೇರಾ ಖಾನಂ ಅಲ್ಲ ಎಂಬ ನಿರ್ಧಾರಕ್ಕೆ ಬಂದ ಅಜೀಂ ಖಾನ್, ಬೇರೇನೂ ಮಾತನಾಡದೇ ಅಲ್ಲಿಂದ ತೆರಳಿದ್ದಾರೆ.

ನಂತರ ದಾನಪತ್ರ ಮಾಡಿಸಿಕೊಂಡಿರುವ ಈಕೆಯ ಮಗಳು ಎನ್ನಲಾದ ಸಲ್ಮಾ ಸುಲ್ತಾನ ವಿಳಾಸವನ್ನು ಹುಡುಕಿಕೊಂಡು ಹೋದರೆ ಆಕೆಯೂ ಗುಡಿಸಲು ವಾಸಿಯೇ. ಆಧಾರ್ ವೆರಿಫಿಕೇಷನ್ ಎಂದು ಹೇಳಿ ಆಕೆಯ ತಾಯಿಯ ಹೆಸರನ್ನು ಕೇಳಿದರೆ 'ಹತೀಜಾ' ಎಂದು ಹೇಳಿದ್ದಾಳೆ. ಈಕೆ ಉಮೇರಾ ಬಾನುವಿನ ಮಗಳೂ ಅಲ್ಲ. ಮಾಫಿಯಾದವರು ಈ ಅಮಾಯಕರನ್ನು ಬಳಸಿಕೊಂಡು ಭೂಮಿ ಕಬಳಿಸಲು ಸಂಚು ರೂಪಿಸಿದ್ದಾರೆ ಎಂಬುದನ್ನು ಮನವರಿಕೆ ಮಾಡಿಕೊಂಡ ಅಜೀಂ ಖಾನ್, ಆಕೆಗೆ ವಿಷಯವನ್ನು ತಿಳಿಸಿ, 'ನಿಮ್ಮ ಹೆಸರಿನಲ್ಲಿ ಕೋಟ್ಯಾಂತರ ರೂ. ಮೌಲ್ಯದ ಭೂಮಿಯನ್ನು ವಂಚಿಸಲು ಸಂಚು ನಡೆದಿದೆ. ನೀವಾಗಿಯೇ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ನೋಂದಣಿಯನ್ನು ರದ್ದುಪಡಿಸಿ, ಇಲ್ಲದಿದ್ದರೆ ಜೈಲಿಗೆ ಹೋಗಬೇಕಾಗುತ್ತದೆ ಎಂದು ಎಚ್ಚರಿಕೆ ಸಮೇತ ಸಲಹೆ ನೀಡಿ ಬಂದಿದ್ದಾರೆ.

ನಂತರ ಕಡತದಲ್ಲಿ ನಕಲಿ ದಾಖಲೆಗಳನ್ನು ಸಲ್ಲಿಸಿರುವುದರಿಂದ ಖಾತೆ ಮಾಡಲು ಸಾಧ್ಯವಿಲ್ಲ ಎಂದು ಷರಾ ಬರೆದು ರೆವೆನ್ಯೂ ಇನ್ಸ್‌ಪೆಕ್ಟರ್‌ಗೆ ಕಳಿಸಿದ್ದಾರೆ. ಆದರೆ ಈ ಭೂಮಿಯ ನಿಜವಾದ ಮಾಲೀಕರು ಯಾರು? ಎಂಬ ಪ್ರಶ್ನೆ ಅಜೀಂ ಖಾನ್‌ಗೆ ಕಾಡುತ್ತಲೇ ಇತ್ತು. ಅವರನ್ನು ಪತ್ತೆ ಹಚ್ಚಬೇಕು ಎಂಬ ತುಡಿತವೂ ಇತ್ತು.

ಕೊನೆಗೂ ನಿಜವಾದ ಮಾಲೀಕರಾದ ಗಾಯಿತ್ರಿಪುರಂನ ಉಮೇರಾ ಖಾನಂ ಅವರನ್ನು ಪತ್ತೆ ಹಚ್ಚಿದ ಅಜೀಂ ಖಾನ್ ಆಸ್ತಿಗೆ ಸಂಬಂಧಿಸಿದ ಅಸಲಿ ದಾಖಲೆ ಪತ್ರಗಳನ್ನು ಪಡೆದು ಪರಿಶೀಲಿಸಲಾಗಿ, ಆಕೆಗೆ ತಂದೆಯಿಂದ ಬಂದ ಜಮೀನು ಅದು ಎಂಬುದು ದೃಢಪಟ್ಟಿದೆ. ಮಾತ್ರವಲ್ಲದೆ ಆಸ್ತಿಗೆ ಸಂಬಂಧಿಸಿದ ಎಲ್ಲಾ ಅಸಲಿ ದಾಖಲೆಗಳು ಆಕೆಯ ಬಳಿ ಇದ್ದವು. ತಡ ಮಾಡದೆ ಆಕೆಯನ್ನು ಪೂರ್ವ ಉಪ ನೋಂದಣಾಧಿಕಾರಿಗಳ ಕಚೇರಿಗೆ ಕರೆತಂದ ಅಜೀಂ ಖಾನ್, ಹಿರಿಯ ಉಪ ನೋಂದಣಾಧಿಕಾರಿ ಹೆಚ್.ಜೆ.ನಾಗರಾಜ ಅವರಿಗೆ ದೂರು ಕೊಡಿಸಿದ್ದಾರೆ. ಅವರೂ ಕೂಡ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಸಂಬಂಧ ಮೈಸೂರು ದಕ್ಷಿಣ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಈ ಪ್ರಕರಣದಲ್ಲಿ ಗ್ರಾಮ ಸಹಾಯಕ ಅಜೀಂ ಖಾನ್ ಅವರು ಕರ್ತವ್ಯ ಪ್ರಜ್ಞೆಯಿಂದ ಆಸ್ತಿಗೆ ಆಧಾರ್ ಸೀಡಿಂಗ್ ಮಾಡಿಸಬೇಕು ಎಂದು ಉಮೇರಾ ಖಾನಂರನ್ನು ಹುಡುಕಿಕೊಂಡು ನೆಹರು ನಗರಕ್ಕೆ ಹೋಗದಿದ್ದರೆ, ಆಕೆ ಗುಡಿಸಲಿನಲ್ಲಿದ್ದುದನ್ನು ಕಂಡು ಸಂಶಯಪಟ್ಟು ತಾನೇ ಒಂದು ತನಿಖೆಯನ್ನು ನಡೆಸದಿದ್ದರೆ ಅಸಲಿ ಉಮೇರಾ ಖಾನಂ ಅವರ ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ಬೇರೆಯವರ ಪಾಲಾಗಿಬಿಡುತ್ತಿತ್ತು.

> ಈ ಸಂಬಂಧಪಟ್ಟ ದಾನಪತ್ರಗಳನ್ನು ಯಾರೋ ಒಬ್ಬರು ನನಗೆ ತೋರಿಸಿ ದಾಖಲೆಗಳು ಸರಿ ಇದೆಯೇ? ಖರೀದಿ ಮಾಡಬಹುದೇ ಎಂದು ಸಲಹೆ ಕೇಳಿದ್ದರು. ದಾಖಲೆಗಳು ಸರಿಯಾಗಿಯೇ ಇದ್ದ ಕಾರಣ ಖರೀದಿಸ ಬಹುದು ಎಂದು ನಾನೂ ಕೂಡ ಹೇಳಿದ್ದೆ. ಒಂದೆರಡು ದಿನದಲ್ಲೇ ಖಾತೆ ವರ್ಗಾವಣೆಗಾಗಿ ಇದೇ ಆಸ್ತಿಗಳ ಕಡತ ನನ್ನ ಬಳಿಗೆ ಬಂದಾಗ ಅವುಗಳಿಗೆ ಆಧಾರ್ ಸೀಡಿಂಗ್ ಆಗಿಲ್ಲ ಎಂಬುದನ್ನು ಗಮನಿಸಿ ಈ ಪ್ರಕ್ರಿಯೆ ಮುಗಿಸಿಬಿಡೋಣ ಎಂದು ನೆಹರು ನಗರದ ವಿಳಾಸಕ್ಕೆ ಹೋಗಿದ್ದೆ. ಆದರೆ ಅಲ್ಲಿದ್ದ ಮಹಿಳೆ ಗುಡಿಸಲಿನಲ್ಲಿ ವಾಸವಿದ್ದರಿಂದ ಕೋಟ್ಯಾಂತರ ರೂ. ಮೌಲ್ಯದ ಆಸ್ತಿಗೆ ಈಕೆ ಹೇಗೆ ಮಾಲೀಕಳಾಗುತ್ತಾಳೆ ಎಂಬ ಸಂಶಯ ನನಗೆ ಬಂತು. ಆಧಾರ್ ವೆರಿಫಿಕೇಷನ್‌ಗೆ ಬಂದಿದ್ದೇನೆ ಎಂದು ತಿಳಿಸಿ, ಆಕೆಯ ಹೆಸರನ್ನು ಕೇಳಿದಾಗ ಉಮೇರಾ ಬಾನು, ಪತಿಯ ಹೆಸರು ಅಕ್ರಂ ಎಂದು ಹೇಳಿದಳು. ಅಂದರೆ ಈ ಆಸ್ತಿಯ ನಿಜವಾದ ಮಾಲೀಕಳು ಈಕೆಯಲ್ಲ ಎಂಬುದು ಮನವರಿಕೆಯಾಯಿತು. ದಾನಪತ್ರ ಬರೆಸಿಕೊಂಡ ಸಲ್ಮಾ ಸುಲ್ತಾನ್ ವಿಳಾಸಕ್ಕೆ ಹೋದರೆ ಆಕೆಯೂ ಗುಡಿಸಲಲ್ಲೇ ಇದ್ದಾಳೆ. ತಾಯಿಯ ಹೆಸರು 'ಹತೀಜಾ' ಎಂದು ಹೇಳಿದಳು. ಒಟ್ಟಾರೆ ಇವರಿಬ್ಬರೂ ಮಹಿಳೆಯರು ಅಮಾಯಕರಾಗಿದ್ದು, ಅವರಿಗೆ ಕೆಲವು ಸಾವಿರ ರೂ.ಗಳನ್ನು ಕೊಟ್ಟು ವಂಚಕರು ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ಕಬಳಿಸಲು ಸಂಚು ರೂಪಿಸಿದ್ದಾರೆ ಎಂಬುದೂ ನನಗೆ ಮನವರಿಕೆಯಾಯಿತು. ಆಕೆಗೆ ವಿಷಯ ತಿಳಿಸಿ ನೋಂದಣಿ ರದ್ದುಪಡಿಸುವಂತೆ ಸೂಚಿಸಿದ್ದೆ. ಆದರೆ ಆಕೆ ಬರಲಿಲ್ಲ. ನಂತರ ಅಸಲೀ ಮಾಲೀಕರಾದ ಉಮೇರಾ ಖಾನಂ ಪತ್ತೆಯಾದ ನಂತರ ಅವರ ದಾಖಲೆಗಳನ್ನು ಪರಿಶೀಲಿಸಿ ನೈಜತೆಯನ್ನು ಖಚಿತಪಡಿಸಿಕೊಂಡು ಉಪ ನೋಂದಣಾಧಿಕಾರಿಗಳ ಕಚೇರಿಗೆ ದೂರು ಕೊಡುವಂತೆ ಅವರಿಗೆ ತಿಳಿಸಿದ್ದೆ. ಇದರಲ್ಲಿ ನನ್ನ ಸಾಧನೆ ಏನೂ ಇಲ್ಲ. ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ ಅಷ್ಟೇ. ಆದರೆ ಅಸಲಿ ಮಾಲೀಕರಿಗೆ ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ಉಳಿದಿದ್ದು, ಆತ್ಮ ತೃಪ್ತಿ ತಂದಿದೆ.
>
> - ಅಜೀಂ ಖಾನ್, ರಮ್ಮನಹಳ್ಳಿ ಗ್ರಾಮ ಸಹಾಯಕ.

ಮುಖ್ಯಮಂತ್ರಿ ಮಾಡಿದರೆ ಪಕ್ಷ ವಿಭಜನೆ

ಬದಲಾವಣೆ ತೀರ್ಮಾನ ಕೈಗೊಳ್ಳಬೇಡಿ ಎಂದಿದ್ದಾರೆ. ಸಚಿವ ಶರಣಪ್ರಕಾಶ್ ಪಾಟೀಲ್ ಇದೇ ವೇಳೆಗೆ ಖರ್ಗೆ ಭೇಟಿ ಮಾಡಿದರಾದರೂ, ಈ ಸಭೆಯಿಂದ ದೂರ ಉಳಿದಿದ್ದರು. ಶಾಸಕಾಂಗ ಪಕ್ಷದಲ್ಲಿ ಈಗಲೂ ಸಿದ್ದರಾಮಯ್ಯ ಅವರೇ ಮೇಲುಗೈ ಹೊಂದಿದ್ದಾರೆ. ಒಂದು ವೇಳೆ ಅವರನ್ನು ಬದಲಾಯಿಸಿ ಶಿವಕುಮಾರ್ ಅವರನ್ನು ತರಲು ಹೊರಟರೆ ಒಂದು ವರ್ಗ ಪಕ್ಷ ತೊರೆಯುವ ಸಾಧ್ಯತೆ ಇದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಬಲಾಢ್ಯವಾಗಿದ್ದು, ಇದನ್ನು ಮುಂದುವರೆಸಲು ನೀವು ಕೆಲವು ಕಠಿಣ ತೀರ್ಮಾನ ಕೈಗೊಳ್ಳಲೇಬೇಕು. ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡಲೇಬೇಕೆಂದರೆ, ನೀವೇ ಅಧಿಕಾರ ವಹಿಸಿಕೊಳ್ಳಿ. ಇಲ್ಲವೇ ಡಾ.ಪರಮೇಶ್ವರ್ ಅಥವಾ ಜಾರಕಿಹೊಳಿ ಇವರಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿ ಎಂದಿದ್ದಾರೆ.

ಅಷ್ಟೇ ಅಲ್ಲ, ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದಲೂ ಬದಲಾಯಿಸಿ ಬೇರೆಯವರನ್ನು ಆಯ್ಕೆ ಮಾಡಿ ಎನ್ನುವ ಮೂಲಕ ಸಿದ್ದರಾಮಯ್ಯ ಏಕೆ ಉಳಿಯಬೇಕೆಂಬ ಬಗ್ಗೆ ವಕಾಲತ್ತು ವಹಿಸಿದ್ದಾರೆ. ಸಚಿವರುಗಳ ಮಾತುಗಳನ್ನು ಆಲಿಸಿದ ಖರ್ಗೆ ಅವರು, ಶಿವಕುಮಾರ್ ಏನೇ ಆಗಿರಬಹುದು, ಪಕ್ಷ ಸಂಘಟನೆ ಮತ್ತು ಸರ್ಕಾರ ತರುವಲ್ಲಿ ಅವರ ಪಾತ್ರವೂ ಇದೆ.

ಯಾರೇ ಅಧಿಕಾರಕ್ಕೆ ಬರಲಿ ಹೈಕಮಾಂಡ್ ತೀರ್ಮಾನವೇ ಅಂತಿಮ. ವರಿಷ್ಠರು ಎಲ್ಲರ ಹಿತ ಕಾಪಾಡುತ್ತಾರೆ, ದುಡುಕುವ ಅಗತ್ಯವಿಲ್ಲ. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನೂ ಸೇರಿದಂತೆ ಎಲ್ಲರೂ ಬದ್ಧರಾಗಿರಬೇಕು.

ವ್ಯಕ್ತಿಗಿಂತ ನಮಗೆ ಪಕ್ಷ ಮುಖ್ಯ, ಪಕ್ಷದ ಹಿತವನ್ನು ಗಮನದಲ್ಲಿಟ್ಟುಕೊಂಡು ವರಿಷ್ಠರು ಯಾವಾಗ, ಏನು ತೀರ್ಮಾನವನ್ನಾದರೂ ಕೈಗೊಳ್ಳಬಹುದು ಎಂದು ಹೇಳಿ ದೆಹಲಿಗೆ ತೆರಳಿದರು.


ತಾಯಿ, ಪತ್ನಿ ಮೇಲೆ ಮಾರಣಾಂತಿಕ ಹಲ್ಲೆ

ಈ ಸಂಬಂಧ 2024ರಲ್ಲಿ ಆತನ ವಿರುದ್ಧ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾಗಿತ್ತು. ಇಂದು (ಗುರುವಾರ) ನ್ಯಾಯಾಲಯದಲ್ಲಿ ಈ ಪ್ರಕರಣದ ಸಂಬಂಧ ವಿಚಾರಣೆ ನಡೆದಿದ್ದು, ರಾಜಣ್ಣ ನ್ಯಾಯಾಲಯಕ್ಕೆ ಹಾಜರಾಗಿದ್ದ. ಈ ಮಧ್ಯೆ ಆತನ ಸ್ನೇಹಿತನ ಅಪ್ರಾಪ್ತ ಮಗಳು ಇಂದು ನಾಪತ್ತೆಯಾಗಿದ್ದು, ವಿದ್ಯಾರಣ್ಯಪುರಂ ಠಾಣೆಯಲ್ಲಿ ಆಕೆಯ ಪೋಷಕರು ರಾಜಣ್ಣನ ವಿರುದ್ಧ ಸಂಶಯ ವ್ಯಕ್ತಪಡಿಸಿ, ನಾಪತ್ತೆ ಪ್ರಕರಣ ದಾಖಲಿಸಿದ್ದರು.

ರಾತ್ರಿ ವೇಳೆಗೆ ಪೊಲೀಸರು ಬಾಲಕಿಯನ್ನು ಪತ್ತೆ ಹಚ್ಚಿ ಠಾಣೆಗೆ ಕರೆತಂದು ನಾಪತ್ತೆ ಪ್ರಕರಣವನ್ನು ಮುಕ್ತಾಯಗೊಳಿಸಿ, ಆಕೆಯನ್ನು ಪೋಷಕರೊಂದಿಗೆ ಕಳುಹಿಸಿದ್ದರು ಎಂದು ಹೇಳಲಾಗಿದೆ. ಆ ಸಂದರ್ಭದಲ್ಲಿ ತಾಯಿ ಮತ್ತು ಪತ್ನಿಯೊಂದಿಗೆ ರಾಜಣ್ಣ ವಿದ್ಯಾರಣ್ಯಪುರಂ ಠಾಣೆಗೆ ಬಂದಿದ್ದ ಎನ್ನಲಾಗಿದ್ದು, ಪೊಲೀಸರು ಬಾಲಕಿಯನ್ನು ಪೋಷಕರೊಂದಿಗೆ ಕಳುಹಿಸಿದ ನಂತರ ಆಟೋದಲ್ಲಿ ತಾಯಿ ಹಾಗೂ ಪತ್ನಿ ಜೊತೆ ರಾಜಣ್ಣ ತೆರಳುತ್ತಿದ್ದ ವೇಳೆ ಬಾಲಕಿಯ ಕಡೆಯವರು ಕಾರಿನಲ್ಲಿ ಬಂದು ಆಟೋ ಅಡ್ಡಗಟ್ಟಿ ಮೂವರ ಮೇಲೂ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಹಲ್ಲೆಗೊಳಗಾಗಿರುವ ಮೂವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಕೆ.ಆರ್. ಉಪ ವಿಭಾಗದ ಎಸಿಪಿ ರಮೇಶ್ ಕುಮಾರ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ವಿದ್ಯಾರ್ಥಿ ಸಂಘಗಳ ಚುನಾವಣೆ ಕುರಿತು ಚಿಂತನೆ

ಬೆಂಗಳೂರು, ಜು.10(ಕೆಎಂಶಿ)– ಕಾಲೇಜು ಮತ್ತು ವಿಶ್ವವಿದ್ಯಾಲಯ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ಕುರಿತು ಚಿಂತನೆ ನಡೆದಿದೆ ಎಂದು



ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವ ಬೇಡಿಕೆಯನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದರು. ಗ್ಯಾರಂಟಿ ಯೋಜನೆಗಳಿಂದ ಜನರು ಸೋಮಾರಿಗಳಾಗುತ್ತಾರೆ ಎಂಬುದನ್ನು ಬಲವಾಗಿ ಅಲ್ಲಗಳೆದ ಮುಖ್ಯಮಂತ್ರಿ, ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಬಡತನ ಸಂಪೂರ್ಣ ನಿರ್ಮೂಲನೆಗೆ ಒತ್ತುಕೊಟ್ಟಿದ್ದೇವೆ. ಸಮಸಮಾಜ ನಿರ್ಮಾಣಕ್ಕೆ ನಮ್ಮ ಗ್ಯಾರಂಟಿ ಯೋಜನೆಗಳು ಬುನಾದಿ ಆಗಿವೆ. ಕುಟುಂಬದ ಯಜಮಾನಿಗೆ ಮಾಸಿಕ 2,000 ರೂ. ನೀಡುವುದರಿಂದ, ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಡುತ್ತಾಳೆ. ಇದು ಸೋಮಾರಿತನವೇ? ಶಕ್ತಿ ಯೋಜನೆಯಿಂದ ಮಹಿಳೆಯರು ಬಸ್‌ಗಳಲ್ಲಿ ಸಂಚರಿಸುವುದರಿಂದ ಹೇಗೆ ಸೋಮಾರಿಗಳಾಗುತ್ತಾರೆ ಎಂದು ಮರುಪ್ರಶ್ನಿಸಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ: ಕೋರ್ಟ್‌ಗೆ ದರ್ಶನ್ ಹಾಜರು

ಬೆಂಗಳೂರು, ಜು.10– ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಗುರುವಾರ ಆರೋಪಿ ನಟ ದರ್ಶನ್ ಬೆಂಗಳೂರಿನ 64ನೇ ಸಿಸಿಎಚ್ ಕೋರ್ಟಿಗೆ ವಿಚಾರಣೆಗೆ ಹಾಜರಾದರು. ಈ ವೇಳೆ ವಿಚಾರಣೆ ನಡೆಸಿದ ಕೋರ್ಟ್, ವಿಚಾರಣೆಯನ್ನು ಆಗಸ್ಟ್ 12ಕ್ಕೆ ಮುಂದೂಡಿತು. ಆಗಸ್ಟ್ 12ರಂದು ಎಲ್ಲಾ ಆರೋಪಿಗಳು ವಿಚಾರಣೆಗೆ ಹಾಜರಾಗಬೇಕು ಎಂದು ಪೀಠ ಆದೇಶ ಹೊರಡಿಸಿತು. ಪ್ರಕರಣದ ಎ2 ಆರೋಪಿ ನಟ ದರ್ಶನ್ ಹಾಜರಾಗಿದ್ದರೆ, ಎ1 ಪವಿತ್ರಗೌಡ, ಧನರಾಜ್, ವಿನಯ್ ಸೇರಿದಂತೆ ಬಹುತೇಕ ಆರೋಪಿಗಳು ಗೈರುಹಾಜರಾಗಿದ್ದರು. ಹೀಗಾಗಿ ಮತ್ತೆ ಹಾಜರಾಗಲು ಆದೇಶ ನೀಡಲಾಗಿದೆ.



ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಸದ್ಯ ಜಾಮೀನು ಮೇಲೆ ಹೊರಗಿದ್ದಾರೆ. ದರ್ಶನ್ ಅಭಿಮಾನಿ ರೇಣುಕಾಸ್ವಾಮಿ ಅವರನ್ನು ಅಪಹರಿಸಿ ಕೊಲೆ ಮಾಡಿದ ಆರೋಪದ ಮೇಲೆ ನಟ ದರ್ಶನ್, ಪವಿತ್ರಾ ಮತ್ತು ಇತರರನ್ನು ಜೂನ್ 11, 2024ರಂದು ಬಂಧಿಸಲಾಗಿತ್ತು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕೆ 29 ಅಂಶದ ಕಾರ್ಯಕ್ರಮ

ಶಿಕ್ಷಣ ಇಲಾಖೆಯಿಂದ ಅನುಷ್ಠಾನ

ಬೆಂಗಳೂರು, ಜು.10– ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಿಸಲು ಶಿಕ್ಷಣ ಇಲಾಖೆ 29 ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.

ಡಿಸೆಂಬರ್ ಅಂತ್ಯದ ಒಳಗೆ ಪಠ್ಯಕ್ರಮ ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿಯೇ ಪರಿಹಾರ ಬೋಧನೆಗೆ ಕ್ರಮವಹಿಸಬೇಕು. ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳು ಮಾಡಿ, ಶಾಲೆ ಮುಗಿದ ನಂತರ ವಿದ್ಯಾರ್ಥಿಗಳ ಬರವಣಿಗೆ ಗುಣಮಟ್ಟ ಹೆಚ್ಚಿಸಲು, ಓದುವ ಅಭ್ಯಾಸ ಮಾಡಿಸುವುದು. ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ಅವಧಿಯಲ್ಲಿ ಚಟುವಟಿಕೆಗಳನ್ನು ಮಾಡಿಸುವುದು. ಮೊಬೈಲ್ ಫೋನ್ ಬಳಕೆ ಸೀಮಿತ ಮಾಡುವುದು. ಮಧ್ಯಾಹ್ನದ ಬಿಸಿಯೂಟ, ಹಾಲು, ಮೊಟ್ಟೆ ಸರಿಯಾಗಿ ನೀಡಿ ಸಮತೋಲನ ಆರೋಗ್ಯ ಶೈಲಿ ರೂಪಿಸುವುದು. ಶಾಲೆಗಳಲ್ಲಿ ತಿಂಗಳಿಗೆ ಎರಡು ಬಾರಿ ಪೋಷಕರ ಹಾಗೂ ಶಿಕ್ಷಕರ ಸಭೆ ನಡೆಸುವುದು. ವಿದ್ಯಾರ್ಥಿಗಳಿಗೆ ಪರೀಕ್ಷೆ ಭಯ ಹೋಗಲಾಡಿಸಲು ಮಾದರಿ ಪ್ರಶ್ನೆ ಪತ್ರಿಕೆ ಸಹಾಯ ಮಾಡಲು ಕ್ರಮವಹಿಸುವುದು. ವಿಷಯವಾರು ನೀಲಿ ನಕ್ಷೆ ಪ್ರಕಟಿಸಲು ಕ್ರಮವಹಿಸುವುದು. ಪೂರ್ವ ಸಿದ್ಧತಾ ಪರೀಕ್ಷೆಗಳಿಗೆ ಅಗತ್ಯ ಕ್ರಮವಹಿಸುವುದು. ಆರೋಗ್ಯ ಇಲಾಖೆ ಸಹಾಯದಲ್ಲಿ ಶಾಲೆಯಲ್ಲಿಯೇ ಆರೋಗ್ಯ ತಪಾಸಣೆ ನಡೆಸುವುದು. ಶಾಲೆಯಲ್ಲಿಯೇ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಕಾರ್ಯಾಗಾರ ಮಾಡುವುದು. ಕಡಿಮೆ ಸಾಧನೆಯ ಶಾಲೆಗಳನ್ನು ಗುರುತಿಸಿ ಫಲಿತಾಂಶ ವೃದ್ಧಿಗೆ ಕ್ರಮವಹಿಸುವುದು. ಶಾಲೆಗೆ ವಿದ್ಯಾರ್ಥಿಗಳು ಗೈರಾಗದಂತೆ ಕ್ರಮವಹಿಸುವುದು. ಶಾಲೆಯಿಂದ ಹೊರಗೆ ಉಳಿದ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರುವುದು. 10ನೇ ತರಗತಿಯ ವಿಷಯವಾರು, ಘಟಕವಾರು ಪ್ರಶ್ನೆ ಕೋಷ ತಯಾರಿ ಮಾಡುವುದು. ಶಾಲೆಗಳಲ್ಲಿ ಇಬ್ಬರು ವಿದ್ಯಾರ್ಥಿಗಳ ಗುಂಪು ಮಾಡುವ ಮೂಲಕ ನಿಧಾನಗತಿ ಕಲಿಕಾ ವಿದ್ಯಾರ್ಥಿಗಳಿಗೆ ಕಲಿಕೆಯ ಬಲವರ್ಧನೆ ಮಾಡುವುದು.

ಬೆಂಗಳೂರು ಬೀದಿ ನಾಯಿಗಳಿಗೆ ಸದ್ಯದಲ್ಲೇ ಬಿರಿಯಾನಿ ಭಾಗ್ಯ!

ಬೆಂಗಳೂರು, ಜು. 10– ರಾಜ್ಯದ ಕಾಂಗ್ರೆಸ್ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇದೀಗ ದೇಶದಲ್ಲೇ ಮೊದಲ ಬಾರಿಗೆ ಬೀದಿ ನಾಯಿಗಳಿಗೆ ದಿನನಿತ್ಯ ಬಾಡೂಟ ಒದಗಿಸಲು ಮುಂದಾಗಿದ್ದು, ಈ ಬಗ್ಗೆ ಸ್ಪಷ್ಟ ಯೋಜನೆಯೊಂದಿಗೆ ಟೆಂಡರ್ ಕರೆದಿದೆ. ಜನತೆಗೆ ಸಮರ್ಪಕ ಮೂಲಸೌಕರ್ಯಗಳಾದ ರಸ್ತೆ, ಆಹಾರ, ನೀರು, ವಸತಿ ವ್ಯವಸ್ಥೆ ಕಲ್ಪಿಸದಿದ್ದರೂ, ಬೀದಿ ನಾಯಿಗಳಿಗೆ ಪ್ರತಿದಿನ ಹೊಟ್ಟೆತುಂಬಾ ಚಿಕನ್ ಬಿರಿಯಾನಿ ನೀಡಲು ಬಿಬಿಎಂಪಿ 2.80 ಕೋಟಿ ರೂ. ವೆಚ್ಚದ ಯೋಜನೆ ಜಾರಿಗೆ ತರುವತ್ತ ಹೆಜ್ಜೆ ಹಾಕಿದೆ.



ಗುರುಪೂರ್ಣಿಮೆ ವಿಶೇಷ ಪೂಜೆ...



ಮೈಸೂರಿನ ಜೆ.ಪಿ.ನಗರದಲ್ಲಿರುವ ಶ್ರೀ ಶಿರಡಿ ಬಾಬಾ ದೇವಸ್ಥಾನದಲ್ಲಿ ಗುರುಪೂರ್ಣಿಮೆ ಅಂಗವಾಗಿ ನಡೆದ ವಿಶೇಷ ಪೂಜೆಯಲ್ಲಿ ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್ ಪಾಲ್ಗೊಂಡು ಆಶೀರ್ವಾದ ಪಡೆದರು. ಈ ವೇಳೆ ದೇವಾಲಯ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಸತ್ರ ನ್ಯಾಯಾಲಯ ಅಪರ ವಕೀಲ ತಿಮ್ಮಯ್ಯ, ದೇವಾಲಯದ ಅಧ್ಯಕ್ಷರು, ಡಿಸಿಸಿ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ದೇವಾಲಯದ ಪ್ರಧಾನ ಅರ್ಚಕ ವೆಂಕಟರಮಣ ಭಟ್, ಆಡಳಿತ ಮಂಡಳಿ ಸದಸ್ಯ ಮೃತ್ಯುಂಜಯ, ಯುವ ಮುಖಂಡ ನವೀನ್ ಮತ್ತಿತರರು ಹಾಜರಿದ್ದರು.

ಡಿಸಿಪಿ ಬಿಂದುಮಣಿ ಅವರಿಗೆ ಅಭಿನಂದನೆ...



ಮೈಸೂರು ನಗರ ಕಾನೂನು–ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರಾದ ಕುಮಾರಿ ಬಿಂದುಮಣಿ ಅವರನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ರಾಜ್ಯ ಉಪಾಧ್ಯಕ್ಷ ನಾಗರಾಜ್, ಕಾರಾಗೃಹ ಮಂಡಳಿ ಸದಸ್ಯ ಪವನ್ ಸಿದ್ದರಾಮ, ಬಿ.ಮರಿಯಪ್ಪ, ಪುಟ್ಟರಾಜ ಯಾದವ್, ಮದನ್, ಶುಭ, ಆಶಾ ಇನ್ನಿತರರು ಅಭಿನಂದಿಸಿದರು.

ಮೈಸೂರಲ್ಲಿ ಗುರುಪೂರ್ಣಿಮೆ ಭಕ್ತಿಭಾವದ ಅದ್ದೂರಿ ಆಚರಣೆ

● ವಿವಿಧ ದೇವಾಲಯಗಳಲ್ಲಿ ದೇವರ ದರ್ಶನ ಪಡೆದು ಪುನೀತರಾದ ಸಾವಿರಾರು ಭಕ್ತರು ● ಮುಂಜಾನೆಯಿಂದಲೇ ವಿಶೇಷ ಪೂಜಾ ಕೈಂಕರ್ಯ ● ಹಲವೆಡೆ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು, ಜು.10(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದು ಗುರುಪೂರ್ಣಿಮೆಯನ್ನು ಭಕ್ತಿಭಾವ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು. ನಗರದ ಗುರು ರಾಘವೇಂದ್ರ ಮಂದಿರ, ಗುರು ಸಾಯಿ ಮಂದಿರ ಸೇರಿದಂತೆ ಹಲವು ದೇವಾಲಯಗಳಲ್ಲಿ ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು.

ನಗರದ ಬಲ್ಲಾಳ್ ವೃತ್ತ, ನಾರಾಯಣ ಶಾಸ್ತ್ರಿ ರಸ್ತೆ, ಜಯಲಕ್ಷ್ಮಿಪುರಂನಲ್ಲಿರುವ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದಲ್ಲಿ ಇಂದು ಮುಂಜಾನೆಯಿಂದಲೇ ವಿವಿಧ ಪೂಜಾ ಕೈಂಕರ್ಯ ಆರಂಭವಾಯಿತು. ರಾಯರಿಗೆ ಅಭಿಷೇಕ, ಕುಂಕುಮಾರ್ಚನೆ, ಅಲಂಕಾರ ಮಾಡಿ ಮಂಗಳಾರತಿ ಮಾಡಲಾಯಿತು. ಇಂದು ಮುಂಜಾನೆಯಿಂದ ರಾತ್ರಿವರೆಗೆ ಸಾವಿರಾರು ಭಕ್ತರು ಶ್ರೀ ಗುರು ರಾಘವೇಂದ್ರ ಸ್ವಾಮಿ ಅವರ ದರ್ಶನ ಪಡೆದು ಧನ್ಯತಾ ಭಾವ ಮೆರೆದರು. ದೇವರ ದರ್ಶನ ಪಡೆದ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ನಗರದ ತ್ಯಾಗರಾಜ ರಸ್ತೆಯ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ 87ನೇ ವರ್ಷದ ಗುರುಪೂರ್ಣಿಮಾ ಮಹೋತ್ಸವವನ್ನು ಭಕ್ತಿ ಭಾವ ಹಾಗೂ ವಿಜೃಂಭಣೆಯಿಂದ ಆಚರಣೆ ಮಾಡಲಾಯಿತು. ಬೆಳಿಗ್ಗೆ ಸಾಯಿಬಾಬರಿಗೆ ಮಹಾಲಕ್ಷಾರ್ಚನೆ, ಕಳಸ ಸ್ಥಾಪನೆ, ಶಾಂತಿ ಹೋಮಗಳು, ಉತ್ಸವಾದಿ ಸೇವೆಗಳು ನೆರವೇರಿದವು.

ನಂತರ ಬೆಳಗ್ಗೆ 7.30 ಗಂಟೆಗೆ ಕಾಕಡ ಆರತಿ, ಮಹಾಗಣಪತಿ ಪೂಜೆ, ಶ್ರೀ ಸಾಯಿನಾಥರಿಗೆ ಮಹಾಭಿಷೇಕ, ಮಹಾಲಕ್ಷಾರ್ಚನೆ ನಂತರ ಅನ್ನಸಂತರ್ಪಣೆ ನಡೆಸಲಾಯಿತು. ಶುಕ್ರವಾರದ ಕಾರ್ಯಕ್ರಮ– ಬೆಳಗ್ಗೆ 7.30 ಗಂಟೆಗೆ ಕಾಕಡ ಆರತಿ, ಮಹಾಗಣಪತಿ ಪೂಜೆ, ಕಳಸ ಸ್ಥಾಪನೆ, ನವಗ್ರಹ ಪೂಜೆ ಹಾಗೂ ಸರ್ವರ ಕಲ್ಯಾಣಕ್ಕಾಗಿ ಶಾಂತಿ ಹೋಮ, ಪೂರ್ಣಾಹುತಿ, ಮಹಾಲಕ್ಷಾರ್ಚನೆ, ಪುಷ್ಪ ವಿಸರ್ಜನೆ, ಶ್ರೀ ಸಾಯಿನಾಥರಿಗೆ ಅಭಿಷೇಕ, ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 7.30 ಗಂಟೆಗೆ ಮೈಸೂರಿನ ಕುಮಾರಿ ಹಂಸಿನಿ ಮತ್ತು ಎಸ್.ಕುಮಾರ್ ಅವರಿಂದ ಸುಗಮ ಸಂಗೀತ ಮತ್ತು ಭಕ್ತಿಗೀತೆ ಕಾರ್ಯಕ್ರಮ ಆಯೋಜಿಸಲಾಗಿದೆ. ಶನಿವಾರ–ಬೆಳಗ್ಗೆ 7 ಗಂಟೆಗೆ ಕಾಕಡ ಆರತಿ, ತರುವಾಯ ರಾತ್ರಿ 10.30 ಗಂಟೆಗೆ ಶ್ರೀ ಸಾಯಿಬಾಬರ ವಿಜೃಂಭಣೆಯ ಉತ್ಸವ ನೆರವೇರಲಿದೆ. ಭಾನುವಾರ–ಬೆಳಗ್ಗೆ 7.30 ಗಂಟೆಗೆ ಕಾಕಡ ಆರತಿ, ಸಂಜೆ 7 ಗಂಟೆಗೆ ಉಯ್ಯಾಲೋತ್ಸವ ಹಾಗೂ ರಾತ್ರಿ 7.30 ಗಂಟೆಗೆ ಮೈಸೂರಿನ ವಿದ್ವಾನ್ ರವಿ ಕುಮಾರ್ ಮತ್ತು ವೃಂದದವರಿಂದ ಸ್ವರಾಲಯ ವಾದ್ಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸೋಮವಾರ–ಬೆಳಗ್ಗೆ 7.30 ಗಂಟೆಗೆ ಕಾಕಡ ಆರತಿ, ಸಂಜೆ 7.30 ಗಂಟೆಗೆ ಗಾನವಿಶಾರದ ಸಂಗೀತ ವೃಂದದವರಿಂದ ಭಜನೆ ಕಾರ್ಯಕ್ರಮ ಆಯೋಜಿಸಲಾಗಿದೆ. ರಾತ್ರಿ 8.30 ಗಂಟೆಗೆ ಶಯನೋತ್ಸವ, ಸುವರ್ಣಭಾಂಡ ವಿಸರ್ಜಿಸಲಾಗುವುದು. ಒಟ್ಟಾರೆ ಗುರುಪೂರ್ಣಿಮೆಯನ್ನು ನಗರದ ಹಲವು ದೇವಸ್ಥಾನಗಳಲ್ಲಿ ಅದ್ದೂರಿಯಿಂದ ಆಚರಿಸಲಾಯಿತು.



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಶ್ರೀ ಗುರು ರಾಘವೇಂದ್ರ ಮಠದಲ್ಲಿ ಗುರುವಾರ ಗುರುಪೂರ್ಣಿಮೆ ಹಿನ್ನೆಲೆ ರಾಯರ ದರ್ಶನ ಪಡೆಯಲು ನೂರಾರು ಜನರು ಸೇರಿದ್ದರು.

ಗುರುಪೂರ್ಣಿಮೆ ಪೌರಾಣಿಕ ಹಿನ್ನೆಲೆ

ಹಿಂದೂ ಪಂಚಾಂಗದ ಪ್ರಕಾರ ಆಷಾಢ ಮಾಸದ ಹುಣ್ಣಿಮೆ ದಿನವನ್ನು ಗುರುಪೂರ್ಣಿಮೆಯಾಗಿ ಆಚರಿಸಲಾಗುತ್ತದೆ. ಮೊದಲ ಮಾತು ಹಾಗೂ ಅಕ್ಷರ ಕಲಿಸಿದ ತಂದೆ–ತಾಯಿ, ಗುರು–ಹಿರಿಯರನ್ನು ಈ ದಿನದಂದು ಭಕ್ತಿಭಾವದಿಂದ ನೆನೆಯಲಾಗುತ್ತದೆ.

ಬೇರೆ ದಿನಗಳಿಗಿಂತ ಗುರುಪೂರ್ಣಿಮೆ ದಿನದಂದು ಗುರು ಸೂತ್ರದ ಪ್ರಭಾವ ಸಾವಿರ ಪಟ್ಟು ಹೆಚ್ಚಾಗಿರುತ್ತದೆ. ಸಂಸ್ಕೃತದಲ್ಲಿ ಗು ಅಂದರೆ ಅಂಧಕಾರ ಅಥವಾ ಅಜ್ಞಾನ, ರು ಅಂದರೆ ದೂರ ಮಾಡುವುದು ಎಂದರ್ಥ. ಅಂದರೆ ಅಂಧಕಾರವನ್ನು ದೂರ ಮಾಡುವುದು ಗುರು ಎಂಬುದು ಇದರ ಒಳಾರ್ಥವಾಗಿದೆ.

ಶಿವನು ಸಪ್ತರ್ಷಿಗಳಿಗೆ ಯೋಗ ವಿದ್ಯೆಯನ್ನು ಧಾರೆಯೆರೆದು ಪ್ರಥಮ ಗುರುವಾದನು ಎಂದು ಪುರಾಣ ಹೇಳುತ್ತದೆ. ಅನೇಕ ವೇದ ಹಾಗೂ ಪುರಾಣಗಳನ್ನು ರಚನೆ ಮಾಡಿದ ಮಹರ್ಷಿ ವೇದವ್ಯಾಸರು ಇದೇ ಗುರುಪೂರ್ಣಿಮೆ ದಿನದಂದು ಜನಿಸಿದರು. ಈ ಹಿನ್ನೆಲೆ ಇವರ ಸ್ಮರಣೆಗಾಗಿ ಗುರುಪೂರ್ಣಿಮೆಯನ್ನು ಭಕ್ತಿಭಾವದಿಂದ ಆಚರಣೆ ಮಾಡಲಾಗುತ್ತದೆ ಎಂದು ಪೌರಾಣಿಕ ಹಿನ್ನೆಲೆ ತಿಳಿಸುತ್ತದೆ.

ಆಫೀಸರ್ಸ್ ಕ್ಲಬ್‌ಗೆ ಎ, ಬಿ ದರ್ಜೆ ಅಧಿಕಾರಿಗಳೂ ಸದಸ್ಯರಾಗಬಹುದು

ಮೈಸೂರು, ಜು.10(ಜಿಎ)–ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಇರುವ ಆಫೀಸರ್ಸ್ ಕ್ಲಬ್‌ಗೆ ಎ ಮತ್ತು ಬಿ ದರ್ಜೆಯ ಅಧಿಕಾರಿ ವರ್ಗ ಸದಸ್ಯರಾಗಬಹುದಾಗಿದೆ ಎಂದು ಕ್ಲಬ್‌ನ ಕಾರ್ಯದರ್ಶಿ ಪ್ರೊ.ಜಿ.ಟಿ.ರಾಮಚಂದ್ರಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಕ್ಲಬ್‌ನಲ್ಲಿ 286 ಮಂದಿ ಸದಸ್ಯರಾಗಿ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇದು ಗೆಜೆಟೆಡ್ ಅಧಿಕಾರಿ ವರ್ಗ ಹಾಗೂ ಕಾರ್ಪೊರೇಟ್ ವರ್ಗಕ್ಕೆ ಸೀಮಿತವಾದುದಾಗಿದೆ. ಇವರ ಕುಟುಂಬದ ಸದಸ್ಯರು ಕ್ರೀಡಾ ಚಟುವಟಿಕೆ, ಆರೋಗ್ಯ ಶಿಬಿರ, ಸಾಂಸ್ಕೃತಿಕ ಸಂಜೆ ಮೊದಲಾದವರು ಪ್ರಯೋಜನ ಪಡೆಯಬಹುದಾಗಿದೆ. ಈ ವರ್ಷ 500 ಸದಸ್ಯರು ನೋಂದಣಿಯಾಗುವ ವಿಶ್ವಾಸವಿದೆ ಎಂದರು.

ಕ್ಲಬ್ ಪ್ರಶಾಂತವಾದ ಸ್ಥಳದಲ್ಲಿದ್ದು, ಯಾವುದೇ ಸಮಸ್ಯೆಗಳಿಲ್ಲ. ಮುಂದಿನ ದಿನಗಳಲ್ಲಿ ಜಿಮ್, ಅತಿಥಿ ಗೃಹ ನಿರ್ಮಾಣ ಮಾಡಿ ಸದಸ್ಯರಿಗೆ ಮತ್ತಷ್ಟು ಅನುಕೂಲ ಮಾಡುವ ಉದ್ದೇಶವಿದೆ. ನೋಂದಣಿ ಶುಲ್ಕ 3 ಸಾವಿರ ರೂ. ನಿಗದಿ ಪಡಿಸಿದ್ದು, ಇದು ಎಲ್ಲಾ ಕ್ಲಬ್‌ಗಳಿಗೆ ಹೋಲಿಕೆ ಮಾಡಿದರೆ ಅತ್ಯಂತ ಕಡಿಮೆ ಎಂದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಡಾ.ಷಡಕ್ಷರ ಮೂರ್ತಿ ಉಪಸ್ಥಿತರಿದ್ದರು.

ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಮಿಡ್‌ಟೌನ್ ನೂತನ ಪದಾಧಿಕಾರಿಗಳ ಪದಗ್ರಹಣ



ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಮಿಡ್‌ಟೌನ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜೆಎಲ್‌ಬಿ ರಸ್ತೆಯಲ್ಲಿರುವ ಆರ್‌ಸಿಎಲ್ ಹಾಲ್‌ನಲ್ಲಿ ನಡೆಯಿತು. ಡಾ.ಸಾರಿಕಾ ಪ್ರಸಾದ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಚಿತ್ರದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತಿ ಮನುಪ್ರಸಾದ್, ಸ್ಮಿತಾ ಅನಿಲ್, ಶಮಾ ಮಿಲ್ಟನ್, ಸಂಪಾದಕರಾದ ಕಲಾ ಸತ್ಯೇಂದ್ರ, ಜಂಟಿ ಕಾರ್ಯದರ್ಶಿ ಜಯಲಕ್ಷ್ಮಿ ರಾಜೀವ್, ಅಶ್ವಿನಿ, ಅಧ್ಯಕ್ಷೆ ಸಂಧ್ಯಾ ಸುರೇಶ್, ಕಾರ್ಯದರ್ಶಿ ರಶ್ಮಿ ಕಾವೇರಮ್ಮ, ಶ್ರೀಮತಿ ಸಂಧ್ಯಾ ಮೋಹನ್, ಸವಿತಾ ವೆಂಕಟೇಶ್, ಲಾವಣ್ಯ ಸವಿತಾ ಶ್ರೀನಾಥ್ ಅವರನ್ನು ಕಾಣಬಹುದು.

ಯೇಸುವಿನ ಪವಿತ್ರ ದೇವಾಲಯದಲ್ಲಿ ಜು.17ರಿಂದ ವಾರ್ಷಿಕ ಮಹೋತ್ಸವ



ಮೈಸೂರು, ಜು.10(ಬಿಎಲ್‌ಯು)–ಮೈಸೂರಿನ ಯಾದವಗಿರಿಯ ಯೇಸುವಿನ ಪವಿತ್ರ ಹೃದಯದ ದೇವಾಲಯದಲ್ಲಿ ಜು.17ರಿಂದ ನಾಲ್ಕು ದಿನಗಳ ವಾರ್ಷಿಕ ಮಹೋತ್ಸವ ಆರಂಭವಾಗಲಿದೆ. ಮೊದಲ ದಿನವಾದ ಜು.17ರಂದು ಸಂಜೆ 5.30 ಗಂಟೆಗೆ ಧ್ವಜಾರೋಹಣ ನಡೆಯಲಿದ್ದು, ಗುರು ಮರಿರಾಜ್ ಅವರು ವಿಶೇಷ ಪ್ರಬೋಧನೆ ಹಾಗೂ ಬಲಿಪೂಜೆ ಆರಾಧನೆ ನೆರವೇರಿಸಲಿದ್ದಾರೆ.

ಜು.18ರಂದು ಸಂಜೆ 5.30 ಗಂಟೆಗೆ ವಿಶೇಷ ಪ್ರಬೋಧನೆಯಲ್ಲಿ ಥೋಮಸ್ ಬಾರೋಸ್ ಅವರು ಬಲಿಪೂಜೆ ಹಾಗೂ ಆರಾಧನೆ ನಡೆಸಲಿದ್ದಾರೆ. ಜು.19ರಂದು ಸಂಜೆ 5.30 ಗಂಟೆಗೆ ಮರಿಯ ಜೇವಿಯರ್ ಅವರು ಬಲಿಪೂಜೆ ಹಾಗೂ ಆರಾಧನೆ ನೆರವೇರಿಸಲಿದ್ದಾರೆ. ಕೊನೆಯ ದಿನವಾದ ಜು.20ರಂದು ನಿವೃತ್ತ ಮಹಾಧರ್ಮಾಧ್ಯಕ್ಷ ಡಾ.ಬರ್ನಾರ್ಡ್ ಮೋರಸ್ ಅವರು ದಿವ್ಯ ಬಲಿಪೂಜೆ ನೆರವೇರಿಸುವರು. ಹಬ್ಬದ ಆಚರಣೆ ವೇಳೆ ಗಾಯನ ಬಲಿಪೂಜೆ ನಂತರ ಶೃಂಗರಿಸಲ್ಪಟ್ಟ ತೇರಿನ ಮೆರವಣಿಗೆ ನಡೆಯಲಿದ್ದು, ನಂತರ ಸಹಭೋಜನ ಏರ್ಪಡಿಸಲಾಗಿದೆ.

ಅಂತರರಾಷ್ಟ್ರೀಯ ಸಹಕಾರ ವರ್ಷಾಚರಣೆ



ಅಂತರರಾಷ್ಟ್ರೀಯ ಸಹಕಾರ ವರ್ಷಾಚರಣೆ ಪ್ರಯುಕ್ತ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ನಗರದ ಸಾರ್ವಜನಿಕ ಕಚೇರಿಗಳ ಸಂಕೀರ್ಣ ಕಟ್ಟಡದ ಆವರಣದಲ್ಲಿ ಸ್ವಚ್ಛತೆ, ಗಿಡ ನೆಡುವುದು, ಪರಿಸರದ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಈರೇಗೌಡ, ಮಹಾದೇವಸ್ವಾಮಿ, ಪ್ರಶಾಂತ್ ತಾತಾಚಾರ್, ಭೈರಪ್ಪ, ಮೈಸೂರು ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕ ಪ್ರಸಾದ್ ರೆಡ್ಡಿ, ಉಪನಿಬಂಧಕ ಬೀರೇಂದ್ರ, ಸಹಾಯಕ ನಿಬಂಧಕ ಮನೋಜ್‌ಕುಮಾರ್, ಟಿಎಪಿಸಿಎಂಎಸ್ ನಿರ್ದೇಶಕರು, ಸಹಕಾರ ಇಲಾಖೆ ಹಾಗೂ ಜಿಲ್ಲಾ ಸಹಕಾರ ಯೂನಿಯನ್‌ನ ಸಿಬ್ಬಂದಿ, ಕೆಐಸಿಎಂ ಉಪನ್ಯಾಸಕರು, ಶಿಕ್ಷಣಾರ್ಥಿಗಳು, ಮಹಿಳಾ ಸಹಕಾರ ಬ್ಯಾಂಕ್, ಇತರೆ ಸಹಕಾರ ಸಂಘಗಳ ಸಿಬ್ಬಂದಿ ಉಪಸ್ಥಿತರಿದ್ದರು.

ಎನ್‌ಜೆ ಆಸ್ಪತ್ರೆಯಲ್ಲಿ ಕಾಸ್ಮೆಟಿಕ್ ಗೈನಕಾಲಜಿ ಘಟಕ ಆರಂಭ

ಮೈಸೂರು, ಜು.10(ಜಿಎ)–ಮೈಸೂರಿನ ಎನ್.ಜೆ. ಆಸ್ಪತ್ರೆಯಲ್ಲಿ ಮಹಿಳೆಯರಿಗಾಗಿ ಕಾಸ್ಮೆಟಿಕ್ ಗೈನಕಾಲಜಿ ಘಟಕ ಆರಂಭಿಸಿದ್ದು, ತಮ್ಮ ಗುಪ್ತಾಂಗಗಳಿಗೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿರುವ ಮಹಿಳೆಯರು ಪ್ರಯೋಜನ ಪಡೆಯಬಹುದಾಗಿದೆ ಎಂದು ಆಸ್ಪತ್ರೆಯ ಕಾಸ್ಮೆಟಿಕ್ ಸ್ತ್ರೀರೋಗ ಶಾಸ್ತ್ರಜ್ಞರಾದ ಡಾ.ಡಿ.ಸಿಂಧುಲಕ್ಷ್ಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹಳಷ್ಟು ಮಹಿಳೆಯರು ತಮ್ಮ ಗುಪ್ತಾಂಗಗಳಿಗೆ ಸಂಬಂಧಿಸಿದ ಸಮಸ್ಯೆಗಳಿಂದ ಬಳುತ್ತಿದ್ದು, ಇವರು ಹೇಳಿಕೊಳ್ಳಲು ಸಂಕೋಚ ಅಥವಾ ಅಸಹ್ಯ ಎಂಬ ಭಾವನೆ ಹೊಂದಿರುತ್ತಾರೆ. ಮೂತ್ರ ಮಲ ಸೋರಿಕೆ, ಲೈಂಗಿಕತೆಗೆ ಅಡ್ಡಿ ಮೊದಲಾದ ಸಮಸ್ಯೆಗಳಿಗೆ ಪರಿಹಾರ ದೊರೆಯದೇ ಸಂಕಟ ಅನುಭವಿಸುತ್ತಿರುತ್ತಾರೆ. ಇದಕ್ಕೆ ಇದುವರೆಗೆ ಬಹುದೊಡ್ಡ ನಗರಗಳಲ್ಲಿ ಮಾತ್ರ ಶಸ್ತ್ರಚಿಕಿತ್ಸೆ ಇಲ್ಲದೇ ಲೇಸರ್ ವಿಧಾನದ ಚಿಕಿತ್ಸೆ ಲಭ್ಯವಿತ್ತು. ಆದರೆ ಈಗ ತಮ್ಮ ಪಡುವಾರಹಳ್ಳಿ ಮತ್ತು ಇಲವಾಲದ ಶಾಖೆಯ ಆಸ್ಪತ್ರೆಯಲ್ಲಿಯೂ ಈ ನೂತನ ವಿಧಾನದ ಚಿಕಿತ್ಸೆಗೆ ಅಗತ್ಯವಾದ ಯಂತ್ರೋಪಕರಣ ತರಿಸಿದ್ದು, ತಜ್ಞರೂ ಇದ್ದಾರೆ. ಹೀಗಾಗಿ ಕಡಿಮೆ ವೆಚ್ಚದಲ್ಲಿಯೇ ಚಿಕಿತ್ಸೆ ಪಡೆದು ಸಮಸ್ಯೆಯಿಂದ ಹೊರಬರಬಹುದಾಗಿದೆ ಎಂದರು. ಗೋಷ್ಠಿಯಲ್ಲಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಿ ಡಾ.ಸುಜ್ಯೋತಿ ದುರ್ಗೇಶ್, ಡಾ.ಮಮತಾ ಇದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವ ಕೃಷಿ ಭೂಮಿಯನ್ನು, (ಇನ್ನು ಮುಂದೆ **"ಅನುಸೂಚಿ ಆಸ್ತಿ"** ಎಂದು ಉಲ್ಲೇಖಿಸಲಾದ) ಅದರ ಎಲ್ಲಾ ಹಕ್ಕುಗಳು, ಹಾದಿಗಳು, ನೀರಿನ ಹಕ್ಕುಗಳು, ಹಾದಿ ಮಾರ್ಗಗಳು, ಸೌಲಭ್ಯಗಳು, ಸುಲಭಾಧಿಕಾರಗಳು ಮತ್ತು ಆಸ್ತಿಗೆ ಸಂಬಂಧಿಸಿದ ಅಥವಾ ಆಸ್ತಿಗೆ ಸೇರಿರುವ ಅಥವಾ ಇದುವರೆಗೆ ಸೇರಿರುವಂತೆ ಪರಿಗಣಿಸಲಾದ ಎಲ್ಲ ಅನುದಾನಗಳ ಸಹಿತವಾಗಿ ಶ್ರೀ. **ಈರೇಗೌಡರಿಂದ** ಖರೀದಿಸಲು ಉದ್ದೇಶಿಸಿದ್ದಾರೆ.

ಮಾರಾಟ, ಸಾಗಣೆ, ನಿಯೋಜನೆ, ವರ್ಗಾವಣೆ, ವಿನಿಮಯ, ಉಡುಗೊರೆ, ಅಡಮಾನ, ಸ್ವಾಮ್ಯ, ಗುತ್ತಿಗೆ, ಉಪ–ಗುತ್ತಿಗೆ, ಬಾಡಿಗೆ, ಟ್ರಸ್ಟ್, ನಿರ್ವಹಣೆ, ಉತ್ತರಾಧಿಕಾರ, ಸ್ವಾಧೀನ, ಷೇರು, ಪರವಾನಗಿ ಅಥವಾ ವಿವಾದದ ಸ್ವರೂಪದಲ್ಲಿರುವ ಹಕ್ಕು, ಮೊಕದ್ದಮೆ, ತೀರ್ಪು, ಇತರ ನಿರ್ಬಂಧಿತ ಒಪ್ಪಂದಗಳು, ತಡೆಯಾಜ್ಞೆಯ ಆದೇಶ, ಅಡಮಾನ, ಶುಲ್ಕ, ಲಗತ್ತಿಸುವಿಕೆ, ವಿನಂತಿ, ಸ್ವಾಧೀನ, ಸುಲಭಗೊಳಿಸುವಿಕೆ, ಹೊರೆ, ಒಪ್ಪಂದದ ಪ್ರಿಸ್ಕ್ರಿಪ್ಷನ್ ಹಕ್ಕು ಅಥವಾ ಪೂರ್ವಭಾವಿ ಅಥವಾ ಯಾವುದೇ ಒಪ್ಪಂದ ಅಥವಾ ಇತರ ವಿಲೇವಾರಿ ಅಥವಾ ಬೇರೆ ರೀತಿಯಲ್ಲಿ ಕ್ಲೈಮ್ ಮಾಡುವ ಮೂಲಕ ಅನುಸೂಚಿ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಹಕ್ಕುಗಳು, ಶೀರ್ಷಿಕೆ ಅಥವಾ ಆಸಕ್ತಿಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಈ ನೋಟೀಸ್ ಪ್ರಕಟಿಸಿದ ದಿನಾಂಕದಿಂದ 10 (ಹತ್ತು) ದಿನಗಳ ಅವಧಿಯೊಳಗೆ ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ಮತ್ತು ಪೋಷಕ ಸಾಕ್ಷ್ಯಗಳೊಂದಿಗೆ ತಿಳಿಸಲು ವಿನಂತಿಸಲಾಗಿದೆ, ಇಲ್ಲದಿದ್ದರೆ ಅಂತಹ ವ್ಯಕ್ತಿ/ಗಳ ಹಕ್ಕುಗಳನ್ನು ಮನ್ನಾ ಮಾಡಲಾಗಿದೆ ಮತ್ತು/ಅಥವಾ ಕೈಬಿಡಲಾಗಿದೆ ಎಂದು ಪರಿಗಣಿಸಲಾಗುತ್ತದೆ.


ಮೇಲ್ಕಂಡ ಅನುಸೂಚಿ ಸ್ವತ್ತು

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಹಿರಿಗೆ ಗ್ರಾಮದಲ್ಲಿ ಇರುವ ಸರ್ವೆ ನಂ. 1/B12ಕ್ಕೆ ಸೇರಿರುವ ಒಟ್ಟು 35 ಗುಂಟೆ ಅಳತೆಯ ಕೃಷಿ ಭೂಮಿಯ ಸಂಪೂರ್ಣ ಭಾಗ ಮತ್ತು ಅದರ ಚೆಕ್ಕುಬಂದಿ ಈ ಕೆಳಗಿನಂತೆ ಇದೆ:
ಪೂರ್ವಕ್ಕೆ: ಕಬಿನಿ ನದಿ; **ಪಶ್ಚಿಮಕ್ಕೆ:** ರಸ್ತೆ;
ಉತ್ತರಕ್ಕೆ: ಮಾದಯ್ಯಗೆ ಸೇರಿದ ಭೂಮಿ;
ದಕ್ಷಿಣಕ್ಕೆ: ಮಜೀದ್‌ಗೆ ಸೇರಿದ ಭೂಮಿ.

ವಿಶ್ವಾಸ್. ಎಸ್,
ಅಡ್ವೊಕೇಟ್ ಮತ್ತು ಕನ್ಸಲ್ಟಂಟ್,
ದಿತಿ ಲಾ ಚೇಂಬರ್ಸ್,
ಎಚ್. ಎಂ. ಜಿನೀವಾ ಹೌಸ್, ನಂ. 409,
ಕನ್ನಿಂಗ್ಹಾಮ್ ರಸ್ತೆ, ಬೆಂಗಳೂರು–560052.
ದೂರವಾಣಿ: 9880859592; ಇ–ಮೇಲ್: Vishwas@dhitilaw.com

Orchid TRAVEL & TOURS ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ರಿಯಾಯಿತಿ ದರದಲ್ಲಿ ಪ್ರವಾಸಗಳು 2025
ಎಲ್ಲಾ ಪ್ರವಾಸಗಳು ಮೈಸೂರಿನಿಂದ ಮೈಸೂರಿಗೆ
99000 80793

7/11 ದಿನಗಳ ಸಿಂಗಾಪುರ ಮಲೇಶಿಯ–ಥೈಲ್ಯಾಂಡ್	9 ದಿನಗಳ ಗುಜರಾತ್ ಸ್ಪೆಷಲ್
8 ದಿನಗಳ ನೇಪಾಳ ಸ್ಪೆಷಲ್ (ಶ್ರೀ ಮುಕ್ತಿನಾಥ)	18 ದಿನಗಳ ಗ್ರಾಂಡ್ ಯು.ಕೆ. ಮತ್ತು ಯೂರೋಪ್ (10 ದೇಶಗಳು)
7/11 ದಿನಗಳ ವಿಯೇಟ್ನಾಮ್ ಮತ್ತು ಕಾಂಬೋಡಿಯಾ	7 ದಿನಗಳ ಜಪಾನ್
4 ದಿನಗಳ ಪೂರಿ ಜಗನ್ನಾಥ	6 ದಿನಗಳ ಶ್ರೀಲಂಕಾ (ರಾಮಾಯಣ ಸ್ಪೆಷಲ್)



ಅಂಗಡಿ ಮಳಿಗೆಗೆ ಕಾಡಾನೆ ದಾಳಿ



ಅಂಗಡಿ ಮಳಿಗೆಗೆ ಕಾಡಾನೆ ದಾಳಿ ಮಾಡಿರುವುದು.

ಗೋಣಿಕೊಪ್ಪ ಅಂಗಡಿ ಮಳಿಗೆಗೆ ಕಾಡಾನೆ ದಾಳಿ ನಡೆಸಿ ನಷ್ಟ ಉಂಟು ಮಾಡಿರುವ ಘಟನೆ ನಿನ್ನೆ ರಾತ್ರಿ ಸಂಭವಿಸಿದೆ.

ಗೋಣಿಕೊಪ್ಪ-ಪೊನ್ನಂಪೇಟೆ ಮುಖ್ಯ ರಸ್ತೆಯಲ್ಲಿರುವ ಕಾಫಿ ಬೋರ್ಡ್ ಸಮೀಪವಿರುವ ಅಂಗಡಿಗೆ ರಾತ್ರಿ ದಾಳಿ ಮಾಡಿದೆ. ಅಂಗಡಿ ಮುರಿದು ಹಣ್ಣು ತರಕಾರಿ ತಿಂದು ಹಾಕಿದೆ. ಸಮೀಪದಲ್ಲಿರುವ ಉಳುವಂಗಡ ಕಿಶೋರ್ ಮುತ್ತಪ್ಪ ಅವರಿಗೆ ಸೇರಿದ ಅಂಗಡಿಯ ಛಾವಣಿ ಮತ್ತು ಕಂಬವನ್ನು ಮುರಿದು ನಾಶ ಮಾಡಿವೆ. ವರ್ಷಕ್ಕೆ 3-4 ಬಾರಿ ಹೀಗೆ ದಾಳಿ ಮಾಡುತ್ತಿರುತ್ತದೆ ಎಂದು ವರ್ತಕರು ತಿಳಿಸಿದ್ದಾರೆ.

ದೇವಟ್ ಪರಂಬು ಸ್ಮಾರಕ ಪ್ರದೇಶದಲ್ಲಿ ಸಿಎನ್‌ಸಿ ಪುಷ್ಪನಮನ

ಮಡಿಕೇರಿ,ಜು.10-ಕುತಂತ್ರದಿಂದ ಕೊಡವರ ಹತ್ಯೆಯಾದ ದೇವಟ್ ಪರಂಬು ಸ್ಮಾರಕ ಪ್ರದೇಶದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ದೇವಟ್ ಪರಂಬುವಿಗೆ ತೆರಳಿದ ಪ್ರಮುಖರು ಹಿರಿಯರಿಗೆ ಪುಷ್ಪನಮನ ಸಲ್ಲಿಸಿ ಕೊಡವಲ್ಯಾಂಡ್ ಪರ ಹಕ್ಕೊತ್ತಾಯ ಮಂಡಿಸಿದರು.

ಕೊಡಗು ರಾಜ್ಯವನ್ನು ಪರಾಕ್ರಮಿ ಕೊಡವರು ಹೈದರ್ ಮತ್ತು ಟಿಪ್ಪುವಿನ ಆಕ್ರಮಣದಿಂದ 32ಕ್ಕೂ ಹೆಚ್ಚು ಬಾರಿ ಕಾಪಾಡಿದರು. ಈ ಸೋಲಿನ ಸೇಡು ತೀರಿಸಿಕೊಳ್ಳಲು,



ಸಿಎನ್‌ಸಿ ಅಧ್ಯಕ್ಷರ ನೇತೃತ್ವದಲ್ಲಿ ಪುಷ್ಪನಮನ ಸಲ್ಲಿಸಿದರು.

ಟಿಪ್ಪು ಕೊಡವ ಜನಾಂಗವನ್ನು ವಂಚನೆಯ ಮೂಲಕ ಸಂಪೂರ್ಣವಾಗಿ ನಾಶಮಾಡಲು ಸಂಚು ಹೂಡಿದನು. ಟಿಪ್ಪು ಸಂಚಿನಿಂದ ದೇವಟ್ ಪರಂಬುವಿನಲ್ಲಿ ನಡೆದ ನರಮೇಧದ ಸ್ಮರಣಾರ್ಥ ಅಂತರರಾಷ್ಟ್ರೀಯ ಸ್ಮಾರಕ ನಿರ್ಮಾಣ ಮಾಡಬೇಕು ಹಾಗೂ ಕೊಡವರ ನರಮೇಧವನ್ನು ವಿಶ್ವ ರಾಷ್ಟ್ರಸಂಸ್ಥೆ ಯುಎನ್‌ಒ ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು ಎಂದು ನಾಚಪ್ಪ ಇದೇ ಸಂದರ್ಭದಲ್ಲಿ ಒತ್ತಾಯಿಸಿದರು. ರೇಖಾ ನಾಚಪ್ಪ, ಅಳ್ಮಂಡ ಜೈ ಗಣಪತಿ, ಪಟ್ಟಮಾಡ ಕುಶ, ಮಂದಪಂಡ ಮನೋಜ್ ಹಿರಿಯರಿಗೆ ಪುಷ್ಪ ನಮನ ಸಲ್ಲಿಸಿ ಗೌರವ ಅರ್ಪಿಸಿದರು.

ಬರೆ ಕುಸಿಯುವ ಆತಂಕ: ಶಾಸಕರ ಪರಿಶೀಲನೆ



ಬರೆಯಿಂದ ಕುಸಿಯುವ ಹಂತದಲ್ಲಿರುವ ಮನೆಗೆ ಶಾಸಕ ಡಾ.ಮಂತರ್ ಗೌಡ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದರು.

ಮಡಿಕೇರಿ,ಜು.10- ಮಂಗಳಾದೇವಿ ನಗರದಲ್ಲಿ ಕುಸಿಯುವ ಹಂತದಲ್ಲಿರುವ ಮನೆಗೆ ಶಾಸಕ ಡಾ.ಮಂತರ್ ಗೌಡ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆದರು.

ಭಾರಿ ಮಳೆಗೆ ಮನೆ ಹಿಂಬದಿಯ ಬರೆ ಕುಸಿಯುವ ಹಂತದಲ್ಲಿದ್ದರೂ ಅಸಹಾಯಕ ಕುಟುಂಬವೊಂದು ಬೇರೆ ದಾರಿ ಕಾಣದೆ ಜೀವ ಕೈಯಲ್ಲಿ ಹಿಡಿದು ದಿನ ದೂಡುತ್ತಿರುವ ಅಸಹಾಯಕ ಕುಟುಂಬದ ದಯನೀಯ ಸ್ಥಿತಿ ಕುರಿತಂತೆ ಮೈಸೂರು ಮಿತ್ರ ವರದಿ ಮಾಡಿತ್ತು.

ನಗರದ ಗೃಹ ರಕ್ಷಕ ದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಲವಿ ಕೆ.ಎಫ್ 25 ವರ್ಷಗಳಿಂದ ಮಂಗಳಾದೇವಿ ನಗರದಲ್ಲಿ ವಾಸವಿದ್ದು, ಅವರ ಮನೆಯ ಹಿಂಬದಿಯಲ್ಲಿ ಬರೆ ಕುಸಿದು ಅಪಾಯದ ಅಂಚಿಗೆ ಸಿಲುಕಿದೆ. ಮಂಗಳಾದೇವಿ ನಗರ ವಾಸಕ್ಕೆ ಯೋಗ್ಯವಿಲ್ಲವೆಂದು ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾ ವರದಿ ನೀಡಿತ್ತು.

ಈ ಹಿನ್ನೆಲೆಯಲ್ಲಿ ಶಾಸಕ ಡಾ.ಮಂತರ್ ಗೌಡ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ಲವಿ ಮತ್ತು ಅಲ್ಲಿ ವಾಸವಿರುವ ಕುಟುಂಬಗಳು ತಮ್ಮ ಅಸಹಾಯಕ ಪರಿಸ್ಥಿತಿ ಕುರಿತು ಶಾಸಕರ ಬಳಿ ತೋಡಿಕೊಂಡರು. ಸ್ಥಳದಲ್ಲಿ ವಾಸಿಸುತ್ತಿರುವ ಕುಟುಂಬಗಳು ಬೇರೆಡೆಗೆ ಕೂಡಲೇ ಸ್ಥಳಾಂತರ ಗೊಳ್ಳುವಂತೆ ಶಾಸಕರು ಸಲಹೆ ನೀಡಿದರು. ಲವಿ ಅವರಿಗೆ ಮನೆಯ ಹಕ್ಕು ಪತ್ರವಿದ್ದರೂ ಸಹ ಸರಕಾರದಿಂದ ಮನೆ ದೊರಕದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಡಾ.ಮಂತರ್ ಗೌಡ, ಈ ಬಗ್ಗೆ ಜಿಲ್ಲಾಡಳಿತದ ಗಮನಕ್ಕೆ ತಂದು ಮನೆ ಕೊಡಿಸುವ ಭರವಸೆ ನೀಡಿದರು.

ಮಡಿಕೇರಿ ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ, ನಗರಸಭೆ ಮಾಜಿ ಅಧ್ಯಕ್ಷ ಹೆಚ್.ಎಂ.ನಂದಕುಮಾರ್, ನಗರಸಭೆ ಸದಸ್ಯರಾದ ಮುದ್ದುರಾಜ್, ಜಗದೀಶ್ ಇತರರು ಹಾಜರಿದ್ದರು.

ಲಾರಿ ಹರಿದು ಮಾನಸಿಕ ಅಸ್ವಸ್ಥ ಸಾವು

ಕುಶಾಲನಗರ: ಲಾರಿ ಹರಿದು ವ್ಯಕ್ತಿ ಮೃತಪಟ್ಟ ಘಟನೆ ಗುಡ್ಡೆಹೊಸೂರಲ್ಲಿ ಗುರುವಾರ ನಡೆದಿದೆ.



ನಾಪೋಕ್ಲು ಕೊಟ್ಟಾಮುಡಿ ಗ್ರಾಮದ ಅಬ್ದುಲ್ ಸಲಾಂ ಮೃತ ವ್ಯಕ್ತಿ. ಬೆಳಗಿನ ಜಾವ ಮೈಸೂರಿನತ್ತ ತೆರಳುತ್ತಿದ್ದ ಲಾರಿ ರಸ್ತಬದಿ ಮಲಗಿದ್ದ ಮೃತನ ತಲೆ ಮೇಲೆ ಹರಿದಿದೆ. ಮೃತ ಅಬ್ದುಲ್ ಮಾನಸಿಕ ಅಸ್ವಸ್ಥ ನಂತೆ ಹೆದ್ದಾರಿಯಲ್ಲಿ ಅಡ್ಡಾದಿಡ್ಡಿ ಓಡಾಡುತ್ತಿದ್ದ ನೆಂದು ಸ್ಥಳೀಯರು ತಿಳಿಸಿದ್ದಾರೆ. ರಾತ್ರಿ ಹೆದ್ದಾರಿ ಅಂಚಿನಲ್ಲಿ ರಸ್ತೆಗೆ ತಲೆಹಾಕಿ ಮಲಗಿದ್ದ ಈತನ ಮೇಲೆ ಲಾರಿ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಕುಶಾಲನಗರ ಸಂಚಾರ ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪೊಲೀಸರಿಗೆ ಸವಾಲಾಗಿರುವ ಅಪರಿಚಿತ ವ್ಯಕ್ತಿಯ ಶವ

ಮಡಿಕೇರಿ, ಜು.10- ಬಾಳಲೆ-ಮಾಯಮುಡಿ ರಸ್ತೆ ಬದಿಯಲ್ಲಿ ಕಾಡಾನೆ ದಾಳಿಯಿಂದ ಮೃತಪಟ್ಟ ಅನಾಮಿಕ ವ್ಯಕ್ತಿಯ ಗುರುತು ಪತ್ತೆ ಹಚ್ಚುವಲ್ಲಿ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ಮಾಯಮುಡಿ ನಿವಾಸಿ ಅಪ್ಪನೆರವಂಡ ತಿಮ್ಮಯ್ಯ ತೋಟಕ್ಕೆ ತೆರಳಿದ್ದಾಗ 35ರಿಂದ 40 ವರ್ಷ ಪ್ರಾಯದ ಓರ್ವ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಮೃತದೇಹದ ಪಕ್ಕದಲ್ಲೇ ಕಾಡಾನೆ ಸಂಚರಿಸಿದ್ದ ಹೆಜ್ಜೆ ಗುರುತುಗಳು ಕಂಡು ಬಂದಿದ್ದವು.

ತೋಟದ ಮಾಲೀಕರು ನೀಡಿದ ದೂರಿನ ಅನ್ವಯ ಗೋಣಿಕೊಪ್ಪ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಲಾಗಿದೆ. ಅನಾಮಿಕ ವ್ಯಕ್ತಿ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟಿರುವುದು ಖಚಿತವಾಗಿದ್ದರೂ, ಅಪರಿಚಿತ ವ್ಯಕ್ತಿಯ ಗುರುತು ಮಾತ್ರ ಪತ್ತೆಯಾಗಿಲ್ಲ. ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿ ನಾಪತ್ತೆ ಪ್ರಕರಣ ದಾಖಲಾಗಿದ್ದರೆ ಅಥವಾ ಮೃತರ ಸಂಬಂಧಿಕರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಇದ್ದಲ್ಲಿ ಗೋಣಿಕೊಪ್ಪ ಪೊಲೀಸ್ ಠಾಣಾಧಿಕಾರಿ 9480804957 ಅಥವಾ 08272-247333 ಸಂಖ್ಯೆಯನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶ್ರೀ ಸಾಯಿ ಬಾಬಾ ದೇವಾಲಯದಲ್ಲಿ ವಿಶೇಷ ಪೂಜೆ

ಕುಶಾಲನಗರ ಪಟ್ಟಣದ ಸಾಯಿ ಬಡಾವಣೆಯಲ್ಲಿನ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಗುರುವಾರ ಗುರು ಪೂರ್ಣಿಮೆ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು. ಬೆಳಗ್ಗೆ 6 ಗಂಟೆಯಿಂದ ದೇವರಿಗೆ ವಿಶೇಷ ಆರತಿ, ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ಗಣಪತಿ ಹೋಮ, ಶ್ರೀ ಸತ್ಯನಾರಾಯಣ ಪೂಜೆ ನಡೆಯಿತು.

ಹಡಪದ ಅಪ್ಪಣ್ಣ ಬಸವಣ್ಣರ ಆಪ್ತ ಶಿವಶರಣ

ಶಾಸಕ ಪಿ.ಎಂ.ನರೇಂದ್ರಸ್ವಾಮಿ

ಮಂಡ್ಯ, ಜು.10- ಜಗಜ್ಯೋತಿ ಬಸವಣ್ಣನವರ ಆಪ್ತರ ಬಳಗದಲ್ಲಿ ಒಬ್ಬ ರಾಗಿ ಸಾಮಾಜಿಕ ಸುಧಾರಣೆಯಲ್ಲಿ ಭಾಗಿಯಾದವರು ಶಿವಶರಣ ಹಡಪದ ಅಪ್ಪಣ್ಣನವರು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ನರೇಂದ್ರಸ್ವಾಮಿ ತಿಳಿಸಿದರು.

ನಗರದ ಕಲಾ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತ ಇಲಾಖೆಯಿಂದ ಆಯೋಜಿಸಿದ್ದ ಶ್ರೀಶಿವಶರಣ ಹಡಪದ ಅಪ್ಪಣ್ಣನವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾಯಕ ಸಮಾಜಕ್ಕೆ ಸರ್ಕಾರ ಯೋಜನೆ ಗಳನ್ನು ರೂಪಿಸಿ ಸಮಾಜದ ಮುಖ್ಯವಾಹಿನಿಗೆ ತರಲು ಸದಾ ಪ್ರಯತ್ನಿಸುತ್ತಿದೆ. ಕಾಯಕ ಸಮುದಾಯ ಒಗ್ಗಟ್ಟು ಹಾಗೂ ಒಮ್ಮತ ಅಭಿಪ್ರಾಯದಿಂದ ಮುಂದೆ ಬರಬೇಕು. ಆಗ ಮಾತ್ರ ಸಂವಿಧಾನದ ಮೂಲ ಆಶಯಗಳು ಸಂಪೂರ್ಣವಾಗಿ ಈಡೇರಿಸಲು ಸಾಧ್ಯ. ಬದುಕಿಗಾಗಿ ಕಾಯಕವನ್ನು ನಂಬಿರುವ ಸಮಾಜ ಯಾರ ವಂಚನೆಗೂ ಒಳಗಾಗಬಾರದು ಎಂದರು.

ಗ್ಯಾರಂಟಿ ಯೋಜನೆಗಳು ಬಡವರ ಜೀವನವನ್ನು ಸುಧಾರಿಸಿದೆ. ಮಹಿಳೆಯರಿಗೆ ಸಮಾನತೆ ನೀಡುವ ಸಲುವಾಗಿ 2 ಸಾವಿರ ನೀಡಿ ಉಚಿತವಾಗಿ ಸಂಚಾರ ಮಾಡಲು ಶಕ್ತಿ ಯೋಜನೆಯನ್ನು ನೀಡಿದೆ. ಇದರಿಂದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಮಹಿಳೆಯರನ್ನು ಮುನ್ನಡೆಸಲು ನಮ್ಮ ಸರ್ಕಾರ ಮುಂದಾಗಿದೆ. ಬಸವಣ್ಣನವರ ಆಪ್ತರಾಗಿ ಸಾಮಾಜಿಕ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಹಡಪದ ಅಪ್ಪಣ್ಣ ಅವರು 250 ವಚನವನ್ನು ಬರೆದು ಸಮಸಮಾಜ



ಹಡಪದ ಅಪ್ಪಣ್ಣನವರ ಭಾವಚಿತ್ರಕ್ಕೆ ಶಾಸಕ ನರೇಂದ್ರಸ್ವಾಮಿ ಪುಷ್ಪಾರ್ಚನೆ ಮಾಡಿದರು.

ನಿರ್ಮಾಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ವಚನಗಳು ಇಂದಿಗೂ ಪ್ರಸ್ತುತ ಹಾಗೂ ವಚನಗಳಲ್ಲಿ ತಿಳಿಸಿರುವ ಮೌಲ್ಯಗಳನ್ನು ಸಾರ್ವಜನಿಕರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಉಪನ್ಯಾಸಕಿ ಡಾ.ಅನಿತಾ ಮಾತನಾಡಿ 12ನೇ ಶತಮಾನದಲ್ಲಿ ರಾಜಪ್ರಭುತ್ವಕ್ಕೆ ಸೆಡ್ಡು ಹೊಡೆದು ಶರಣರ ವಚನಗಳನ್ನು ರಚಿಸಿದ್ದಾರೆ. ಜಾತಿ ಮುಕ್ತವಾದ ಸಮ ಸಮಾಜದ ನಿರ್ಮಾಣ ಮಾಡುವುದು ಶರಣರ ಪ್ರಮುಖ ಉದ್ದೇಶವಾಗಿತ್ತು. 12ನೇ ಶತಮಾನದ ಆಂದೋಲನದಲ್ಲಿ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ ಮುಂತಾದ ಮಹಿಳೆಯರು ಸಹ ಭಾಗ ವಹಿಸಿದ್ದಾರೆ. ಹಡಪದ ಅಪ್ಪಣ್ಣ ಜಗಜ್ಯೋತಿ ಬಸವಣ್ಣನವರ ಆಪ್ತ ಕಾರ್ಯದರ್ಶಿಗಳಾಗಿ ಅನುಭವ ಮಂಟಪದಲ್ಲಿದ್ದರು. ತಮ್ಮ ಕಾರ್ಯ ವೈಖರಿಯಿಂದ 'ನಿಜಸುಖಿ' ಎಂಬ ಬಿರುದು ಪಡೆದಿದ್ದರು.

ನಂತರ ಜಯಂತಿ ಅಂಗವಾಗಿ ನಡೆದ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಯಿತು. ಸಮಾಜದಲ್ಲಿ ಸಾಧನೆ ಮಾಡಿ ಉತ್ತಮ ಸ್ಥಾನ ಪಡೆದ ಡಾ.ಗುಣಶೇಖರ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಶ್ರವಣಶ್ರಮ ಮಠದ ಶಂಕರಾನಂದ ಗುರೂಜಿ, ನಗರಸಭೆ ಸದಸ್ಯ ಶಿವಲಿಂಗು, ಶ್ರೀಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ವಿ. ನಂದೀಶ್, ಮುಖಂಡರಾದ ಸುರೇಶ್, ಕೆಂಪರಾಜು, ಅಂಜನಪ್ಪ, ಪರಮೇಶ್ವರ್, ಜಗದೀಶ್, ರಾಮಲಿಂಗ ಸೇರಿದಂತೆ ಇನ್ನಿತರರಿದ್ದರು.

> **ಸವಿತಾ ಸಮಾಜದವರು ಆರೋಗ್ಯ ಹಾಗೂ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ನಗರದಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿವೆ. ಆದ್ದರಿಂದ ಪ್ಲಾಸ್ಟಿಕ್ ಬಳಕೆಯನ್ನು ಮೊದಲು ಸಂಪೂರ್ಣವಾಗಿ ನಿಷೇಧಿಸಬೇಕು. ನಂತರ ತಂಬಾಕು, ಮದ್ಯಪಾನ ಸೇವನೆಯಿಂದ ದೂರ ಇರುವ ಮೂಲಕ ಉತ್ತಮ ಆರೋಗ್ಯ ವೃದ್ಧಿಸಿಕೊಳ್ಳಬೇಕು. ವೃತ್ತಿ ಧರ್ಮವನ್ನು ಎಲ್ಲರೂ ಪಾಲಿಸುವುದರ ಜೊತೆಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು.**
> **-ಎಂ.ವಿ.ಪ್ರಕಾಶ್, ನಗರಸಭಾಧ್ಯಕ್ಷ.**

ಜಿ.ಮಾದೇಗೌಡರ ಸಾಧನೆ, ಆದರ್ಶಗಳು ಇಂದಿಗೂ ಜೀವಂತ

ಜನ್ಮದಿನ ಹಿನ್ನಲೆ ಸ್ಮಾರಕಕ್ಕೆ ಪೂಜೆ ಸಲ್ಲಿಸಿದ ಎಂಎಲ್‌ಸಿ ಮಧು ಜಿ.ಮಾದೇಗೌಡ

ಭಾರತೀನಗರ, ಜು.10- ಹಿರಿಯ ರಾಜಕೀಯ ಮುತ್ಸದಿ, ರೈತಪರ ಹೋರಾಟಗಾರ, ಭಾರತೀ ಎಜುಕೇಷನ್ ಟ್ರಸ್ಟ್ ಸಂಸ್ಥಾಪಕ ದಿ.ಜಿ.ಮಾದೇಗೌಡರು ನಮ್ಮನ್ನು ಅಗಲಿ 4 ವರ್ಷ ಕಳೆದರೂ ಅವರ ಸಾಧನೆ ಹಾಗೂ ಆದರ್ಶಗಳು ಇಂದಿಗೂ ಜೀವಂತವಾಗಿದೆ ಎಂದು ಭಾರತೀ ಎಜುಕೇಷನ್ ಟ್ರಸ್ಟ್ ಅಧ್ಯಕ್ಷರೂ ಆದ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ತಿಳಿಸಿದರು.

ಜಿ.ಮಾದೇಗೌಡರ 97ನೇ ಜನ್ಮದಿನದ ಅಂಗವಾಗಿ ಇಲ್ಲಿನ ಹನುಮಂತನಗರದ ಶ್ರೀಆತ್ಮಲಿಂಗೇಶ್ವರ ದೇವಸ್ಥಾನದ ಬಳಿ ಜಿ.ಮಾದೇಗೌಡರ ಅಭಿಮಾನಿಗಳು ಹಾಗೂ ಭಾರತೀ ಎಜುಕೇಷನ್ ಟ್ರಸ್ಟ್ ಪದಾಧಿಕಾರಿಗಳು ಸೇರಿದಂತೆ ಹಲವು ಮುಖಂಡರು ಸ್ಮಾರಕಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರಿದರು.



ದಿ.ಜಿ.ಮಾದೇಗೌಡರ ಜನ್ಮದಿನದ ಅಂಗವಾಗಿ ಸ್ಮಾರಕಕ್ಕೆ ಎಂಎಲ್‌ಸಿ ಮಧು ಜಿ.ಮಾದೇಗೌಡ ಪೂಜೆ ಸಲ್ಲಿಸಿದರು.

ನಂತರ ಬಂದ ಅಭಿಮಾನಿಗಳು, ಕಾರ್ಯಕರ್ತರಿಗೆ ಲಘು ಉಪಹಾರ ನೀಡಲಾಯಿತು. ಈ ವೇಳೆ ಭಾರತೀ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಸಿದ್ದೇಗೌಡ, ಪ್ರಾಂಶುಪಾಲ ಪುಟ್ಟಸ್ವಾಮಿ, ಗ್ರಾಪಂ ಸದಸ್ಯ ಕೆ.ಟಿ.ಶ್ರೀನಿವಾಸ್, ಮಾ.ಬೋರಯ್ಯ, ರೇಷ್ಮೆ ಇಲಾಖೆ ಪುಟ್ಟರಾಮು, ಪ್ರೊ.ಬಿ.ಎಸ್. ಬೋರೇಗೌಡ, ಕೆ.ಎಸ್.ಗೌಡ, ಶಿವಲಿಂಗೇಗೌಡ, ನಾಗಣ್ಣ, ಸೋಮಣ್ಣ ಸೇರಿದಂತೆ ಹಲವರಿದ್ದರು.

ಜಿ.ಮಾದೇಗೌಡರ ಹೆಸರಿನಲ್ಲಿ ಪೂಜೆ: ಇದಕ್ಕೂ ಮುನ್ನಾ ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ದಿ.ಜಿ.ಮಾದೇಗೌಡರ ಹುಟ್ಟುಹಬ್ಬದ ಅಂಗವಾಗಿ ಭಾರತೀ ವಿವಿಧ ಅಂಗ ಸಂಸ್ಥೆಯ ಮುಖ್ಯಸ್ಥರು ಹಾಗೂ ಕಾಯಕರ್ತರು, ಮುಖಂಡರು ಪೂಜೆ ಸಲ್ಲಿಸಿದರು.

ಭಾರತೀ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಬಿ.ಎಂ.ನಂಜೇಗೌಡ ಮಾತನಾಡಿದರು. ಮುಖಂಡರಾದ ಆರ್.ಸಿದ್ದಪ್ಪ, ಕಬ್ಬಾಳಯ್ಯ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಎಸ್.ನಾಗರಾಜು, ಭಾರತೀ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಜಿ.ಕೆ.ಕೃಷ್ಣ, ಜಿಎಂಐಟಿ ಪ್ರಾಂಶುಪಾಲ ಚಂದನ್, ಹೆಲ್ತ್‌ಸೈನ್ ನಿರ್ದೇಶಕ ತಮಿಜ್‌ಮಣಿ, ಭಾರತೀ ಕಾಲೇಜಿನ ಆಡಳಿತಾಧಿಕಾರಿ ಜವರೇಗೌಡ, ಪ್ರಾಂಶುಪಾಲ ಮಹದೇವಸ್ವಾಮಿ, ಜಿ.ಬಿ.ಪಲ್ಲವಿ, ಮಲ್ಲಿಕಾರ್ಜುನ್, ಭಾರತೀ ಎಕ್ಸಲೆನ್ಸ್ ಆಡಳಿತಾಧಿಕಾರಿ ರಮ್ಯ, ಪುಟ್ಟರಾಜೇಅರಸು, ಪ್ರಸನ್ನ ಜಗದೀಶ್, ದೇವರಾಜು ಇತರರಿದ್ದರು.

ಸ್ವಾತಂತ್ರ್ಯೋತ್ಸವ ಸಂಭ್ರಮ: ವಿವಿಧ ಪ್ರಶಸ್ತಿಗಳಿಗೆ ಆಹ್ವಾನ

ಮಂಡ್ಯ, ಜು.10- ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂ, ಕನ್ನಂಬಾಡಿ ಹಾಗೂ ಕಾವೇರಿಪ್ರಭ ದಿನಪತ್ರಿಕೆ ವತಿಯಿಂದ ಸ್ವಾತಂತ್ರ್ಯೋತ್ಸವ ಸಂಭ್ರಮ ಅಂಗವಾಗಿ 13ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆ.10 ರಂದು ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದು, ಆಸಕ್ತರಿಂದ ಕವಿಗೋಷ್ಠಿಗೆ ಕವನ ಆಹ್ವಾನಿಸಿ, ಸಾಧಕರಿಂದ ವಿವಿಧ ಪ್ರಶಸ್ತಿಗಳಿಗೆ ಹೆಸರನ್ನು ಆಹ್ವಾನಿಸಲಾಗಿದೆ ಎಂದು ವೇದಿಕೆಯ ಎಸ್.ಕೃಷ್ಣ ಸ್ವರ್ಣಸಂದ್ರ ತಿಳಿಸಿದ್ದಾರೆ.



ಆಸಕ್ತರು 20 ಸಾಲಿನ 2 ಕವನಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ಜು.20ರೊಳಗೆ ಕಳುಹಿಸಬೇಕು. ವಾಟ್ಸಾಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯ ಒಳಗೊಂಡಿರಬಹುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರ ತರಲಾಗುವುದು. 50 ಕವಿಗಳಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. 10 ಉತ್ತಮ ಕವನಗಳಿಗೆ 'ಕಾವ್ಯಶ್ರೀ', 20 ಮಂದಿ ಸಾಧಕರಿಗೆ 'ಕನ್ನಡರತ್ನ', ಜೀವಮಾನ ಸಾಧನೆಗಾಗಿ 10 ಮಂದಿಗೆ 'ಕರ್ನಾಟಕ ಭೂಷಣ' ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ಅತ್ಯುತ್ತಮ ಸಾಹಿತ್ಯ ಸೇವೆ ಮಾಡಿದ ಸಾಧಕರನ್ನು 13ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು.

ಆಸಕ್ತ ಕವಿಗಳು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರು ವಿವಿಧ ಪ್ರಶಸ್ತಿಗಾಗಿ ಹಾಗೂ ಕವಿಗೋಷ್ಠಿಗೆ ಜು.20ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. ವಿಳಾಸ: ಎಸ್. ಕೃಷ್ಣಸ್ವರ್ಣಸಂದ್ರ, ಕವಿಮಿತ್ರ, ನಂ-767, ಸ್ವರ್ಣಸಂದ್ರ, ಮಂಡ್ಯ-2 ಕಳುಹಿಸಬೇಕು. ಹೆಚ್ಚಿನ ವಿವರ ಹಾಗೂ ವ್ಯಾಟ್ಸಾಪ್ ನಂ-9448424380ಗೆ ಕಳುಹಿಸಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜು.10- ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜು.12ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ನಡುವೆ ಗುತ್ತಲು, ಫ್ಯಾಕ್ಟರಿವೃತ್ತ, ಕೈಗಾರಿಕಾ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರು ನಗರ, ಉದಯಗಿರಿ, ಸಾದತ್ ಮೊಹಲ್ಲಾ, ಚನ್ನಯ್ಯ ಬಡಾವಣೆ, ಸಿದ್ದಾರ್ಥ ಬಡಾವಣೆ, ಬೆಂಗಳೂರು ಮುಖ್ಯರಸ್ತೆಯ ಹೆಬ್ಬಾಳ, ಶ್ರೀನಿವಾಸಪುರ ಗೇಟ್, ಹನಕೆರೆ ಐ.ಪಿ.ವ್ಯಾಪ್ತಿ, ಕೀಲಾರ ಐ.ಪಿ ವ್ಯಾಪ್ತಿ, ಬಸವನಪುರ ಐ.ಪಿ. ವ್ಯಾಪ್ತಿ, ಬೂದನೂರು, ಭೂತನ ಹೊಸೂರು, ಚನ್ನಪ್ಪನ ದೊಡ್ಡಿ, ಹಂಬರಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಯೋಗ ಗುರುಗಳಿಗೆ ಗುರುವಂದನೆ ಮೂಲಕ ಗುರುಪೂರ್ಣಿಮೆ ಆಚರಣೆ

ಗುಂಡ್ಲುಪೇಟೆ, ಜು-10 (ಸೋಮ್.ಜಿ) ಪಟ್ಟಣದಲ್ಲಿರುವ ಶ್ರೀ ಮದ್ದಾನೇಶ್ವರ ಮಹಾಮನೆಯ ಯೋಗಕೇಂದ್ರದಲ್ಲಿ ಗುರುಪೂರ್ಣಿಮೆ ಪ್ರಯುಕ್ತ ಪತಂಜಲಿ ಮಹರ್ಷಿಯವರಿಗೆ ಪೂಜೆ ಹಾಗೂ ಯೋಗ ಗುರುಗಳಿಗೆ ಗುರುವಂದನೆಯನ್ನು ಆಯೋಜಿಸಲಾಗಿತ್ತು.

ಮುಂಜಾನೆ 5.30ಕ್ಕೆ ಯೋಗಕೇಂದ್ರದಲ್ಲಿ ಯೋಗ ಬಂಧುಗಳು ಪತಂಜಲಿ ಮಹರ್ಷಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಜನೆ ಕಾರ್ಯಕ್ರಮವನ್ನು ನಡೆಸಲಾಯಿತು. ನಂತರ ಯೋಗಾಭ್ಯಾಸವನ್ನು ಮಾಡಿ ಯೋಗಗುರುಗಳಾದ ಬಸವಣ್ಣ ಮತ್ತು ರಾಜಪ್ಪ ನವರಿಗೆ ಗುರುವಂದನೆ ಸಲ್ಲಿಸಲಾಯಿತು. ವಂದನೆ ಸ್ವೀಕರಿಸಿ ಮಾತನಾಡಿದ ಯೋಗ ಗುರುಗಳಾದ ರಾಜಪ್ಪ, ಯೋಗದಿಂದ ಆಗುವ ಪ್ರಯೋಜನ ಮತ್ತು ಆರೋಗ್ಯಕರ ಜೀವನಕ್ಕೆ ಯೋಗದ ಮಹತ್ವವನ್ನು ತಿಳಿಸಿದರು.



ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಯೋಗ ಕೇಂದ್ರದ ಅಧ್ಯಕ್ಷ ಶ್ರೀನಿವಾಸ್ ಮತ್ತು ಕಾರ್ಯದರ್ಶಿ ಜಿ.ಪಿ.ಗಿರೀಶ್, ಮಹಾಮನೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಯೋಗಕೇಂದ್ರದ ಅಧ್ಯಕ್ಷ ಶ್ರೀನಿವಾಸ್ ಮತ್ತು ಕಾರ್ಯದರ್ಶಿ ಜಿ.ಪಿ.ಗಿರೀಶ್ ಮತ್ತು ಯೋಗ ಬಂಧುಗಳು ಹಾಗೂ ಮಹಾಮನೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಾಧನಾ ವಸ್ತುಪ್ರದರ್ಶನಕ್ಕೆ ಶಾಸಕರಿಂದ ಚಾಲನೆ



ಚಾಮರಾಜನಗರ: ರಾಜ್ಯ ಸರ್ಕಾರದ ಎರಡು ವರ್ಷಗಳ ಅಭಿವೃದ್ಧಿ ಕಾರ್ಯಕ್ರಮಗಳ ಸಾಧನೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ವಸ್ತು ಪ್ರದರ್ಶನಕ್ಕೆ ನಗರದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಇಂದಿನಿಂದ ಜು.12ರ ವರೆಗೆ ಮೂರು ದಿನಗಳ ಕಾಲ ನಡೆಯಲಿರುವ ವಸ್ತುಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜ್ಯದ ಜನರಿಗೆ ಮಾತು ಕೊಟ್ಟಂತೆ ಜಾರಿಗೆ ತಂದ ಪಂಚಗ್ಯಾರಂಟಿ ಯೋಜನೆಗಳು ಜನರ ಪರವಾಗಿವೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಮಾತನಾಡಿದರು. ಜಿಪಂ ಸಿಇಒ ಮೋನಾ ರೋತ್, ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಾದ ಎಂ. ರಾಚಯ್ಯ, ಆರ್.ರಾಜೇಂದ್ರ, ಭಾಗ್ಯ, ತಾಪಂ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್‌ಕುಮಾರ್, ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎ. ರಮೇಶ, ಸುರೇಶ್‌ಕುಮಾರ್ ಇದ್ದರು.

ಸಹಸ್ರಾರು ಭಕ್ತಸಮೂಹದ ನಡುವೆ ವಿಜೃಂಭಿಸಿದ ಚಾಮರಾಜೇಶ್ವರಸ್ವಾಮಿ ರಥೋತ್ಸವ

ಚಾಮರಾಜನಗರ, ಜು.10-ನಗರದ ಐತಿಹಾಸಿಕ ಚಾಮರಾಜೇಶ್ವರಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಹರ್ಷೋದ್ಗಾರಗಳ ನಡುವೆ ಗುರುವಾರ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ಬೆಳಗ್ಗೆಯಿಂದಲೂ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು. ಬೆಳಗ್ಗೆ 11.30 ಗಂಟೆಯ ಶುಭ ಕನ್ಯಾ ಲಗ್ನದಲ್ಲಿ ಶ್ರೀಚಾಮರಾಜೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ತಂದು ರಥಜ ಸುತ್ತಲೂ ಪ್ರದಕ್ಷಿಣೆ ಹಾಕಿ 11.50ರ ಸುಮಾರಿನಲ್ಲಿ ರಥದಲ್ಲಿ ಕೆಂಪ ನಂಜಮ್ಮನವರ ಸಮೇತ ಶ್ರೀಚಾಮರಾಜೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಕೂರಿಸಲಾಯಿತು. ಈ ವೇಳೆ ರಥದ ಸುತ್ತ ನೆರೆದಿದ್ದ ಭಕ್ತರು ಹಣ್ಣು-ಜವನ ಎಸೆದರು. ನಂತರ ಸ್ವಾಮಿ ಪೂಜೆ ಸಲ್ಲಿಸಿ, 12.15ರ ಸುಮಾರಿನಲ್ಲಿ ರಥ ಎಳೆಯುವುದಕ್ಕೆ ಚಾಲನೆ ನೀಡಲಾಯಿತು.

ಶಾಸಕ ಪುಟ್ಟರಂಗಶೆಟ್ಟಿ, ನಗರ ಸಭಾಧ್ಯಕ್ಷ ಸುರೇಶ ನಾಯಕ, ಚೂಡ ಅಧ್ಯಕ್ಷ ಮಹಮ್ಮದ್ ಅಸ್ಗರ್ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿರವರ ಸಮ್ಮುಖದಲ್ಲಿ ರಥ ಮುಂದೆ ಸಾಗುತ್ತಿದ್ದಂತೆಯೇ ದೇವಸ್ಥಾನದ ಆವ ರಣದಲ್ಲಿ ಕಿಕ್ಕಿರಿದು ಸೇರಿದ್ದ ಭಕ್ತರು ಹಣ್ಣು ಜವನ, ನಾಣ್ಯವನ್ನು ತೇರಿಗೆ ಎಸೆದು ಹರ್ಷೋದ್ಗಾರ ಮಾಡಿದರು. ನೂರಾರು ಸಂಖ್ಯೆಯ ನವ ದಂಪತಿಗಳು ಉತ್ಸವದಲ್ಲಿ ಪಾಲ್ಗೊಂಡು, ರಥೋತ್ಸವವನ್ನು ಕಣ್ತುಂಬಿಕೊಂಡರು.

ಚಾಮರಾಜೇಶ್ವರ ಸ್ವಾಮಿಯ ರಥದ ಮುಂಭಾಗದಲ್ಲಿ ಮಹಾರಾಜರ ಉತ್ಸವ ಮೂರ್ತಿ, ಗಣಪತಿ ದೇವರು ಚಿಕ್ಕ ರಥಗಳಲ್ಲಿ ಸಾಗಿದರೆ ಹಿಂಭಾಗದಲ್ಲಿ ಕೆಂಪನಂಜಾಂಬ ಪಾರ್ವತಿ ದೇವರ ರಥ ಸಾಗಿತು.



ಐತಿಹಾಸಿಕ ಚಾಮರಾಜೇಶ್ವರಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಹರ್ಷೋದ್ಗಾರಗಳ ನಡುವೆ ಗುರುವಾರ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ದೇವಸ್ಥಾನದ ಮುಂಭಾಗದಿಂದ ದಕ್ಷಿಣಾಭಿಮುಖವಾಗಿ ಹೊರಟ ರಥವು ರಥದ ಬೀದಿ, ಎಸ್‌ಬಿಎಂ ರಸ್ತೆ, ವೀರಭದ್ರೇಶ್ವರ ಸ್ವಾಮಿ ದೇವಾಲಯದ ವೃತ್ತ, ಮಾರಮ್ಮ ದೇವಸ್ಥಾನದ ರಸ್ತೆ, ಹಳೆ ತರಕಾರಿ ಮಾರುಕಟ್ಟೆ ರಸ್ತೆಯಲ್ಲಿ ಸಾಗಿ ಮತ್ತೆ ದೇವಸ್ಥಾನದ ಮುಂಭಾಗ ಸಂಜೆ 4.05ರ ಸುಮಾರಿಗೆ ಮೂಲ ಸ್ಥಾನ ತಲುಪಿತು. ರಥೋತ್ಸವದಲ್ಲಿ ವೀರಗಾಸೆ, ಮಂಗಳವಾದ್ಯ, ಬ್ಯಾಂಡ್ ಸೆಟ್ ಕಲಾವಿದರು ಪಾಲ್ಗೊಂಡಿದ್ದರು.

ಆಟಿಕೆಗಳ ಭರ್ಜರಿ ವ್ಯಾಪಾರ: ಜಾತ್ರೆಯ ಆವರಣದಲ್ಲಿ ಮಕ್ಕಳ ವಿವಿಧ ಆಟಿಕೆಗಳ ಮಾರಾಟ ಜೋರಾಗಿ ನಡೆಯಿತು. ಅಲ್ಲದೇ ಗೃಹೋಪಯೋಗಿ ವಸ್ತುಗಳು, ಮಹಿಳೆಯರ ಬ್ಯಾಂಗಲ್ಸ್ ಸೇರಿದಂತೆ ವಿವಿಧ ವಸ್ತುಗಳ ಮಾರಾಟ ಭರ್ಜರಿಯಾಗಿ ನಡೆಯಿತು. ಹಣ್ಣು-ಹೂ, ಪುರಿ-ಕಾರ, ಸಿಹಿ ತಿಂಡಿಗಳು, ತಂಪು ಪಾನೀಯ, ಐಸ್‌ಕ್ರೀಮ್‌ಗಳಿಗೂ ಹೆಚ್ಚಿನ ಬೇಡಿಕೆ ಕಂಡು ಬಂದಿತು. ರಥ ಸಾಗುವ ಹಾದಿಯಲ್ಲಿ ಹಲವೆಡೆ ವಿವಿಧ ಸಂಘ-ಸಂಸ್ಥೆ ಹಾಗೂ ಭಕ್ತರಿಂದ ಅನ್ನಸಂತರ್ಪಣೆ ನಡೆಯಿತು. ಬಾತ್, ಬಿಸಿಬೇಳೆ ಬಾತ್, ಚಿತ್ರಾನ್ನ, ಪಾನಕ ವಿತರಿಸಲಾಯಿತು.

ಬಿಗಿ ಬಂದೋಬಸ್ತ್: ರಥೋತ್ಸವದ ಪ್ರಯುಕ್ತದ ಬೆಳಗ್ಗೆ ನಗರದೆಲ್ಲೆಡೆ 7 ಗಂಟೆಯಿಂದಲೇ ಪೊಲೀಸರು ಕಾರ್ಯಾಚರಣೆ ನಡೆಸಿ, ರಥ ಸಾಗುವ ಮಾರ್ಗದಲ್ಲಿ ವಾಹನಗಳನ್ನು ತೆರವುಗೊಳಿಸಿ ದೇವ ಸ್ಥಾನಕ್ಕೆ ಬರುವ ಮಾರ್ಗವನ್ನು ಬ್ಯಾರಿಕೆಡ್ ಹಾಕಿ ಬಂದ್ ಮಾಡಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಆಗಾಗ ಕಳ್ಳತನ, ಪಿಕ್‌ಪಾಕೆಟ್ ಬಗ್ಗೆ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸಿದರು.

ಹುಲಿ ಸಂರಕ್ಷಣೆಯ ಜಾಗೃತಿ



ಇತ್ತೀಚೆಗೆ ಮಲೆ ಮಹದೇಶ್ವರಸ್ವಾಮಿ ವನ್ಯಧಾಮದಲ್ಲಿ 5 ಹುಲಿಗಳ ಸಾವಿನ್ನಪ್ಪಿದ ಹಿನ್ನೆಲೆಯಲ್ಲಿ ಹುಲಿಗಳ ನಾಡು ನಮ್ಮ ಚಾಮರಾಜನಗರ ಹುಲಿಗಳ ರಕ್ಷಣೆ ನಮ್ಮೆಲ್ಲರ ಹೊಣೆ 'ಸೇವ್ ದಿ ಟೈಗರ್' ಎಂಬ ಪೋಸ್ಟರ್ ಅನ್ನು ಯುವಕರು ಹಿಡಿದು ಜಾಗೃತಿ ಮೂಡಿಸಿದರು.

ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು

ಟ್ರೈಲರ್ ಬಿಡುಗಡೆ



ಟಿ.ಪಿ. ಕೈಲಾಸಂ ಅವರ ಸಾಹಿತ್ಯ, ಮೈಸೂರು ಅನಂತಸ್ವಾಮಿ ಅವರ ಗಾಯನ ಮತ್ತು ಸಂಗೀತ ವಿರುವ ತಿಪ್ಪಾರಳ್ಳಿ ಬಲು ದೂರ ಎಂಬ ಜಾನಪದ ಹಾಡಿನ ಸಾಲುಗಳನ್ನು ಬಳಸಿಕೊಂಡು ಕನ್ನಡ ಚಲನಚಿತ್ರವೊಂದಕ್ಕೆ 'ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು' ಎಂಬ ಟೈಟಲ್ ಇಡಲಾಗಿದೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳೆಲ್ಲ ಮುಗಿದಿದ್ದು ಚಿತ್ರ ಬಿಡುಗಡೆಯ ಹಂತದಲ್ಲಿದೆ. ಇದೀಗ ಚಿತ್ರದ ಪ್ರಚಾರ ಕಾರ್ಯವನ್ನು ತಂಡ ಆರಂಭಿಸಿದೆ. ಇದರ ಮೊದಲ ಹಂತವಾಗಿ ಇತ್ತೀಚೆಗೆ ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು ಸಿನಿಮಾದ ಟ್ರೇಲರ್ ಮತ್ತು ಹಾಡಿನ ಬಿಡುಗಡೆ ಸಮಾರಂಭ ರೇಣುಕಾಂಬ ಸ್ಟುಡಿಯೋದಲ್ಲಿ ನಡೆಯಿತು. ನಾಲ್ಕು ದಶಕಗಳವರೆಗೆ ಸಹ ನಿರ್ದೇಶನ –ಸಹಾಯಕ ನಿರ್ದೇಶಕರಾಗಿ ಕನ್ನಡ, ಹಿಂದಿ, ತೆಲುಗು ಸಿನಿಮಾಗಳಲ್ಲಿ ಕೆಲಸ ಮಾಡಿರುವ ಕೆ.ಮೋಹನ್‌ಕುಮಾರ್ ಅವರು ಈ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಜತೆಗೆ ಈ ಚಿತ್ರದ ಮೂರು ಹಾಡುಗಳಿಗೆ ಸಾಹಿತ್ಯವನ್ನೂ ಸಹ ಬರೆದಿದ್ದಾರೆ.

ಬೆಳಗಾವಿ ಮೂಲದ ಉದ್ಯಮಿ ಗಿರೀಶ ಪ್ರಕಾಶ ಭಸ್ಮೇ ಅವರು ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಜತೆಗೆ ಶ್ರೀದಾನಮ್ಮ ದೇವಿ ಫಿಲಂಸ್ ಲಾಂಛನದಲ್ಲಿ ಚಿತ್ರಕ್ಕೆ ಬಂಡವಾಳ ಸಹ ಹೂಡಿ ಚಿತ್ರ ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ನಾಯಕಿಯಾಗಿ ನಟಿ ಪಾವನಿ ನಟಿಸಿದ್ದಾರೆ. ಇವರೊಂದಿಗೆ ಮೈಸೂರು ರಮಾನಂದ್, ಆಲಿಶಾ, ಸತೀಶ್‌ಗೌಡ್ರು, ಶೂಟಿಂಗ್ ಕೃಷ್ಣ ಮುಂತಾದವರು ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು ಚಿತ್ರದಲ್ಲಿ ನಟಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಚಿತ್ರದ ನಾಯಕ, ನಿರ್ಮಾಪಕ ಗಿರೀಶ್ ಪ್ರಕಾಶ ಭಸ್ಮೇ, ನಾನು ಹೆಚ್‌ಟುಓ, ಶ್ರೀರಾಂಪುರ ಪೊಲೀಸ್ ಸ್ಟೇಷನ್ ಮುಂತಾದ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೇನೆ. ಒಮ್ಮೆ ನಿರ್ದೇಶಕರೊಂದಿಗೆ ಶುರುವಾದ ಪರಿಚಯ ನನ್ನನ್ನು ಇಲ್ಲಿಯವರೆಗೂ ತಂದು ನಿಲ್ಲಿಸಿದೆ. ಹೆಸರಿಗೆ ತಕ್ಕಂತೆ ನಮ್ಮ ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು ಚಿತ್ರವು ಹಾಸ್ಯ, ಭಾವನೆಗಳು, ಪ್ರೀತಿ, ಪ್ರೇಮದ ಅಂಶಗಳಿಂದ ತುಂಬಿಕೊಂಡಿದ್ದು ನೋಡುಗರಿಗೆ ಮನರಂಜನೆ ಕೊಡಲಿದೆ ಎಂದರು.

ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು ಚಿತ್ರಕ್ಕೆ ಗೋಪಿ ಕಲಾಕಾರ್ ಅವರ ಸಂಗೀತ ಸಂಯೋಜನೆ, ಹೊಸೂರು ಮಂಜು ಅವರ ಛಾಯಾಗ್ರಹಣ, ಸಂತೋಷ್ ರಾಥೋಡ್ ಅವರ ಸಾಹಸ, ಡಾಲಿ ರಮೇಶ್ ಅವರ ನೃತ್ಯ ಸಂಯೋಜನೆ ಇದೆ. ಬೆಂಗಳೂರು, ರಾಮನಗರ, ಹಂದಲಗೆರೆ ಹಾಗೂ ಮೈಸೂರು ಸುತ್ತಮುತ್ತಲ ಸುಂದರ ತಾಣಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಚಿತ್ರದ ಮೊದಲ ಪ್ರತಿ ಹೊರಬಂದಿದ್ದು ಸೆನ್ಸಾರ್ ಮಂಡಳಿಯಿಂದ ಪ್ರಶಂಸೆ ಪಡೆದುಕೊಂಡಿರುವ ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು ಚಿತ್ರವನ್ನು ಸದ್ಯದಲ್ಲೆ ತೆರೆಗೆ ತರಲು ಚಿತ್ರತಂಡವು ಯೋಜನೆ ಹಾಕಿಕೊಂಡಿದೆ.

ನಿದ್ರಾದೇವಿಯ ರೊಮ್ಯಾಂಟಿಕ್ ಹಾಡಿಗೆ ಗಣೇಶ್ ಸಾಥ್





ನಿದ್ದೆ ಎನ್ನುವುದು ಎಂಥವರನ್ನಾದರೂ ಕೈವಶ ಮಾಡಿಕೊಳ್ಳುತ್ತೆ, ಅದೇರೀತಿ ನಿದ್ರೆಯೇ ಬಾರದ ಹುಡುಗನೊಬ್ಬನ ಕಥೆ ಇಟ್ಟುಕೊಂಡು ನಿದ್ರಾದೇವಿ ನೆಕ್ಸ್ಟ್ ಡೋರ್ ಎಂಬ ಸಿನಿಮಾ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕ ಸುರಾಗ್. ತನಗಿದ್ದ ಈ ತೊಂದರೆಯಿಂದ ಆತ ಏನೇನೆಲ್ಲ ತೊಂದರೆ ಅನುಭವಿಸುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದಾರೆ. ಈ ಹಿಂದೆ ಜಂಟಲ್‌ಮ್ಯಾನ್ ಚಿತ್ರದಲ್ಲಿ ನಿದ್ರೆಯನ್ನು ಕಂಟ್ರೋಲ್ ಮಾಡಲಾಗದ ನಾಯಕನ ಕಥೆಯಿತ್ತು. ಇಲ್ಲಿ ನಿದ್ರೆ ಬಾರದ ನಾಯಕನ ಕಥೆಯಿದೆ. ಜಯರಾಮ ದೇವಸಮುದ್ರ ಅವರ ನಿರ್ಮಾಣದ ಈ ಚಿತ್ರದಲ್ಲಿ ಪ್ರವೀರ್ ಶೆಟ್ಟಿ, ರಿಷಿಕಾ ನಾಯಕ – ನಾಯಕಿಯಾಗಿ ನಟಿಸಿದ್ದಾರೆ, ಇತ್ತೀಚೆಗೆ ನೀನನ್ನ ಎಂಬ ರೊಮ್ಯಾಂಟಿಕ್ ಸಾಂಗನ್ನು ಗೋಲ್ಡನ್‌ಸ್ಟಾರ್ ಗಣೇಶ್ ಬಿಡುಗಡೆ ಮಾಡಿದರು. ನಿರ್ಮಾಪಕ ಜಯರಾಮ ಮಾತನಾಡುತ್ತಾ, ಇದು ನನ್ನ ನಿರ್ಮಾಣದ ಮೂರನೇ ಸಿನಿಮಾ, ಒಂದು ಚಿತ್ರಕ್ಕೆ ಹಾಡುಗಳು ಇನ್ವಿಟೇಶನ್ ಇದ್ದಹಾಗೆ. ಹಾಡುಗಳಿಗೆ ಪ್ರೇಕ್ಷಕರನ್ನು ಕರೆತರುವ ಶಕ್ತಿಯಿದೆ. ಹಾಗಾಗಿ ನಾನು ನಿರ್ದೇಶಕರಿಗೆ ಹಾಡುಗಳನ್ನು ತುಂಬಾ ಚೆನ್ನಾಗಿ ಮಾಡಲು ಹೇಳಿದ್ದೆ. ನಕುಲ್ ಅಭಯಂಕರ್ ಅವರ ಸಂಗೀತ ಸಂಯೋಜನೆಯ ಈ ಹಾಡನ್ನು ರಾಘವೇಂದ್ರ ಕಾಮತ್ ಬರೆದಿದ್ದಾರೆ ಎಂದು ಹೇಳಿದರು.

ನಿರ್ದೇಶಕ ಸುರಾಗ್ ಮಾತನಾಡುತ್ತಾ, ನಿರ್ಮಾಪಕರು ಚಿತ್ರಕ್ಕೆ ಯಾವುದೇ ಕೊರತೆಬಾರದ ಹಾಗೆ ನೋಡಿಕೊಂಡಿದ್ದಾರೆ. ಈ ರೊಮ್ಯಾಂಟಿಕ್ ಹಾಡು ರೊಮ್ಯಾಂಟಿಕ್ ಹೀರೊ ಗಣೇಶ್ ಅವರಿಂದ ಬಿಡುಗಡೆಯಾಗಿದ್ದು ಬಹಳ ಖುಷಿಯಾಗಿದೆ. ಚಿತ್ರಕ್ಕೆ ಪ್ರವೀರ್ ಹಾಗೂ ರಿಷಿಕಾರನ್ನು ಸೆಲೆಕ್ಟ್ ಮಾಡಿದಾಗ ಸಾಕಷ್ಟು ಜನ ಈ ಜೋಡಿ ತುಂಬಾ ಚೆನ್ನಾಗಿದೆ ಎಂದರು. ನಕುಲ್ ಅವರ ಸಂಗೀತ ಹಾಗೂ ಅಜಯ್ ಕುಲಕರ್ಣಿ ಅವರ ಛಾಯಾಗ್ರಹಣ ನಮ್ಮ ಚಿತ್ರದ ಹೈಲೈಟ್ ಎಂದು ಹೇಳಿದರು.

ನಟ ಗಣೇಶ್ ಮಾತನಾಡುತ್ತಾ, ನೀ ನನ್ನ ಹಾಡು ಬಹಳ ಮಧುರವಾಗಿದೆ. ಹಾಡಿನಲ್ಲಿ ನಾಯಕ – ನಾಯಕಿ ಮುದ್ದಾಗಿ ಕಾಣುತ್ತಾರೆ. ಇನ್ನು ಹಾಡಿನಷ್ಟೇ ಚಿತ್ರ ಕೂಡ ಚೆನ್ನಾಗಿದ್ದಾಗ ಮಾತ್ರ ಜನ ಚಿತ್ರಮಂದಿರಗಳಿಗೆ ಬರುತ್ತಾರೆ ಎಂದು ಹೇಳಿದರು. ನಾಯಕಿ ರಿಶಿಕಾ, ಛಾಯಾಗ್ರಾಹಕ ಅಜಯ್ ಕುಲಕರ್ಣಿ ಸಹ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಬಿಗ್‌ಬಾಸ್ ಖ್ಯಾತಿಯ ಶೈನ್ ಶೆಟ್ಟಿ ಹಾಗೂ ಶ್ರುತಿ ಹರಿಹರನ್, ಹಿರಿಯನಟ ಕೆ.ಎಸ್. ಶ್ರೀಧರ್, ಸುಧಾರಾಣಿ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಹಾಡಲ್ಲೇ 'ಹಚ್ಚೆ' ಹಾಕಿಸಿಕೊಂಡವರು...



ಅಶ್ವ ಫಿಲಂಸ್ ಲಾಂಛನದಲ್ಲಿ ಯಶೋಧರ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಹಚ್ಚೆ ಚಿತ್ರದ 'ವಿಘ್ನೇಶ್ವರಾಯ' ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ವಿವೇಕ್ ಚಕ್ರವರ್ತಿ ಅವರ ಸಂಗೀತವಿರುವ ಈ ಹಾಡನ್ನು ಮಾಧ್ಯಮ ಮಿತ್ರರೆಲ್ಲ ಸೇರಿ ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು.

'ಹಚ್ಚೆ' ಹೆಸರಿನಲ್ಲೇ ಒಂದು ಕುತೂಹಲವಿದೆ. ಚಿತ್ರಕ್ಕೆ ಇದೇ ಹೆಸರನ್ನು ಇಟ್ಟಿರುವುದೇಕೆ ಎಂದು ಚಿತ್ರದಲ್ಲಿ ತಿಳಿಸಿದ್ದೇವೆ. ಇದು ಒಂದು ಜಾನರ್‌ಗೆ ಸೀಮಿತವಾದ ಚಿತ್ರವಲ್ಲ. ಲವ್, ಸೆಂಟಿಮೆಂಟ್, ಸಸ್ಪೆನ್ಸ್, ಥ್ರಿಲ್ಲರ್ ಹೀಗೆ ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳು ಚಿತ್ರದಲ್ಲಿದೆ. ಮೊದಲ ಹಾಡನ್ನು ರಿಲೀಸ್ ಮಾಡುವ ಮೂಲಕ ಚಿತ್ರದ ಪ್ರಚಾರಕ್ಕೆ ಚಾಲನೆ ನೀಡಿದ್ದೇವೆ. ನಾಯಕನಾಗಿ ಅಭಿಮನ್ಯು ಹಾಗೂ ನಾಯಕಿಯಾಗಿ ಆದ್ಯಪ್ರಿಯ ನಟಿಸಿದ್ದಾರೆ. ಚಿತ್ರಕ್ಕೆ ತಂತ್ರಜ್ಞರ ಸಹಕಾರ ತುಂಬಾ ಇದೆ. ನಮ್ಮ ಚಿತ್ರದ ಬಹುತೇಕ ಚಿತ್ರೀಕರಣ ಸೆಟ್‌ನಲ್ಲೇ ನಡೆದಿದೆ. ಕಲಾ ನಿರ್ದೇಶಕ ಶಂಕರ್ ಅವರು ಏಳು ಅದ್ದೂರಿ ಸೆಟ್‌ಗಳನ್ನು ಹಾಕಿಕೊಟ್ಟಿದ್ದರು. ಹಚ್ಚೆ ಚಿತ್ರವೀಗ ತೆರೆಗೆ ಬರಲು ಸಿದ್ಧವಾಗಿದೆ ಎಂದು ನಿರ್ದೇಶಕ ಯಶೋಧರ ತಿಳಿಸಿದರು.

ಚಿತ್ರದ ನಾಯಕ ನಟ ಅಭಿಮನ್ಯು ಮಾತನಾಡುತ್ತಾ, ನಾನು ಮೂಲತಃ ಮೈಸೂರಿನವನು. ರಂಗಭೂಮಿಯ ಸಾಕಷ್ಟು ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಅಂಜನೀಪುತ್ರ ಹಾಗೂ ಕೆಲ ಚಿತ್ರಗಳಲ್ಲಿ ಸಹ ಕಲಾವಿದನಾಗಿ ನಟಿಸಿದ್ದೇನೆ. ನನ್ನ ಪ್ರತಿಭೆ ಗುರುತಿಸಿ ಯಶೋಧರ ಅವರು ಈ ಚಿತ್ರದಲ್ಲಿ ನನಗೆ ಅವಕಾಶ ನೀಡಿದ್ದಾರೆ ಎಂದರು. ಹಾಡುಗಳ ಬಗ್ಗೆ ಸಂಗೀತ ನಿರ್ದೇಶಕ ವಿವೇಕ್ ಚಕ್ರವರ್ತಿ ಮಾಹಿತಿ ನೀಡಿದರು. ನಾಯಕಿ ಆದ್ಯಪ್ರಿಯ, ನಟಿ ಅನುಪ್ರೇಮ ತಮ್ಮ ಪಾತ್ರದ ಬಗ್ಗೆ ಹೇಳಿದರು. ಸಾಹಸ ನಿರ್ದೇಶಕ ಚಂದ್ರು ಬಂಡೆ, ನೃತ್ಯ ನಿರ್ದೇಶಕ ಸ್ಟಾರ್ ನಾಗಿ ಹಾಗೂ ಛಾಯಾಗ್ರಾಹಕ ಯಾಸಿನ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

'ಎಲ್ಟು ಮುತ್ತಾ' ಸಾವಿನ ಮನೇಲಿ

ಡೋಲು ಹೊಡೆಯೋರ ಕಥೆ





ಮಡಿಕೇರಿ ಮಣ್ಣಿನಲ್ಲಿ ನಡೆಯುವ ಕಥಾಹಂದರ ಇಟ್ಟುಕೊಂಡು ನಿರ್ದೇಶಕ ರಾಂ ಸೂರ್ಯ ಆಕ್ಷನ್ ಕಟ್ ಹೇಳಿರುವ ಚಿತ್ರ 'ಎಲ್ಟು ಮುತ್ತಾ'. ನವಿಲು ನೋಡಲು ಎಷ್ಟು ಮುಗ್ಧವಾಗಿರುತ್ತದೆಯೋ ಅದರಲ್ಲಿ ಅಷ್ಟೇ ಕ್ರೂರತೆಯೂ ಸಹ ಇರುತ್ತದೆ. ಹಾವನ್ನು ವಿಷಪೂರಿತ ಹಾವನ್ನು ಕಚ್ಚಿ ಕಚ್ಚಿ ಕೊಲ್ಲುತ್ತದೆ. ಈ ಕಾನ್ಸೆಪ್ಟ್ ಮೇಲೆ ಎಲ್ಟು, ಮುತ್ತಾ ಎಂಬ ಇಬ್ಬರು ವ್ಯಕ್ತಿಗಳ ಕಥೆಯನ್ನು ನಿರೂಪಿಸಿದ್ದಾರೆ, ಸಾವಿನ ಮನೆಯಲ್ಲಿ ಡೋಲು ಹೊಡೆಯುವವರ ಕಥೆಯಿದು. ಹೈ 5 ಸ್ಟುಡಿಯೋಸ್ ಮೂಲಕ ಸತ್ಯ ಎಸ್. ಶ್ರೀನಿವಾಸನ್ ಸೇರಿದಂತೆ ಐವರು ಸ್ನೇಹಿತರು ನಿರ್ಮಿಸಿರುವ ಈ ಚಿತ್ರದ ಆಡಿಯೋ ಬಿಡುಗಡೆ ಸಮಾರಂಭ ಹುಬ್ಬಳ್ಳಿಯಲ್ಲಿ ನೆರವೇರಿತು. ಶೌರ್ಯ ಪ್ರತಾಪ್, ರಾ.ಸೂರ್ಯ, ಹಾಗೂ ಪ್ರಿಯಾಂಕ ಮಳಲಿ ಮುಖ್ಯ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರಕ್ಕೆ ಪ್ರಸನ್ನ ಕೇಶವ ಸಂಗೀತ ನೀಡಿದ್ದಾರೆ,

ಇದು ಬರೀ ಕೊಡಗಿನ ಕಥೆಯಲ್ಲ. ಕೊಡಗಿನ ಕಥೆಯನ್ನು ಕರ್ನಾಟಕಕ್ಕೆ ಹೇಳುವ ಪ್ರಯತ್ನ. ಯಾವ ಸ್ಟಾರ್ ನಟರನ್ನೂ ಗಮನದಲ್ಲಿಟ್ಟುಕೊಂಡು ಈ ಸಿನಿಮಾ ಮಾಡಲಿಲ್ಲ. ನಮ್ಮ ಟೀಸರ್ ನೋಡಿ ಸತ್ಯ ಶ್ರೀನಿವಾಸನ್ ನಮ್ಮ ಜೊತೆ ನಿಂತರು. ನಾನು ಮೂಲತಃ ಕೊಡಗಿನವನು. ಈ ಜನರನ್ನು ಕಣ್ಣಾರೆ ನೋಡಿದ್ದೇನೆ. ಕೆಲವರು ಬದುಕಿದ್ದಾರೆ. ಇನ್ನೂ ಕೆಲವರು ಈಗಿಲ್ಲ. ಅವರ ಜೀವನವನ್ನು ಹೇಳುವ ಪ್ರಯತ್ನ ಈ ಚಿತ್ರದಲ್ಲಿದೆ. 55 ದಿನಗಳವರೆಗೆ ಕೊಡಗಿನ ಸುತ್ತಮುತ್ತ ಹಾಗೂ ಒಂದು ಹಾಡನ್ನು ಕನಕಪುರದ ಬಳಿ ಚಿತ್ರೀಕರಿಸಲಾಗಿದೆ ಎಂದು ನಿರ್ದೇಶಕರು ತಿಳಿಸಿದರು.

ನಿರ್ಮಾಪಕ ಸತ್ಯ ಶ್ರೀನಿವಾಸನ್ ಮಾತನಾಡುತ್ತಾ, ಜುಲೈ 16ಕ್ಕೆ ಟ್ರೈಲರ್ ಬಿಡುಗಡೆ ಮಾಡುತ್ತಿದ್ದೇವೆ. ಜುಲೈ ಕೊನೆ ಅಥವಾ ಆಗಸ್ಟ್ ಮೊದಲವಾರ ಚಿತ್ರವನ್ನು ರಿಲೀಸ್ ಮಾಡುವ ಯೋಚನೆಯಿದೆ ಎಂದರು.

ಮತ್ತೊಬ್ಬ ನಿರ್ಮಾಪಕ ಪವೀಂದ್ರ ಮುತ್ತಪ್ಪ ಮಾತನಾಡುತ್ತಾ, ನಾನು ಹಾಗೂ ಸತ್ಯ ಶ್ರೀನಿವಾಸನ್ ಹಳೆಯ ಸ್ನೇಹಿತರು. ಒಮ್ಮೆ ಮಾತನಾಡುವಾಗ ಈ ಚಿತ್ರದ ಪ್ರಸ್ತಾಪವಾಯಿತು. ನನಗೂ ಈ ಚಿತ್ರದಲ್ಲಿ ತೊಡಗಿಸಿಕೊಳ್ಳಬೇಕು ಎನಿಸಿದ್ದರಿಂದ ತಂಡದ ಜೊತೆಯಾದೆ. ನಾನೀಗಾಗಲೇ ಸಿನಿಮಾ ನೋಡಿದ್ದೇನೆ. ತುಂಬಾ ಚೆನ್ನಾಗಿ ಬಂದಿದೆ. ನಮ್ಮ ಸಂಸ್ಥೆಯಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ಚಿತ್ರಗಳನ್ನು ಮಾಡುವ ಪ್ಲಾನ್ ಇದೆ ಎಂದರು.

ನಾಯಕ ಶೌರ್ಯಪ್ರತಾಪ್ ಮಾತನಾಡುತ್ತಾ, ನಾನು ಮುತ್ತನ ಪಾತ್ರದಲ್ಲಿ ನಟಿಸಿದ್ದೇನೆ ಎನ್ನುವುದಕ್ಕಿಂತ ಮುತ್ತನಾಗಿ ಜೀವಿಸಿದ್ದೇನೆ. ಪಾತ್ರಕ್ಕೆ ದೈಹಿಕವಾಗಿ ತಯಾರಾಗುವುದಕ್ಕಿಂತ ಮಾನಸಿಕವಾಗಿ ಸಾಕಷ್ಟು ತಯಾರಿ ನಡೆಸಿದ್ದೆ ಎಂದರು.

ಕೊಡಗಿನಲ್ಲಿ ಇಂಥದ್ದೊಂದು ಜನಾಂಗ ಇದೆ ಅಂತ ನನಗೆ ಗೊತ್ತಿರಲಿಲ್ಲ. ನಿರ್ದೇಶಕರು ಹೇಳಿದ ಮೇಲೆ ಗೊತ್ತಾಗಿದ್ದು. ಈ ಪಾತ್ರದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಸುಮಾರು ಮೂರು ದಿನ ಕಾಯಬೇಕಾಯಿತು. ನಾಲ್ಕನೇ ದಿನ ನಾನೇ ಪಾತ್ರವಾಗಿ ಹೋದೆ. ಸಿನಿಮಾಗಾಗಿ ಒಂದೂವರೆ ತಿಂಗಳವರೆಗೆ ಕೆಲಸ ಮಾಡಿದ್ದು, ಚಿತ್ರದಿಂದ ತುಂಬಾ ಕಲಿತಿದ್ದೇನೆ ಎಂದು ನಾಯಕಿ ಪ್ರಿಯಾಂಕ ಮಳಲಿ ಹೇಳಿದರು. ಸಂಗೀತ ನಿರ್ದೇಶಕ ಪ್ರಸನ್ನ ಕೇಶವ 5 ಬೇರೆ ಬೇರೆ ಜಾನರ್ ಹಾಡುಗಳ ಕುರಿತಂತೆ ಮಾಹಿತಿ ನೀಡಿದರು.

ಸಿನಿಪದಬಂಧ–584



ಉಮ್ಮತ್ತೂರು ಇಂದುಶೇಖರ್
ಮೊ.9880820462

1				2			■	■	3	4
	■	■	■		■	■	■	5	■	
	■	6				7	■	8		
	■	■	■		■		■		■	
9			10	■	11				■	
■	■	■		■	■		■	■	12	■
■	13				■	14				
■	■	■		■	■		■	■		■
15	16					■	17			
■		■	■	■	■	18	■	■		■
19			■	20						

ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಗಣೇಶ್–ಅಮೂಲ್ಯಳ ಸೊಬಗಿನ ರಂಗೋಲಿ 7
3. ಪುನೀತ್ – ರಮ್ಯ ಅಭಿನಯದ ಚಿತ್ರ ಇಲ್ಲಿ ತಿರುಗಿದೆ 2
6. ಶಂಕರ್ ನಾಗ್ – ದೀಪಿಕಾಳ ನೂತನ ಬದುಕು 5
8. ರಾಧಾಳ ಜೊತೆ ಬಂದವನು 3
9. ಭೂಲೋಕದಲ್ಲಿ ಕಾಣಿಸಿಕೊಂಡ ನರಕಾಧಿಪತಿ 4
11. ಸರದಾರನ ಬಾಣದ ರಭಸ 4
13 ವಿಶ್ವಕ್ಕೆ ಒಡೆಯನಂತಿರುವ ಹಿರಿಯ ನಟ 4
14. ಯಾರೂ ಕಾಣದ ಏಳು ಸಮುದ್ರ ಹಾಡಿನಲ್ಲಿ ಬಂತು 5
15. ಕಣಗಾಲ್ ಪ್ರಭಾಕರ ಶಾಸ್ತ್ರಿ ನಿರ್ದೇಶನದಲ್ಲಿ ಈಕೆಗೂ ವಿವಾಹವಾಯಿತು 6
17. ವಿಷ್ಣು ಅಭಿನಯದಲ್ಲಿ ಬಂದ ಸರ್ಪಾಸ್ತ್ರ 4
19. ವಿಷ್ಣುವರ್ಧನ್ ಅಭಿನಯದಿ ಕಾಣಿಸಿಕೊಂಡ ಹೆಂಗಸು 3
20. ಉಪಪತ್ನಿ ಬೀರಿದ ಛಾಯೆ 7

ಮೇಲಿನಿಂದ ಕೆಳಕ್ಕೆ

1. ಚಪಲ _ _ _ _ _ 5
2. ಸಿಪಾಯಿ ಚಿತ್ರದ ರವಿಯ ಸ್ನೇಹಿತ 4
4. ಅನಂತ್ ನಾಗ್ ಹಾಡಿದ ಬೆಳಗಿನ ಹಾಡು 5
5. ಗೆಂಡೆತಿಮ್ಮನ ಬೇರೆಯವರ ಸಹವಾಸ 4
7. ಉಗ್ರ ನರಸಿಂಹ ನಿರ್ದೇಶನದಲ್ಲಿ ಬಂದ ದೇವದಾಸಿ 6
10. ವಿಷ್ಣುವರ್ಧನ್ ಮಂದಿಯ ಮುಖಂಡ 5
12. ವಿಷ್ಣುವರ್ಧನ್ – ರೋಹಿಣಿ ಅಭಿನಯದ ಪರಾಕ್ರಮಿ 6
16. ಕಳ್ಳ ಕುಳ್ಳ ಚಿತ್ರದ ನಾಯಕಿ 3
18. ಶಶಿಕುಮಾರ್ – ಸುಧಾರಾಣಿ ಅಭಿನಯದ ನಕ್ಷತ್ರ 2

ಸಿನಿ ಪದಬಂಧ 583ರ ಉತ್ತರ

ಮ	ಮ	ತೆ	ಯ	ಮ	ಡ	ಲು	■	■	ಸಂ	ತ
ಹಾ	■	■	■	ದ	■	■	■	ಚಿ	■	ವ
ಚ	■	ರಂ	ಗ	ನಾ	ಯ	ಕ	■	ಟ	ಗ	ರು
ತು	■	■	■	ರಿ	■	ರು	■	ಪ	■	ಮ
ರ	ಥಾ	ವ	ರ	■	ಗಾ	ಳಿ	ಪ	ಟ	■	ನೆ
■	■	■	ಣ	■	■	ನ	■	■	ಜ	■
■	ಬ್ರ	ಹ್ಮ	ವಿ	ಷ್ಣು	■	ಕ	ಥಾ	ನಾ	ಯ	ಕ
■	■	■	ಕ್ರ	■	■	ರೆ	■	■	ಮ್ಮ	■
ಮೈ	ಸೂ	ರು	ಮ	ಲ್ಲಿ	ಗೆ	■	ಅ	ಭಿ	ನ	ಯ
■	ರ	■	■	■	■	ದಾ	■	■	ಮ	■
ಅ	ಪ್ಪ	ಣ್ಣ	■	ಚ	ಲಿ	ಸ	ದ	ಸಾ	ಗ	ರ

ವಿಜೇತರು: ಕೆ.ಜನಾರ್ದನ್ ಬಿನ್ ದಿ. ವಿ.ಕೃಷ್ಣಮೂರ್ತಿ, #351, ಎ/ಎಫ್ ಬ್ಲಾಕ್, 7ನೇ ಮುಖ್ಯ ರಸ್ತೆ, ವಿವೇಕಾನಂದನಗರ, ಮೈಸೂರು



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ

ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಭಾರತದ ಹಿರಿಮೆ ಸಾರುವ ಓ ಮೈ ಇಂಡಿಯಾ



ಬಹುತೇಕ ಹೊಸಬರೇ ಸೇರಿಕೊಂಡು ನಿರ್ಮಾಣ ಮಾಡಿರುವ ಚಿತ್ರ 'ಓ ಮೈ ಇಂಡಿಯಾ'. ಹಿರಿಯ ಪತ್ರಕರ್ತ ಜಿ.ಎನ್.ಕೃಷ್ಣಮೂರ್ತಿ ಅವರ ನಿರ್ದೇಶನ ಸಾರಥ್ಯದಲ್ಲಿ ಮೂಡಿ ಬಂದಿರುವ ಈ ಚಿತ್ರದಲ್ಲಿ ರತನ್‌ದೇವ್, ಧರಣಿಶ್ರೀ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ, ಇತ್ತೀಚೆಗೆ ಈ ಚಿತ್ರದ ಹಾಡು ಮತ್ತು ಟ್ರೇಲರ್ ಬಿಡುಗಡೆ ಸಮಾರಂಭ ಶ್ರೀ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಅದ್ದೂರಿಯಾಗಿ ನಡೆಯಿತು. ಹಿರಿಯ ನಟ ಎಂ.ಎಸ್.ಉಮೇಶ್, ಸಮಾಜಸೇವಕ ಮಹೇಂದ್ರ ಮುನ್ನೋತ್ ಮತ್ತು ನಿರ್ಮಾಪಕ ಡಾ.ಲಯನ್ ಎಸ್.ವೆಂಕಟೇಶ್ ಅವರು ಟ್ರೈಲರ್ ಆಡಿಯೋ ಬಿಡುಗಡೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಸಾನ್ವಿಶ್ರೀಯಾ ಪ್ರೊಡಕ್ಷನ್ಸ್ ಅಡಿಯಲ್ಲಿ ಹಾಸನದ ರಮ್ಯಾ ಲೋಕೇಶ್ ಅವರು ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಹಿರಿಯ ಪತ್ರಕರ್ತ ಜಿ.ಎನ್. ಕೃಷ್ಣಮೂರ್ತಿ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ ನಟ ರತನ್‌ದೇವ್ ಅವರು ನಾಯಕನಾಗಿ ಕಾಣಿಸಿಕೊಂಡಿದ್ದು, ನಾಯಕಿ ಧರಣಿಶ್ರೀ ಅವರು ಶಿಕ್ಷಕಿಯಾಗಿ ಬಣ್ಣ ಹಚ್ಚಿದ್ದಾರೆ, ಚಿತ್ರದ ವಿಶೇಷ ಪಾತ್ರದಲ್ಲಿ ಹಿರಿಯನಟ ಸಾಯಿಕುಮಾರ್ ನಟಿಸಿದ್ದಾರೆ. ಉಳಿದಂತೆ ಅವಿನಾಶ್, ಸುಚೇಂದ್ರಪ್ರಸಾದ್, ಚಿತ್ರಾ ಶಣೈ, ಇರ್ಷಾದ್ ಅಹ್ಮದ್ ಮುಂತಾದವರು ನಟಿಸಿದ್ದಾರೆ. ಚಿತ್ರದಲ್ಲಿ ಮೂರು ಹಾಡುಗಳಿದ್ದು ಜಿ.ಭಟ್ ಅವರು ಸಂಗೀತ ಸಂಯೋಜಿಸಿದ್ದಾರೆ. ಅಭಿನಂದನ್ ಅವರ ಛಾಯಾಗ್ರಹಣ, ಕೌರವ ವೆಂಕಟೇಶ್ ಅವರ ಸಾಹಸ, ವಿನಯ್.ಜಿ. ಆಲೂರು ಅವರ ಸಂಕಲನ, ಎಂ.ಆರ್. ಕಪಿಲ್ ಅವರ ನೃತ್ಯನಿರ್ದೇಶನ ಈ ಚಿತ್ರಕ್ಕಿದೆ.

ಈ ಸಂದರ್ಭದಲ್ಲಿ ಮಾತನಾಡಿದ ನಾಯಕ ರತನ್‌ದೇವ್, ಈ ಚಿತ್ರದಲ್ಲಿ ನಾನೊಬ್ಬ ಜಿಲ್ಲಾಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ. ಭಾರತದ ಪ್ರಸ್ತುತ ಪರಿಸ್ಥಿತಿಯನ್ನು ಮನಗಂಡು ಸುಧಾರಣೆ ಮಾಡಲು ಚಿಂತನೆ ನಡೆಸುತ್ತೇನೆ. ಸರ್ಕಾರಿ ಅಧಿಕಾರಿಯೊಬ್ಬ ಮನಸ್ಸು ಮಾಡಿದರೆ ಸಮಾಜವನ್ನು ಹೇಗೆ ಸರಿಪಡಿಸಬಹುದು ಎಂಬುದನ್ನು ನನ್ನ ಪಾತ್ರದ ಮೂಲಕ ಹೇಳುವ ಪ್ರಯತ್ನ ಮಾಡಿದ್ದೇನೆ ಎಂದರು.

ಇನ್ನು ಈ ಚಿತ್ರಕ್ಕೆ ಬೆಂಗಳೂರು, ಹಾಸನ, ಸಕಲೇಶಪುರದಂಥ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಸ್ವಾತಂತ್ರ್ಯ ದಿನಾಚರಣೆಯ ಸಮಯದಲ್ಲಿ ಓ ಮೈ ಇಂಡಿಯಾ ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡಬೇಕೆಂದು ನಿರ್ಮಾಪಕರು ಯೋಜನೆ ಹಾಕಿಕೊಂಡಿದ್ದಾರೆ.

ಮೈಸೂರು ಮಿತ್ರ

ಹಡಪದ ಅಪ್ಪಣ್ಣನವರ ವಚನಗಳು ಇಂದಿಗೂ ಪ್ರಸ್ತುತ

ನಂಜನಗೂಡು, ಜು.10– ಹಡಪದ ಅಪ್ಪಣ್ಣನವರು 12ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಸಾಮಾಜಿಕ ತಾರತಮ್ಯ ಹೋಗಲಾಡಿಸಲು ಶ್ರಮಿಸಿದರು ಎಂದು ಮುಖ್ಯ ಭಾಷಣಕಾರ ಪ್ರಾಧ್ಯಾಪಕ ಉಮೇಶ್ ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಹಡಪದ ಅಪ್ಪಣ್ಣನವರ ಜಯಂತಿಯಲ್ಲಿ ಮಾತನಾಡಿದ ಅವರು, ಹಡಪದ ಅಪ್ಪಣ್ಣನವರು ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿ, ವಚನ ಸಾಹಿತ್ಯದ ಸಂಸ್ಕೃತಿಯನ್ನು ಇಡೀ ವಿಶ್ವಕ್ಕೆ ಪರಿಚಯಿಸುವುದರಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ. ಜೊತೆಗೆ 250ಕ್ಕೂ ಹೆಚ್ಚು ವಚನಗಳನ್ನು ರಚನೆ ಮಾಡಿ ಸಮಾಜದಲ್ಲಿದ್ದ ಜಾತಿ ತಾರತಮ್ಯ, ಮೌಢ್ಯತೆ, ಶೋಷಣೆ ಹೋಗಲಾಡಿಸಲು ಶ್ರಮಿಸಿದ್ದಾರೆ. ಅವರ ವಚನಗಳು ಶ್ರಮಿಕ ವರ್ಗದ ಜನರಿಗೆ ಸನ್ಮಾರ್ಗ ತೋರಿಸುವಂತೆ, ಶೋಷಣೆ ಮಾಡುತ್ತಿರುವ ಜನರಿಗೆ ಚಾಟಿ ಏಟು ನೀಡುವಂತೆ ಬಂಡಾಯದ ಧ್ವನಿಯಾಗಿ ಕೆಲಸ ಮಾಡಿವೆ.



ಹಡಪದ ಅಪ್ಪಣ್ಣ ಜಯಂತಿಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಅವರ ವಚನಗಳು ಇಂದಿಗೂ ಪ್ರಸ್ತುತವಾಗಿದ್ದು, ಎಲ್ಲರೂ ಅವರ ತತ್ವ ಆದರ್ಶಗಳನ್ನು ಪಾಲಿಸಬೇಕು ಎಂದರು.

ಕೇಶಾಲಂಕಾರಿ ಸಂಘದ ತಾಲೂಕು ಅಧ್ಯಕ್ಷ ಪುಟ್ಟರಾಜು ಮಾತನಾಡಿ, ಶೋಷಿತ ಸಮಾಜಗಳು ಮುಂದೆ ಬರಲು ಶಿಕ್ಷಣ ಒಂದೇ ಪ್ರಮುಖ ಅಸ್ತ್ರ. ಆದ್ದರಿಂದ ಸಮುದಾಯದ ಬಂಧುಗಳು ಕಡ್ಡಾಯವಾಗಿ ನಿಮ್ಮ ಮಕ್ಕಳಿಗೆ ಶಿಕ್ಷಣ ಎಂದರು.

ಇದೇ ವೇಳೆ ಎಸ್ಎಸ್ಎಲ್‌ಸಿ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ನಗರಸಭಾ ಸದಸ್ಯ ಯೋಗೀಶ್, ಮುಡಿಕಟ್ಟೆ ಸಮಿತಿ ಅಧ್ಯಕ್ಷ ರಾಜಪ್ಪ, ಕಾರ್ಯದರ್ಶಿ ಶ್ರೀನಿವಾಸ್, ಮುಖಂಡರಾದ ನಾಗೇಂದ್ರ, ಬಸವಣ್ಣ, ಶಿವಪ್ರಸಾದ್, ಶ್ರೀಕಂಠ ಪ್ರಸಾದ್, ಸುಧಾ, ಅಬ್ದುಲ್ ಖಾದರ್, ಶಿರಸ್ತೇದಾರ್ ಶ್ರೀನಿವಾಸ್, ಮಹದೇವಪ್ಪ, ಸಿಆರ್‌ಪಿ ಚೇತನ್ ಶರ್ಮಾ ಸೇರಿದಂತೆ ಹಲವರಿದ್ದರು.

ಜು.13, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ನಂಜನಗೂಡು, ಜು.10– ತಾಲೂಕು ನಾಯಕರ ಸಂಘದಿಂದ ನಗರದ ಗೌರಿಘಟ್ಟ ಬೀದಿಯಲ್ಲಿರುವ ನಾಯಕರ ಸಮುದಾಯ ಭವನದಲ್ಲಿ ಜು.13ರಂದು ಬೆಳಗ್ಗೆ 10.30ಕ್ಕೆ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ನಾಗರಾಜು ತಿಳಿಸಿದ್ದಾರೆ.

ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮೈಸೂರು ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕೆ.ಎನ್.ಸುಬ್ಬಣ್ಣ ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

ಮೈಸೂರು ಜಿಲ್ಲೆಗೇ ನಂ.1 ಕೆ.ಆರ್.ನಗರ ನವನಗರ ಬ್ಯಾಂಕ್

ಕೆ.ಆರ್.ನಗರ, ಜು.10–ಕೆ.ಆರ್.ನಗರವನ್ನು ಕೇಂದ್ರ ಸ್ಥಾನವಾಗಿ ಹೊಂದಿರುವ ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ 2024–25ನೇ ಸಾಲಿನಲ್ಲಿ 5.44 ಕೋಟಿ ಲಾಭ ಗಳಿಸಿದ್ದು, ಮೈಸೂರು ಜಿಲ್ಲೆಯ ಸಹಕಾರ ಬ್ಯಾಂಕ್‌ಗಳಲ್ಲೇ ಹೆಚ್ಚಿನ ಲಾಭ ಗಳಿಸಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ.

ಕೆ.ಆರ್.ನಗರ ಮಾತ್ರವಲ್ಲ ಹುಣಸೂರು, ಪಿರಿಯಾಪಟ್ಟಣ, ಮೈಸೂರಿನ ಹೂಟಗಳ್ಳಿ ಸೇರಿದಂತೆ 4 ಶಾಖೆಗಳನ್ನು ಹೊಂದಿರುವ ಬ್ಯಾಂಕ್ 4 ಎಟಿಎಂ, 8 ಕೋಟಿ ರೂ. ಮೌಲ್ಯದ 3 ಸ್ವಂತ ಕಟ್ಟಡಗಳನ್ನು ಹೊಂದಿದೆ. ಮೈಸೂರು ಜಿಲ್ಲೆಯಲ್ಲಿ ತನ್ನ ಗ್ರಾಹಕರಿಗೆ ಯುಪಿಐ ಹಾಗೂ ಮೊಬೈಲ್ ಬ್ಯಾಂಕಿಂಗ್ ಸೇವೆ ಒದಗಿಸುತ್ತಿರುವ ಏಕೈಕ ಸಹಕಾರ ಬ್ಯಾಂಕ್ ಇದಾಗಿದೆ.

ಈ ಬ್ಯಾಂಕ್‌ನಲ್ಲಿ ಪ್ರಸಕ್ತ ಸಾಲಿನಲ್ಲಿ ಸದಸ್ಯರಿಂದ 14.67 ಕೋಟಿ ರೂ. ಷೇರು ಧನ, 435 ಕೋಟಿ ರೂ. ಠೇವಣಿ, 148 ಕೋಟಿ ರೂ. ಹೂಡಿಕೆಯೊಂದಿಗೆ ತನ್ನ ಸದಸ್ಯರಿಗೆ 323 ಕೋಟಿ ರೂ.ಗಳ ವಿವಿಧ ರೀತಿಯ ಸಾಲ ನೀಡಿದೆ.

ಪ್ರತೀ ವರ್ಷವೂ ತನ್ನ ಸದಸ್ಯರಿಗೆ ಡಿವಿಡೆಂಡ್ ಜೊತೆಗೆ ಉಡುಗೊರೆ ನೀಡುತ್ತಿರುವ ಬ್ಯಾಂಕ್, ಹೂಡಿಕೆ ಮಾಡುವ ಠೇವಣಿದಾರರಿಗೆ ಅಧಿಕ ಬಡ್ಡಿಯನ್ನು ನೀಡುತ್ತಿರುವುದು ವಿಶೇಷ. ಪಡೆದ ಸಾಲವನ್ನು ಮರುಪಾವತಿ ಮಾಡದೆ ಸುಸ್ತಿಯಾಗಿರುವ ಸಾಲಗಾರರ ಚರಾಸ್ತಿಯನ್ನು ಸರ್ಫೇಸಿ ಕಾಯಿದೆ–2002ರಂತೆ ಬ್ಯಾಂಕ್‌ನ ಸುಪರ್ದಿಗೆ ಪಡೆಯುವ ಹರಾಜು ಮಾಡುವ ಹಾಗೂ ಕ್ರಯ ಮಾಡಿಕೊಳ್ಳುವ ಅಧಿಕಾರವನ್ನು ಬ್ಯಾಂಕ್ ಹೊಂದಿದೆ.

ಸಮಾಜ ಸೇವೆಯಲ್ಲಿಯೂ ತನ್ನನ್ನು ತೊಡಗಿಸಿಕೊಂಡಿರುವ ನವನಗರ ಬ್ಯಾಂಕ್ ಕೆ.ಆರ್.ನಗರದ ಅಗತ್ಯ ಸ್ಥಳಗಳಲ್ಲಿ ಸಾರ್ವಜನಿಕರು ವಿಶ್ರಮಿಸಿಕೊಳ್ಳಲು ಸಿಮೆಂಟ್ ಬೆಂಚ್ ವ್ಯವಸ್ಥೆ, ಕ್ರೀಡಾಕೂಟಗಳು ಹಾಗೂ ಧಾರ್ಮಿಕ ಕಾರ್ಯಗಳಿಗೆ ಸಹಾಯಧನ, ಆರೋಗ್ಯ ತಪಾಸಣೆ ಶಿಬಿರ ಮುಂತಾದ ಸಮಾಜ ಸೇವಾ ಕಾರ್ಯದ ಮೂಲಕ ಮೆಚ್ಚುಗೆ ಪಡೆದಿದೆ. ಈ ಬ್ಯಾಂಕ್ ಸಣ್ಣ ಮತ್ತು ಮಧ್ಯಮ ವರ್ಗದ ವ್ಯಾಪಾರಿಗಳು, ಬೀದಿ ಬದಿ ವ್ಯಾಪಾರಿಗಳು ಮತ್ತು ಬಡವರ ಪಾಲಿಗೆ ಆಪದ್ಬಾಂಧವನಂತಿದೆ.



ಕೆ.ಆರ್.ನಗರದ ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್.

> ನಮ್ಮ ಬ್ಯಾಂಕ್ ಈ ಸಾಲಿನಲ್ಲಿ 5.44 ಕೋಟಿ ಲಾಭ ಗಳಿಸಿದ್ದು, ಜಿಲ್ಲೆಯ ಸಹಕಾರ ಬ್ಯಾಂಕ್‌ಗಳಲ್ಲಿ ನಂ.1 ಸ್ಥಾನದಲ್ಲಿದೆ. ನಮ್ಮ ಗ್ರಾಹಕರಿಗೆ ಉತ್ತಮ ಸೇವೆ ನೀಡಲಾಗುತ್ತಿದ್ದು, ಸಣ್ಣ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸಿದೆ. 4 ಶಾಖೆಗಳ ಜೊತೆಗೆ ಎಟಿಎಂ, ಮೊಬೈಲ್ ಬ್ಯಾಂಕಿಂಗ್ ಸೇರಿದಂತೆ ಆಧುನಿಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಬ್ಯಾಂಕ್‌ನ ಅಭಿವೃದ್ಧಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಮಂಡಳಿ ಸದಸ್ಯರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಧನ್ಯವಾದ ಅರ್ಪಿಸುತ್ತೇನೆ.
> – ಕೆ.ಎನ್.ಬಸಂತ್, ನವನಗರ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷರು



> ನಮ್ಮ ಬ್ಯಾಂಕ್ ಕಳೆದ 26 ವರ್ಷಗಳಲ್ಲಿ ಪ್ರತೀ ವರ್ಷವೂ ಗುರಿ ಸಾಧನೆ ಮಾಡುತ್ತಿದ್ದು, ಅಭಿವೃದ್ಧಿ ಪಥದತ್ತ ಸಾಗುತ್ತಿದೆ. 4 ಶಾಖೆಗಳು, 4 ಎಟಿಎಂ, 8 ಕೋಟಿ ರೂ. ಮೌಲ್ಯದ 3 ಸ್ವಂತ ಕಟ್ಟಡಗಳನ್ನು ಹೊಂದಿರುವುದು ಬ್ಯಾಂಕ್‌ನ ಸುಸ್ಥಿರ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಸದಾ ಕಾಲ ನಮ್ಮ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುತ್ತಾ, ಭಾರೀ ಮೆಚ್ಚುಗೆ ಪಡೆದಿದೆ.
> – ಸಿ.ಸುರೇಶ್, ವ್ಯವಸ್ಥಾಪಕ ನಿರ್ದೇಶಕ, ನವನಗರ, ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್



ಸಖಿ ಸ್ವಾವಲಂಬಿ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು, ಜು.10–ಮೈಸೂರಿನ ಸಖಿ ಫೌಂಡೇಶನ್, ಸೂರ್ಯ ಚಾರಿಟಬಲ್ ಟ್ರಸ್ಟ್ 2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಸಖಿ ಸ್ವಾವಲಂಬಿ ಯೋಜನೆಗಾಗಿ ಅರ್ಜಿ ಆಹ್ವಾನಿಸಿದೆ. ಮಾಂಟೆಸರಿ ಶಿಕ್ಷಕರ ತರಬೇತಿ, ನರ್ಸರಿ, ಪೂರ್ವ ಪ್ರಾಥಮಿಕ, ಕಂಪ್ಯೂಟರ್ ಶಿಕ್ಷಕರ ತರಬೇತಿ, ಕಂಪ್ಯೂಟರ್ ಲಿಟ್ರಸಿ ಮುಂತಾದ ತರಬೇತಿಗಳನ್ನು ಈ ಯೋಜನೆಯಡಿ ತರಬೇತಿಯೊಂದಿಗೆ ನೀಡಲಾಗುತ್ತದೆ. ಎಸ್ಎಸ್ಎಲ್‌ಸಿ ಓದಿರುವ 18ರಿಂದ 55ರವರೆಗಿನ ಎಲ್ಲಾ ವರ್ಗದವರೂ ಈ ಯೋಜನೆಯ ಫಲಾನುಭವಿಗಳಾಗಲಿದ್ದು, ಗೃಹಿಣಿಯರು, ಉದ್ಯೋಗಸ್ಥರು, ಉದ್ಯೋಗಾಕಾಂಕ್ಷಿಗಳು, ಹಿರಿಯ ನಾಗರಿಕರು ಅರ್ಜಿ ಸಲ್ಲಿಸಬಹುದಾಗಿದೆ. ತರಬೇತಿಯಲ್ಲಿ ಮಕ್ಕಳ ಮನೋವಿಕಾಸ, ಮಾನಸಿಕ ಬೆಳವಣಿಗೆ, ಆಹಾರಾಭ್ಯಾಸ, ಕಂಪ್ಯೂಟರ್ ಕಲಿಕೆ, ಕನ್ನಡ ನುಡಿ, ಟೈಪಿಂಗ್ ಸ್ಕಿಲ್ ತರಬೇತಿ ನೀಡಲಾಗುತ್ತದೆ. ಮಾಹಿತಿಗೆ 8310306882, 9964790442 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಜು.20 ಕಡೇ ದಿನ.

ಬೆಟ್ಟದಪುರದಲ್ಲಿ ಗುರು ಪೂರ್ಣಿಮೆ

ಬೆಟ್ಟದಪುರ, ಜು.10– ಗುರು ಪೂರ್ಣಿಮೆ ಅಂಗವಾಗಿ ಬೈಲಕುಪ್ಪೆ ಟಿಬೆಟಿಯನ್ ನಿರಾಶ್ರಿತರ ಶಿಬಿರದ ನೂರಾರು ಟಿಬೆಟಿಯನ್ ಲಾಮಗಳು ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟ ಹತ್ತಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಬಳಿಕ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡ ಲಾಮಗಳು ಭಕ್ತಿ ಗೀತೆಗಳನ್ನು ಹಾಡಿದರು. ಅಲ್ಲದೇ ಬೆಟ್ಟದ ತಪ್ಪಲಿನಲ್ಲಿ ತಂದಿದ್ದ ಫಲಹಾರ ಸ್ವೀಕರಿಸಿದರು. ದೇಶದ, ನಾಡಿನ ಒಳಿತಿಗಾಗಿ ನಾವು ಪ್ರತಿ ವರ್ಷ ಬೆಟ್ಟದಪುರದಲ್ಲಿ ಗುರುಪೂರ್ಣಿಮೆ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ನೆರವೇರಿಸುತ್ತಿದ್ದೇವೆ. ಇಲ್ಲಿನ ಪ್ರಕೃತಿ ಸೌಂದರ್ಯ ಹಾಗೂ ಬೆಟ್ಟದ ಮೇಲಿನ ಹಸಿರಿನ ವನ, ಶಿಲ್ಪ ಕಲೆಗಳ ದೇವಾಲಯ ನೋಡಿ ನಮಗೆ ಸಂತೋಷವಾಗುತ್ತಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ಟಿಬೆಟಿಯನ್ ಲಾಮಗಳು ಗುರು ಪೂರ್ಣಿಮೆ ಆಚರಿಸಿದರು.

ಕೆರೆಗೆ ನುಗ್ಗಿದ ಸಾರಿಗೆ ಬಸ್: 20ಕ್ಕೂ ಹೆಚ್ಚು ಮಂದಿಗೆ ಗಾಯ

ಸರಗೂರು, ಜು.10– ಚಾಲಕನ ನಿಯಂತ್ರಣ ಕಳೆದುಕೊಂಡ ಸಾರಿಗೆ ಬಸ್ ಕೆರೆಗೆ ನುಗ್ಗಿದ ಪರಿಣಾಮ 20ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿರುವ ಘಟನೆ ತಾಲೂಕಿನ ಗೊಂತಗಾಲ ಹುಂಡಿ ಗ್ರಾಮದ ಬಳಿ ಗುರುವಾರ ರಾತ್ರಿ ನಡೆದಿದೆ.

ಸರಗೂರಿನಿಂದ ಕುರ್ಣೇಗಾಲಕ್ಕೆ ರಾತ್ರಿ 8 ಗಂಟೆಗೆ ಹೊರಟಿದ್ದ ಸಾರಿಗೆ ಬಸ್ ಚಾಲಕನ ನಿಯಂತ್ರಣ ತಪ್ಪಿ ಗೊಂತಗಾಲಹುಂಡಿ ಗ್ರಾಮದ ಕೆರೆಗೆ ನುಗ್ಗಿದೆ. ಪರಿಣಾಮ 20 ಮಂದಿ ಗಾಯಗೊಂಡಿದ್ದಾರೆ. ಈ ವೇಳೆ ಸ್ಥಳದಲ್ಲಿದ್ದ ಗ್ರಾಮಸ್ಥರು ಹಾಗೂ ಕಾಂಗ್ರೆಸ್ ಮುಖಂಡ ಚಿಕ್ಕಣ್ಣ, ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಲು ನೆರವಾದರು. ಬಳಿಕ ಗಾಯಾಳುಗಳಿಗೆ ಸರಗೂರು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಯಿತು. ಈ ವೇಳೆ ತೀವ್ರ ಗಾಯಗೊಂಡವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಡಾ.ರವಿಕುಮಾರ್ ಅವರ ನಿರ್ದೇಶನದಂತೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಯಿತು. ಅಲ್ಲದೇ ಕೆಲ ಗಾಯಾಳುಗಳನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೂ ಕಳುಹಿಸಲಾಯಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಗೂರು ಠಾಣೆ ಎಸ್ಐ ಕಿರಣ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ

'ಕೈ' ಅಭ್ಯರ್ಥಿಗಳ ಗೆಲುವಿಗೆ ಪೂರಕ ವಾತಾವರಣ ನಿರ್ಮಿಸಿ

ತಿ.ನರಸೀಪುರ ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ನೂತನ ಅಧ್ಯಕ್ಷ ಕೊಳತ್ತೂರು ಕೆ.ಎನ್.ಕುಮಾರ್ ಮನವಿ

ತಿ.ನರಸೀಪುರ, ಜು.10– ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೀನುಗಾರರ ಘಟಕದ ಪದಾಧಿಕಾರಿಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲು ಪೂರಕ ವಾತಾವರಣ ನಿರ್ಮಿಸಬೇಕು ಎಂದು ತಿ.ನರಸೀಪುರ ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ನೂತನ ಅಧ್ಯಕ್ಷ ಕೊಳತ್ತೂರು ಕೆ.ಎನ್.ಕುಮಾರ್ ಮನವಿ ಮಾಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ತಿ.ನರಸೀಪುರ ಹಾಗೂ ಬನ್ನೂರು ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಹಾಗೂ ಮೀನುಗಾರರ ಘಟಕದ ಜಿಲ್ಲಾಧ್ಯಕ್ಷ ಎಸ್.ಸಿದ್ದಯ್ಯ ಅವರ ಆದೇಶದ ಮೇರೆಗೆ ಸಭೆ ಆಯೋಜಿಸಲಾಗಿದ್ದು, ಕಮಿಟಿಗೆ 35 ಮಂದಿಯನ್ನು ಆಯ್ಕೆ ಮಾಡಲಾಗಿದೆ. ಆದೇಶ ಪತ್ರ ಬಂದ ನಂತರ ಜವಾಬ್ದಾರಿ ಹಂಚಿಕೆ ಮಾಡಲಾಗುವುದು. ಪದಾಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಮೀನುಗಾರರ ಸಮಸ್ಯೆ ಪಟ್ಟಿ ಮಾಡಿ ತಲುಪಿಸಿದರೆ ಅದನ್ನು ಜಿಲ್ಲಾ ಮಟ್ಟಕ್ಕೆ ತಲುಪಿಸಿ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡಲಾಗುತ್ತದೆ ಎಂದರು.


ಮೀನುಗಾರರ ಘಟಕದ ಅಧ್ಯಕ್ಷ ಕೆ.ಎನ್.ಕುಮಾರ್, ಸುರೇಂದ್ರ ಅವರನ್ನು ಅಭಿನಂದಿಸಲಾಯಿತು.

> ಕಾಂಗ್ರೆಸ್ ಸಾಮಾಜಿಕ ನ್ಯಾಯದಡಿ ನಾಯಕ ಸಮಾಜದವರನ್ನು ಗುರುತಿಸಿ ಮೀನುಗಾರರ ಘಟಕದ ಅಧ್ಯಕ್ಷರನ್ನಾಗಿ ಮಾಡಿರುವುದು ಸಂತಸ ತಂದಿದೆ. ನಮ್ಮ ಸಮಾಜದವರೇ ಆದ ಬಸವರಾಜು ಅವರು ಬ್ಲಾಕ್ ಕಾಂಗ್ರೆಸ್ ಘಟಕದ ಅಧ್ಯಕ್ಷ ರಾಗಿದ್ದಾರೆ. ಈಗ ಮೀನುಗಾರರ ಘಟಕಕ್ಕೆ ತಿ.ನರಸೀಪುರ ಬ್ಲಾಕ್‌ನಿಂದ ಕುಮಾರ್ ಅವರನ್ನು ಪಕ್ಷ ಆಯ್ಕೆ ಮಾಡಿದೆ. ನೂತನ ಅಧ್ಯಕ್ಷ ಕುಮಾರ್ ಅವರು ಕ್ಷೇತ್ರದಲ್ಲಿ ಸಂಚರಿಸಿ ಮೀನುಗಾರರ ಸಮಸ್ಯೆ ಅರಿತು ಅವರಿಗೆ ದೊರಕಬೇಕಾದ ಸವಲತ್ತುಗಳನ್ನು ದೊರಕಿಸಿ ಕೊಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. – ಬೂದಹಳ್ಳಿ ಸಿದ್ದರಾಜು, ನಾಯಕ ಸಮಾಜದ ಮುಖಂಡ.


ಮೀನುಗಾರರಿಗೆ ಬೇಕಿರುವ ಮನೆಗಳ ಬಗ್ಗೆ ಪಟ್ಟಿ ಮಾಡುವ ಜೊತೆಗೆ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಅಲ್ಲದೇ ಮೀನುಗಾರ ಸದಸ್ಯರನ್ನು ಚುನಾವಣೆ ಯಲ್ಲಿ ಪಕ್ಷದ ಪರ ಪ್ರಚಾರ ಮಾಡಲು ಸನ್ನದ್ಧರನ್ನಾಗಿ ಮಾಡುವ ಜವಾಬ್ದಾರಿ ಯನ್ನು ಪದಾಧಿಕಾರಿಗಳು ವಹಿಸಿಕೊಳ್ಳಬೇಕು. ಅಲ್ಲದೇ ಸರ್ಕಾರದ ಪಂಚ ಗ್ಯಾರಂಟಿಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶ ಸಹ ಮೀನುಗಾರ ಘಟಕದ ಸದಸ್ಯರ ಮೇಲಿದೆ ಎಂದರು.

ಮೀನುಗಾರರ ಘಟಕವನ್ನು ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಎಂದು ವಿಭಾಗ ಮಾಡಲಾಗಿದ್ದು, ನಾಲ್ಕು ಜಿಲ್ಲೆ ಸೇರಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಆಯಾಯ ಜಿಲ್ಲೆಯ, ಕ್ಷೇತ್ರದ ಶಾಸಕರನ್ನು ಆಹ್ವಾನಿಸಿ ಅದ್ಧೂರಿ ಸಮ್ಮೇಳನ ಮಾಡುವ ಉದ್ದೇಶ ಹೊಂದಲಾಗಿದ್ದು, ಇದಕ್ಕೆ ಅನುಮತಿ ದೊರೆತಿದೆ ಎಂದರು.

ಡಿಸಿಸಿ ಸದಸ್ಯ ಕುಕ್ಕೂರು ಗಣೇಶ್ ಮಾತನಾಡಿ, ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಸಮಿತಿ ರಚನೆ ಮಾಡಿ ಮುಂಬರುವ ಚುನಾವಣೆಗಳು ಹಾಗೂ ಪಕ್ಷದ ಕಾರ್ಯಕ್ರಮಗಳಿಗೆ ಸಂಘಟಿತರಾಗಿ ಕೆಲಸ ಮಾಡುವ ಉದ್ದೇಶದಿಂದ ಬನ್ನೂರು ಮತ್ತು ತಿ.ನರಸೀಪುರ ಬ್ಲಾಕ್ ಕಾಂಗ್ರೆಸ್ ಮೀನುಗಾರ ಘಟಕಕ್ಕೆ ಅಧ್ಯಕ್ಷರ ಆಯ್ಕೆ ಮಾಡಲಾಗಿದೆ. ಘಟಕದ ಮೊದಲ ಸಭೆ ಇದಾಗಿದ್ದು, ಕೆಲ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಜಿಲ್ಲಾ ಮಟ್ಟದಲ್ಲಿ ಅಪ್ರೂವಲ್ ತೆಗೆದುಕೊಳ್ಳಬೇಕಾಗುತ್ತದೆ. ಹಾಗಾಗಿ ನೂತನವಾಗಿ ಆಯ್ಕೆಯಾಗಿರುವ ಅಧ್ಯಕ್ಷರಿಗೆ ಎಲ್ಲರೂ ಸಹಕಾರ ನೀಡುವ ಮೂಲಕ ಪಕ್ಷ ಸಂಘಟನೆ ಬಲಪಡಿಸುವ ಕೆಲಸ ಮಾಡಬೇಕಾಗುತ್ತದೆ ಎಂದರು.

ಬನ್ನೂರು ಘಟಕದ ಅಧ್ಯಕ್ಷ ಸುರೇಂದ್ರ ಮಾತನಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಆಪ್ತ ಸಹಾಯಕ ಬಸವರಾಜು, ಸೋಮನಾಥಪುರ ಗ್ರಾಪಂ ಮಾಜಿ ಅಧ್ಯಕ್ಷ ರಾಜೇಶ್, ಗದ್ದೆಮೊಳೆ ಸಿದ್ದರಾಜು, ಕೊಳತ್ತೂರು ಗ್ರಾಪಂ ಮಾಜಿ ಅಧ್ಯಕ್ಷ ಸೋಮಣ್ಣ, ಪುರಸಭೆ ಮಾಜಿ ಸದಸ್ಯ ರಾಘವೇಂದ್ರ, ಮುಖಂಡರಾದ ಮೇದನಿ ಕುಮಾರ್, ಶಿವಮ್ಮ, ಶಾಂತರಾಜು, ಮಾದೇಶ್, ಬಸಪ್ಪ, ಬಸವರಾಜಪ್ಪ, ಮಹದೇವಪ್ಪ, ರಾಘವೇಂದ್ರ, ಶ್ರೀನಿವಾಸ, ಸಿದ್ದರಾಜು, ಮಾಧು, ಮರಿಸ್ವಾಮಿ ನಾಯಕ, ಪುಟ್ಟ ಮಾದನಾಯಕ, ಅಪ್ಪು, ಕಿರಣ್, ಪ್ರದೀಪ, ನಿತಿನ್, ರಂಗಸ್ವಾಮಿ, ಕೆ.ಮಾದೇಶ್, ಸತ್ಯ, ನಿಂಗರಾಜು, ಶೇಖರ್ ಮತ್ತಿತರರಿದ್ದರು.

3ನೇ ಆಷಾಢ ಶುಕ್ರವಾರ ಹಿನ್ನಲೆ: ಇಂದು ಭಕ್ತರಿಗೆ 10 ಸಾವಿರ ಲಾಡು ವಿತರಣೆ


ಚಿತ್ರದಲ್ಲಿ ಮುತ್ತುಮಾರಮ್ಮ ದೇವಿಯನ್ನು ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಮೂರನೇ ಆಷಾಢ ಶುಕ್ರವಾರ ಹಿನ್ನೆಲೆಯಲ್ಲಿ ಭಕ್ತರಿಗೆ ವಿತರಿಸಲು ಸಿದ್ಧಪಡಿಸಿರುವ ಲಾಡುಗಳು

ಹುಣಸೂರು, ಜು.10– ನಗರದ ಮುತ್ತುಮಾರಮ್ಮ ದೇವಸ್ಥಾನದಲ್ಲಿ ಆಷಾಢ ಮಾಸದ 3ನೇ ಶುಕ್ರವಾರದ ಅಂಗವಾಗಿ ಸಂಗೊಳ್ಳಿ ರಾಯಣ್ಣ ಕ್ಷೇಮಾಭಿವೃದ್ಧಿ ಸಂಘದಿಂದ 10 ಸಾವಿರ ಲಾಡುಗಳನ್ನು ಭಕ್ತರಿಗೆ ವಿತರಿಸಲಾಗುವುದು ಎಂದು ಸಂಘದ ಅಧ್ಯಕ್ಷ ಅಶೋಕ್ ರಾಜಲಿಂಗಯ್ಯ ತಿಳಿಸಿದರು. ಕಳೆದ 6 ವರ್ಷದಿಂದ ಆಷಾಢ ಮಾಸದ 3ನೇ ಶುಕ್ರವಾರ ಲಾಡು ಹಂಚಲು ಆರಂಭಿಸಿದ್ದು, ಈ ಬಾರಿ 10 ಸಾವಿರ ಲಾಡು ಹಂಚಲಾಗುತ್ತಿದೆ. ಭಕ್ತರು ಹೆಚ್ಚಿನ ಸಂಖ್ಯೆ ಯಲ್ಲಿ ದೇವಾಲಯಕ್ಕೆ ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ತಿಳಿಸಿದ್ದಾರೆ.

ನಾಳೆ ಡಾ.ಫ.ಗು.ಹಳಕಟ್ಟಿ ಜಯಂತ್ಯುತ್ಸವ

ಮೈಸೂರು, ಜು.10(ಜಿಎ)–ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕ, ವಿಜಯಪುರದ ವಚನ ಸಂಗ್ರಹ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ಜು.12ರಂದು ಬೆಳಗ್ಗೆ 10.30ಕ್ಕೆ ಶ್ರೀ ಹೊಸಮಠದಲ್ಲಿ ವಚನ ಸಂಗ್ರಹ ಪಿತಾಮಹ ಡಾ.ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರ ಜಯಂತ್ಯುತ್ಸವ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಆಯೋಜಿಸಲಾಗಿದೆ ಎಂದು ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಶರಣ ಮಹಾದೇವಪ್ಪ ತಿಳಿಸಿದರು.


ಡಾ.ಫ.ಗು.ಹಳಕಟ್ಟಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿದಾನಂದ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಪ್ರೊ.ಅರವಿಂದ ಮಾಲಗತ್ತಿ ಉದ್ಘಾಟಿಸಲಿದ್ದಾರೆ. ನಟರಾಜ ಸ್ವಾಮೀಜಿ ಕಿರುಪುಸ್ತಕ ಬಿಡುಗಡೆಗೊಳಿಸುವರು. ಶಿವಬಸವ ಸ್ವಾಮೀಜಿ ಸಮ್ಮುಖ ವಹಿಸುವರು. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಪ್ರೊ.ಎಸ್.ಶಿವರಾಜಪ್ಪ ಆಗಮಿಸಲಿದ್ದಾರೆ. ಆನಂದಕುಮಾರ್ ಕಂಬಳಿಹಾಳ್ ವಚನ ಗಾಯನ ನಡೆಸಿಕೊಡಲಿದ್ದಾರೆ ಎಂದರು.

ಶತಮಾನಗಳ ಕಾಲ ಕಾಲ ಗರ್ಭದಲ್ಲಿ ಹುದುಗಿ ಹೋಗಿದ್ದ ವಚನ ಸಾಹಿತ್ಯವನ್ನು ಸಂಶೋಧಿಸಿ, ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಿಸಿ ಲೋಕವೇ ಬೆರಗುಗೊಳ್ಳುವಂತೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಡಾ.ಫ.ಗು.ಹಳಕಟ್ಟಿ, ಹೀಗಾಗಿ ಇವರನ್ನು ಸ್ಮರಿಸುವ ಕಾರ್ಯಕ್ರಮ ಇದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಚಂದ್ರಶೇಖರಯ್ಯ, ಶಿವಮಲ್ಲಪ್ಪ, ಸಿದ್ದಲಿಂಗಸ್ವಾಮಿ, ಶಿವಲಿಂಗಪ್ಪ, ರೇಚಣ್ಣ ಉಪಸ್ಥಿತರಿದ್ದರು.

ಹಾಸನದಲ್ಲಿ ಹಠಾತ್ ಸಾವುಗಳ ಕುರಿತು ತನಿಖಾ ವರದಿ ಬಿಡುಗಡೆ

ಶೇ.75ಕ್ಕಿಂತ ಹೆಚ್ಚು ಮಂದಿ ಒಂದಕ್ಕಿಂತ ಹೆಚ್ಚು ಹೃದಯ ಸಂಬಂಧಿ ರೋಗದಿಂದ ಬಳಲುತ್ತಿದ್ದರು

ಆತಂಕ ಬೇಡ, ಹೃದಯ ಸಂಬಂಧಿ ಕಾಯಿಲೆಗಳ ಬಗ್ಗೆ ಜಾಗೃತಿ ಅಗತ್ಯ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಬೆಂಗಳೂರು, ಜು.10– ಹಾಸನ ಜಿಲ್ಲೆಯಲ್ಲಿ ಇತ್ತೀಚೆಗೆ ಯುವ ವಯಸ್ಕರಲ್ಲಿ ಹೆಚ್ಚುತ್ತಿರುವ ಹಠಾತ್ ಸಾವುಗಳನ್ನು ಕುರಿತು ಸಾರ್ವಜನಿಕ ಮತ್ತು ಮಾಧ್ಯಮ ವಲಯದಲ್ಲಿ ವ್ಯಾಪಕ ಆತಂಕ ವ್ಯಕ್ತವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಔಪಚಾರಿಕ ತನಿಖೆಗೆ ಆದೇಶಿಸಿತ್ತು ಇದೀಗ ಅದರ ಸಂಪೂರ್ಣ ವರದಿ ಬಂದಿದ್ದು ಆತಂಕ ಪಡುವ ಅಗತ್ಯವಿಲ್ಲ ಎಂದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಜಯದೇವ ಆಸ್ಪತ್ರೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಸಚಿವರು, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು, ಮೇ–ಜೂನ್ 2025ರ ಅವಧಿಯಲ್ಲಿ ಹಾಸನ ಜಿಲ್ಲೆಯಲ್ಲಿ ಸಂಭವಿಸಿದ 24 ಸಾವುಗಳನ್ನು ವಿಶ್ಲೇಷಿಸುವ ಮತ್ತು ಜಿಲ್ಲೆಯಲ್ಲಿ ಹೃದಯ ಸಂಬಂಧಿ ಪ್ರಕರಣಗಳು ಹಾಗೂ ಸಾವುಗಳ ಕುರಿತು ಅಧ್ಯಯನ ಕುರಿತ ವರದಿಯನ್ನು ಇಂದು ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಸಚಿವರು, ತನಿಖೆಗೆ ಒಳಪಡಿಸಿದ 24 ಸಾವುಗಳಲ್ಲಿ, 14 ಮಂದಿ 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ, 10 ಮಂದಿ 45 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ, ಒಟ್ಟು 24 ಸಾವುಗಳಲ್ಲಿ, 4 ಸಾವುಗಳು ಹೃದಯ ಸಂಬಂಧಿ ಸಮಸ್ಯೆಯಿಂದ ಸಂಭವಿಸಿಲ್ಲ. ಅವುಗಳಲ್ಲಿ ದೀರ್ಘಕಾಲದ ಮೂತ್ರಪಿಂಡ ಕಾಯಿಲೆ, ರಸ್ತೆ ಅಪಘಾತ, ತೀವ್ರ ಜಠರಗರುಳಿನ ಸೋಂಕು (ಸೋಂಕು) ಮತ್ತು ವಿದ್ಯುತ್ ಆಘಾತದಿಂದ ಒಂದು ಸಾವು ಸಂಭವಿಸಿದೆ ಎಂದರು.

ಉಳಿದ 20 ಸಾವುಗಳಲ್ಲಿ 10 ಸಾವುಗಳು ದೃಢಪಟ್ಟ ಹೃದಯ ಸಂಬಂಧಿ ಸಾವುಗಳಾಗಿವೆ. 3 ಮಂದಿಗೆ ಈಗಾಗಲೇ ಹೃದಯ ಕಾಯಿಲೆ ಇತ್ತು, ಒಬ್ಬರು ಬೈಪಾಸ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು, ಒಬ್ಬರು ಆಂಜಿಯೋಪ್ಲಾಸ್ಟಿ ನಂತರ ಒಬ್ಬರು ಡೈಲೇಟೆಡ್ ಕಾರ್ಡಿಯೊಮಯೋಪತಿ (ಹೃದಯ ವೈಫಲ್ಯ) ಹೊಂದಿದ್ದರು. 7 ಹೃದಯ ಸಂಬಂಧಿ ಸಾವುಗಳಲ್ಲಿ 4 ಮರಣೋತ್ತರ ಪರೀಕ್ಷೆಗಳಿಂದ ದೃಢಪಟ್ಟಿವೆ ಮತ್ತು 3 ಇಸಿಜಿ ಆಧಾರಿತವಾಗಿವೆ. ಇನ್ನುಳಿದ 10 ಸಾವುಗಳು 'ಸಂಭವನೀಯ ಹೃದಯ ಸಂಬಂಧಿ ಸಾವುಗಳು' ಎಂದು ಪರಿಗಣಿಸಲಾಗಿದೆ ಎಂದು ತಿಳಿಸಿದರು.


ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ರವೀಂದ್ರನಾಥ್ ಗುರುವಾರ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್‌ಗೆ ವರದಿ ಸಲ್ಲಿಸಿದರು.

ಮೃತರಾದವರಲ್ಲಿ ಶೇ.75ಕ್ಕಿಂತ ಹೆಚ್ಚು ಮಂದಿ ಒಂದಕ್ಕಿಂತ ಹೆಚ್ಚು ಹೃದಯ ಸಂಬಂಧಿ ಅಪಾಯಕಾರಿ ಅಂಶಗಳನ್ನು ಹೊಂದಿದ್ದರು. ಇವುಗಳಲ್ಲಿ ಮಧುಮೇಹ, ಸ್ಥೂಲಕಾಯತೆ, ಮದ್ಯಪಾನ, ಧೂಮಪಾನ, ಅಧಿಕ ರಕ್ತದೊತ್ತಡದಿಂದ ಸಾವನ್ನಪ್ಪಿದ್ದಾರೆ ಎಂದು ಸಚಿವರು ತಿಳಿಸಿದರು.

19, 21, 23, 32, 37, 38, ಮತ್ತು 43 ವರ್ಷ ವಯಸ್ಸಿನ ಯುವ ವ್ಯಕ್ತಿಗಳಲ್ಲಿ ಹಠಾತ್ ಸಾವುಗಳು ಸಂಭವಿಸಿರುವುದು ಕಳವಳಕಾರಿಯಾಗಿದೆ ಮತ್ತು ಇದನ್ನು ನಿರ್ಲಕ್ಷಿಸಲಾಗುವುದಿಲ್ಲ ಅದರಲ್ಲಿ 6 ಜನ ಆಟೋ ಮತ್ತು ಕ್ಯಾಬ್ ಚಾಲಕರಿದ್ದು ಸರಿಯಾದ ಸಮಯದಲ್ಲಿ ಊಟ ಮಾಡದೆ ಇರುವುದು, ಸರಿಯಾಗಿ ನಿದ್ರೆ ಮಾಡದೇ ಇರುವುದು, ಒತ್ತಡದಲ್ಲಿ ಕೆಲಸ ಮಾಡುವುದು ಹಠಾತ್ ಸಾವಿಗೆ ಕಾರಣವಾಗಿದೆ ಎಂಬ ಮಾಹಿತಿಯನ್ನು ಸಚಿವರು ನೀಡಿದರು. ಅನೇಕ ಸಂದರ್ಭಗಳಲ್ಲಿ ಮೃತಪಟ್ಟವರನ್ನು ಸಾವಿಗೂ ಮುನ್ನ ಯಾವುದೇ ಆರೋಗ್ಯ ಸೌಲಭ್ಯಕ್ಕೆ ಕರೆತರಲಾಗಿಲ್ಲ. ಆಸ್ಪತ್ರೆಗಳಲ್ಲಿ ಮೃತಪಟ್ಟವರು ಎಂದು ಘೋಷಿಸಿದವರಲ್ಲಿಯೂ ಸಹ, ಔಪಚಾರಿಕ ಮರಣೋತ್ತರ ಪರೀಕ್ಷೆಗಳನ್ನು ಹೆಚ್ಚಾಗಿ ನಡೆಸಲಾಗಿಲ್ಲ. ಮರಣೋತ್ತರ ದತ್ತಾಂಶದ ಕೊರತೆ, ಅಗತ್ಯ ಕ್ಲಿನಿಕಲ್ ತನಿಖೆಗಳ ಅಲಭ್ಯತೆ (ಇಸಿಜಿಗಳು, ಕಾರ್ಡಿಯಾಕ್ ಎಂಜೈಮ್‌ಗಳು), ಮತ್ತು ಕುಟುಂಬ ಸದಸ್ಯರಿಂದ ಸೀಮಿತ ಸಹಕಾರವು ಸಾವಿನ ನಿರ್ದಿಷ್ಟ ಕಾರಣವನ್ನು ತಿಳಿಯಲು ಕಷ್ಟಕರವಾಗಿದೆ ಎಂದರು.

ಶಾಲೆ, ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಜಿಮ್‌ಗಳಲ್ಲಿನ ದೈಹಿಕ ತರಬೇತುದಾರರಂತಹ ನಿರ್ದಿಷ್ಟ ಗುಂಪುಗಳಿಗೆ ಸಿಪಿಆರ್ ತರಬೇತಿ ನೀಡಲಾಗುವುದು. ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (CHC) ಹೃದಯ ಜ್ಯೋತಿ ಯೋಜನೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು.

ಸುಕಂದಮ್ಮ ನಿಧನ

ಮೂಗೂರು, ಜು.10– ಗ್ರಾಮದ ಬಂಡಿ ಬೀದಿ ನಿವಾಸಿ ಎಂ.ಎಸ್.ಬಸವಣ್ಣ ಅವರ ಪತ್ನಿ ಕೆ.ಪಿ.ಸುಕಂದಮ್ಮ(68) ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದ ಮೃತರ ತೋಟದ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವೆಂಕಟೇಶ ಅಯ್ಯಂಗಾರ್



ಮೈಸೂರು, ಜು.10–ನಗರದ ಶ್ರೀರಾಂಪುರ 2ನೇ ಹಂತದ ನಿವಾಸಿ ವೆಂಕಟೇಶ ಅಯ್ಯಂಗಾರ್ (80) ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು (ಜು.10) ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನ್ನಡ ನಾಡು-ನುಡಿಯ ಮಹತ್ವ ಅರಿಯಲು ದೇಜಗೌ ಸಾಹಿತ್ಯ ಅಧ್ಯಯನ ಅಗತ್ಯ

ದೇಜಗೌ ನೆನಪಿನಂಗಳ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್

ಮೈಸೂರು,ಜು.10(ಪಿಎಂ)- ಕನ್ನಡ ನಾಡು-ನುಡಿಯ ಮಹತ್ವ ಅರಿಯಲು ದೇಜಗೌ (ದೇ.ಜವರೇಗೌಡ) ಸಾಹಿತ್ಯ ಅಧ್ಯಯನ ಅಗತ್ಯ. ಭಾಷಾಂತರ ಕ್ಷೇತ್ರಕ್ಕೂ ದೇಜಗೌ ಅವರ ಕೊಡುಗೆ ಅಪಾರ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್ (ಸಿಪಿಕೆ) ಹೇಳಿದರು.

ಮೈಸೂರಿನ ವಿಜಯನಗರ 1ನೇ ಹಂತದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ವತಿಯಿಂದ ಕನ್ನಡದ ಕಟ್ಟಾಳು, ಪದ್ಮಶ್ರೀ ಡಾ.ದೇ.ಜವರೇಗೌಡ ಅವರ 110ನೇ ಜಯಂತಿ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ದೇಜಗೌ ನೆನಪಿನಂಗಳ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತವನ್ನು ಅರಿಯಲು ಸ್ವಾಮಿ ವಿವೇಕಾನಂದರನ್ನು ಅಧ್ಯಯನ ಮಾಡುವಂತೆ ರವೀಂದ್ರನಾಥ್ ಟ್ಯಾಗೋರ್ ಹೇಳಿದ್ದು, ಅಂತೆಯೇ ಕನ್ನಡ ನಾಡು-ನುಡಿ ಅರಿಯಲು ದೇಜಗೌ ಅವರನ್ನು ಓದಬೇಕು ಎಂದರು.

ಇದು ಕುವೆಂಪು ಯುಗ ಎನ್ನುವುದು ನಿರ್ವಿವಾದ. ಆದರೆ ನಾನು ಇದನ್ನು ಕುವೆಂಪು-ದೇಜಗೌ ಯುಗ ಎಂಬುದಾಗಿ ಗುರುತಿಸುತ್ತೇನೆ. ಈ ಇಬ್ಬರು ನಾಡಿನ ಸಾಂಸ್ಕೃತಿಕ ನಾಯಕರು. 'ದೇಜಗೌ ನನ್ನ ಲೌಕಿಕ ಮಾರ್ಗದರ್ಶಕರು' ಎಂದು ಕುವೆಂಪು ಕೃತಜ್ಞತೆಯಿಂದ ಹೇಳಿದ್ದಾರೆ.



ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ದೇಜಗೌ ನೆನಪಿನಂಗಳ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಕುವೆಂಪು ಅವರು ಪ್ರಧಾನವಾಗಿ ಕವಿ. ಎಲ್ಲಾ ಪ್ರಕಾರಗಳಲ್ಲಿ ಅವರು ಸಾಹಿತ್ಯ ಕೃಷಿ ಮಾಡಿದ್ದಾರೆ. ಕವಿತೆ ಅವರ ಸಾಹಿತ್ಯದಲ್ಲಿ ಹಾಸುಹೊಕ್ಕಿರುವುದು ಕಂಡುಬರುತ್ತದೆ. ಆದರೆ ದೇಜಗೌ ಅವರನ್ನು ಮುಖ್ಯವಾಗಿ ಗದ್ಯಕವಿ ಎಂದು ಗುರುತಿಸಬಹುದು. ಅವರೊಬ್ಬ ಗದ್ಯ ಸಾಮ್ರಾಟ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಕನ್ನಡಕ್ಕಾಗಿ ಕೈ ಎತ್ತಿ ದೇಜಗೌ ಅವರು ಕಲ್ಪವೃಕ್ಷವಾಗಿದ್ದಾರೆ. ದೇಜಗೌ ಸಾಹಿತ್ಯದಲ್ಲಿ ಅನೇಕ ನಿರ್ಮಿತಿಗಳನ್ನು ಮಾಡಿದವರು. ಅವರೊಬ್ಬ ದೈತ್ಯ ಲೇಖಕ ಎಂದರೂ ಅತಿಶಯೋಕ್ತಿಯಲ್ಲ. ಜಿ.ಪಿ.ರಾಜರತ್ನಂ ಅವರು ಕುವೆಂಪು ಅವರನ್ನು ಕುರಿತು ಕನ್ನಡ ದೈತ್ಯ ಎಂದು ಕರೆದಿದ್ದಾರೆ. ಅಂತೆಯೇ ದೇಜಗೌ ಸಹ ಕಡಿಮೆ ಇಲ್ಲ. ಅವರೂ ಇನ್ನೊಬ್ಬ ದೈತ್ಯರೇ ಎಂದರು.

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಮಾತನಾಡಿ, ದೇಜಗೌ ಕನ್ನಡದ ಬಗ್ಗೆ ಅಪಾರ ಒಲವು ಹೊಂದಿದ್ದರು. ಕನ್ನಡವನ್ನು ಅವರು ತಮ್ಮ ಜೀವನದ ಉಸಿರಾಗಿ ಸ್ವೀಕರಿಸಿದ್ದರು. ಅವರ ವ್ಯಕ್ತಿತ್ವ ಹಾಗೂ ಸಾಧನೆ ಕುರಿತು ಮೈಸೂರು ದರ್ಶನ ಹಾಗೂ ವಿಶ್ವ ಕೋಶಕ್ಕೂ ನಾನೇ ಬರೆದಿದ್ದೇನೆ. ಅವರ 'ಗುಡಿಸಲಿನಿಂದ ಗಂಗೋತ್ರಿಗೆ ಬಂದೆ' ಆತ್ಮಚರಿತ್ರೆ ಓದಿದರೆ ಅವರ ಪರಿಶ್ರಮ ಅರಿವಾಗುತ್ತದೆ. ಒಬ್ಬ ವ್ಯಕ್ತಿಗೆ ಛಲವಿದ್ದರೆ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಬಹುದು ಎಂಬುದಕ್ಕೆ ದೇಜಗೌ ಸಾಕ್ಷಿಯಾಗಿದ್ದಾರೆ ಎಂದು ಸ್ಮರಿಸಿದರು.

ಸುಯೋಗ್ ಆಸ್ಪತ್ರೆಯ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ದೇಜಗೌ ಅವರು ಕನ್ನಡ ಬೆಳವಣಿಗೆ ಕಾಣಬೇಕು ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಕನ್ನಡ ಬರಬೇಕೆಂಬ ಹಂಬಲ ಹೊಂದಿದ್ದರು. ಈ ನಿಟ್ಟಿನಲ್ಲಿ ನನ್ನ ಬರವಣಿಗೆಗೂ ಉತ್ತೇಜನ ನೀಡಿದ್ದರು. ಕುವೆಂಪು ಸಾಹಿತ್ಯದ ಪರಿಚಾರಕರು ದೇಜಗೌ. ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ದೇಜಗೌ ಮಹತ್ವದ ಪಾತ್ರ ವಹಿಸಿದವರು ಎಂದು ಹೇಳಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ನಾಲ್ಕು ದಶಕಗಳ ಕಾಲ ದೇಜಗೌ ಅವರನ್ನು ಹತ್ತಿರದಿಂದ ನೋಡಿದ್ದೇನೆ. ಅವರೊಬ್ಬ ಧೀಮಂತ ಕನ್ನಡದ ಕಟ್ಟಾಳು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸ್ಥಾಪನೆಗೂ ಅವರು ಸರ್ಕಾರದ ಮೇಲೆ ಒತ್ತಡ ಹಾಕಿದ್ದರು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆಯಬೇಕೆಂದು ಹೋರಾಟ ಮಾಡಿದ್ದರು ಎಂದರು.

ಇದಕ್ಕೂ ಮುನ್ನ ದೇಜಗೌ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಹಿರಿಯ ವಿದ್ವಾಂಸ ಡಾ.ಸಿ.ನಾಗಣ್ಣ, ಕವಯಿತ್ರಿ ಡಾ.ಲತಾ ರಾಜಶೇಖರ್, ರಂಗಕರ್ಮಿ ರಾಜಶೇಖರ ಕದಂಬ, ಸಾಹಿತಿಗಳಾದ ಡಾ. ಜಯಪ್ಪ ಹೊನ್ನಾಳಿ, ಸತೀಶ್ ಜವರೇಗೌಡ, ಪತ್ರಕರ್ತರಾದ ಪ್ರಕಾಶ್‌ಬಾಬು, ರಂಗನಾಥ್ ಮೈಸೂರು, ಕನ್ನಡಪರ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ, ಬಿ.ಎಂ.ಶಿವಶಂಕರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಡಾ.ವೈ.ಡಿ.ರಾಜಣ್ಣ, ಗೌರವ ಕಾರ್ಯದರ್ಶಿ ಮ.ನ.ಲತಾ ಮೋಹನ್, ಖಜಾಂಚಿ ಜಿ.ಪ್ರಕಾಶ್, ಸಂಘಟನಾ ಕಾರ್ಯದರ್ಶಿ ಮೈ.ನಾ.ಲೋಕೇಶ್ ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇಸಿಂಗು ರಾಜಾ2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಐರಾವತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ರೀಡಂ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಐರಾವತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾಮನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಧಮ್ಮಚಕ್ಕ ಪವತ್ತನ ದಿನ ಆಚರಣೆ



ವಿವಿಧ ಸಂಘಟನೆಗಳಿಂದ ಧಮ್ಮಚಕ್ಕ ಪವತ್ತನ ದಿನ ಆಚರಿಸಲಾಯಿತು.

ಮೈಸೂರು, ಜು.10(ಎಂಕೆ)- ಮೈಸೂರಿನ ರಿಂಗ್ ರಸ್ತೆ ಸಮೀಪದಲ್ಲಿರುವ ಮಾನಸಿ ನಗರದಲ್ಲಿನ ಬೋಧಿಸತ್ವ ಧ್ಯಾನಮಂದಿರದಲ್ಲಿ ಬೆಸ್ಟ್-ಬೋಧಿಸತ್ವ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಟ್ರಸ್ಟ್ ವತಿಯಿಂದ ಭಾರತೀಯ ಬೌದ್ಧ ಮಹಾಸಭಾ ಮೈಸೂರು ಶಾಖೆ, ವಿಶ್ವಮೈತ್ರಿ ಬುದ್ಧ ವಿಹಾರ, ಕರ್ನಾಟಕ ಬುದ್ಧಧಮ್ಮ ಸಮಿತಿ, ನೆಲೆ-ಹಿನ್ನೆಲೆ, ಡಾ.ಬಿ.ಆರ್.ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘ ಸಿದ್ದಾರ್ಥನಗರ, ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಸಮಾಜ ಶಕ್ತಿನಗರ, ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಬಳಗ ಶಕ್ತಿನಗರ, ಜೈ ಭೀಮ್ ಬಂಧು ಬಳಗ ಹಾಗೂ ದಲಿತ ಸಂಘರ್ಷ ಸಮಿತಿ ಸಹಯೋಗದೊಂದಿಗೆ 'ಧಮ್ಮಚಕ್ಕ ಪವತ್ತನ ದಿನ ಆಚರಣೆ' ಕಾರ್ಯಕ್ರಮ ನಡೆಯಿತು.

ಸಿದ್ದಾರ್ಥನಗರದ ಭಗವಾನ್ ಬುದ್ಧ ಸರ್ಕಲ್‌ನಲ್ಲಿ ಅಲಂಕೃತ ಬೆಳ್ಳಿರಥದಲ್ಲಿನ ಭಗವಾನ್ ಬುದ್ಧರ ಪ್ರತಿಮೆಗೆ ಪೂಜೆ, ಪುಷ್ಪಾರ್ಚನೆ ಹಾಗೂ ಬುದ್ಧ ವಂದನೆ ಸಲ್ಲಿಸಿ ಧಮ್ಮ ನಡಿಗೆ ಪ್ರಾರಂಭಿಸಲಾಯಿತು. ಜಿಎಸ್‌ಟಿ ಭವನ ಮಾರ್ಗವಾಗಿ ಸಾಗಿದ ಧಮ್ಮ ನಡಿಗೆ, ಸಂಗೀತ ಕಾರ್ನರ್, ಡಾ.ರಾಜ್‌ಕುಮಾರ್ ರಸ್ತೆ ಮೂಲಕ ಶಕ್ತಿನಗರ ಪಾರ್ಕ್ ಬಳಿ ಬುದ್ಧ ವಂದನೆ ಸಲ್ಲಿಸಲಾಯಿತು. ಅಲ್ಲಿಂದ ವಿಟಿಯು ಕಾಲೇಜು ಸಮೀಪದ ರಸ್ತೆ ಮೂಲಕ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಬಳಗದ ಕಚೇರಿಯಲ್ಲಿ ಪೂಜೆ ನೆರವೇರಿಸಿ, ನಂತರ ಮಾನಸಿನಗರದಲ್ಲಿನ ಬೋಧಿಸತ್ವ ಧ್ಯಾನಮಂದಿರದಲ್ಲಿ ಧಮ್ಮ ನಡಿಗೆ ಸಂಪನ್ನಗೊಂಡಿತು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು. ಇದೇ ವೇಳೆ ಕೊಳ್ಳೇಗಾಲ ಜೇತವನ ಬೌದ್ಧ ವಿಹಾರದ ಮನೋರಖ್ಖಿತ ಬಂತೇಜಿ, ಪಂಚಶೀಲ ತತ್ವ ಬೋಧಿಸಿದರು. ಗಾಂಧಿನಗರ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಚಾಮರಾಜನಗರದ ನಳಂದ ವಿಶ್ವವಿದ್ಯಾಲಯದ ಬೋಧಿದತ್ತ ಬಂತೇಜಿ, ಮಹಾಬೋಧಿ ಸೊಸೈಟಿ ಮೈಸೂರಿನ ಶೋಭನಾ ಬಂತೇಜಿ, ಬೆಸ್ಟ್-ಬೋಧಿಸತ್ವ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಟ್ರಸ್ಟ್ ಸಂಸ್ಥಾಪಕ ಜಗನ್ನಾಥ್, ಮಾಜಿ ಮೇಯರ್ ಪುರುಷೋತ್ತಮ್, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಬುದ್ಧ ಅನುಯಾಯಿಗಳಾದ ಪ್ರದೀಪ್ ಕುಮಾರ್, ಲೋಕೇಶ್ವರ್, ಚಂಪಕ, ತುಳಸಿ, ತೋಯಜಾಕ್ಷಿ, ಪಶುಪತಿ, ಪುಟ್ಟಸ್ವಾಮಿ, ಮಹದೇವ್, ರಜಿನಿ ದೇವಮ್ಮ, ದಿಲೀಪ್, ದಿವ್ಯ, ಲೋಕೇಶ್ ಮತ್ತಿತರರಿದ್ದರು.

ಶಾಲಾ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರ ಮುಂದುವರಿಸಲು ಸರ್ಕಾರಕ್ಕೆ ಮಾಜಿ ಎಂಎಲ್ಸಿ ಮರಿತಿಬ್ಬೇಗೌಡರ ಆಗ್ರಹ

ಮೈಸೂರು, ಜು.10- ಶಾಲಾ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರ ಮುಂದುವರೆಸುವಂತೆ ವಿಧಾನಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡರು, ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಮರಿತಿಬ್ಬೇಗೌಡ

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದಿರುವ ಅವರು, ತ್ರಿಭಾಷಾ ಸೂತ್ರದಿಂದ ಮಾತೃಭಾಷೆ ಕನ್ನಡ ಮಾಧ್ಯಮ ಬೆಳವಣಿಗೆಗೆ ಯಾವುದೇ ರೀತಿಯಲ್ಲೂ ಅಡ್ಡಿಯಾಗುವುದಿಲ್ಲ. ಆದ್ದರಿಂದ ಈ ನೀತಿಯನ್ನು ಮುಂದುವರೆಸಬೇಕು ಎಂದು ಮನವಿ ಮಾಡಿದ್ದಾರೆ.

ದೇಶದ ಹಲವು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ರಾಷ್ಟ್ರೀಯ ಏಕತೆಯ ಹಿತದೃಷ್ಟಿ ಹಾಗೂ ಬಹು ಭಾಷೆಗಳ ಕಲಿಕೆ ಉತ್ತೇಜಿಸುವ ಉದ್ದೇಶದಿಂದ ತ್ರಿಭಾಷಾ ಸೂತ್ರವನ್ನು ಜಾರಿಗೆ ತರಲು 1961ರಲ್ಲಿ ಒಮ್ಮತದಿಂದ ನಿರ್ಧರಿಸಲಾಯಿತು. ನಂತರದಲ್ಲಿ ರಾಜ್ಯದಲ್ಲಿ ಜಾರಿಯಲ್ಲಿರುವ ತ್ರಿಭಾಷಾ ಸೂತ್ರ ನೀತಿಯನ್ನು ಭಾಷಾ ತಜ್ಞರ ಸಮಿತಿ ಅಭಿಪ್ರಾಯ ಪಡೆಯದೇ ನಿರ್ಬಂಧಿಸುವುದರಿಂದ ರಾಜ್ಯದಲ್ಲಿ ನೆಲಸಿರುವ ಅನ್ಯ ಭಾಷಿಗರು ಮಾತ್ರವಲ್ಲದೆ ಕನ್ನಡಿಗರೂ ಭಾಷೆಗಳನ್ನು ಕಲಿಯುವ ಅವಕಾಶದಿಂದ ವಂಚಿತರಾಗುತ್ತಾರೆ ಎಂದು ತಿಳಿಸಿದ್ದಾರೆ.

ನಮ್ಮ ದೇಶದಲ್ಲಿ ಬಹು ಭಾಷಾ ಪಂಡಿತರ ಸಂಖ್ಯೆ ಹೆಚ್ಚಾಗಿದೆ. ದೇಶಕ್ಕೆ ಅವರ ಕೊಡುಗೆಯೂ ಅಪಾರವಾಗಿದೆ. ನಮ್ಮ ದೇಶದ ಪ್ರಧಾನಮಂತ್ರಿಯಾಗಿದ್ದ ಪಿ.ವಿ.ನರಸಿಂಹರಾವ್ ಅವರು ಸುಮಾರು 17 ಭಾಷೆಗಳನ್ನು ಮಾತನಾಡುವ ಬಹು ಭಾಷಾ ಪಂಡಿತರಾಗಿದ್ದರು. ಹೀಗೆ ಹೆಚ್ಚು ಪ್ರಾದೇಶಿಕ ಭಾಷೆಗಳ ಕಲಿಕೆ ಮತ್ತು ಬಳಕೆಯನ್ನು ಉತ್ತೇಜಿಸುವುದರಿಂದ ಭವಿಷ್ಯದ ಪೀಳಿಗೆಗೆ ಭಾಷೆಗಳ ಸಂರಕ್ಷಿಸಬಹುದು. ತ್ರಿಭಾಷಾ ಸೂತ್ರವು ರಾಜ್ಯಗಳ ನಡುವಿನ ಭಾಷಾ ಸಂಬಂಧಿತ ಸಮಸ್ಯೆಗಳ ನಿವಾರಣೆಗೂ ಸಹಾಯಕವಾಗುತ್ತದೆ ಎಂದು ಅಭಿಪ್ರಾಯಿಸಿದ್ದಾರೆ.

ಶಿಕ್ಷಣದ ಎಲ್ಲಾ ಅಂಶಗಳನ್ನು ಮಗುವು ಭಾಷೆಯ ಮೂಲಕವೇ ಅರ್ಥಮಾಡಿಕೊಳ್ಳುತ್ತದೆ. ಗಣಿತ, ವಿಜ್ಞಾನ ಅಥವಾ ಇನ್ನಾವುದೇ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಭಾಷೆ ಅತ್ಯಗತ್ಯ. ಇನ್ನು ತ್ರಿಭಾಷಾ ಸೂತ್ರವು ವಿದ್ಯಾರ್ಥಿಗಳಿಗೆ ವಿವಿಧ ಭಾಷೆಗಳಲ್ಲಿ ಪರಿಣಾಮಕಾರಿಯಾಗಿ ಸಂವಹನ ನಡೆಸಲು ಅನುವು ಮಾಡಿಕೊಡುತ್ತದೆ. ವಿದ್ಯಾರ್ಥಿಗಳ ಭವಿಷ್ಯ ಹಾಗೂ ಸಾಮಾಜಿಕ ಜೀವನಕ್ಕೆ ಉತ್ತಮ ಅಡಿಪಾಯ ನಿರ್ಮಿಸುತ್ತದೆ. ಭ್ರಾತೃತ್ವ ಹಾಗೂ ಭಾಷಾ ವೈವಿಧ್ಯತೆಯನ್ನು ಗೌರವಿಸುತ್ತದೆ ಮತ್ತು ಸಂರಕ್ಷಿಸುತ್ತದೆ.

ವಿವಿಧ ಭಾಷೆಗಳನ್ನು ಕಲಿಯುವುದರಿಂದ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಸುಧಾರಿಸುತ್ತದೆ. ಅವರಿಗೆ ಉನ್ನತ ಶಿಕ್ಷಣ ಮತ್ತು ಹೆಚ್ಚು ಉದ್ಯೋಗಾವಕಾಶಗಳು ದೊರಕುತ್ತವೆ. ವಿವಿಧ ಸಂಸ್ಕೃತಿಗಳ ಪರಿಚಯದ ಜೊತೆಗೆ ಸಾಂಸ್ಕೃತಿಕ ವಿನಿಮಯಕ್ಕೆ ಉತ್ತೇಜನ ಸಿಗುತ್ತದೆ. ಬಹು ಭಾಷಾ ಸಮಾಜದ ಮೂಲಕ ಅರಿವಿನ ವೃದ್ಧಿ ಸಾಧ್ಯವಿದೆ. ಆದ್ದರಿಂದ ತ್ರಿಭಾಷಾ ಸೂತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದ್ದಾರೆ.

'ಭಗೀರಥ' ಯಶಸ್ವಿ: ಜೆಪಿ ಅಭಿಮಾನಿಗಳ ಸಂಭ್ರಮ



ಮೈಸೂರು, ಜು.10- ಕನ್ನಡದ ಹೊಸ ಸಿನಿಮಾಗಳನ್ನು ಚಿತ್ರಮಂದಿರಗಳಲ್ಲೇ ವೀಕ್ಷಿಸುವ ಮೂಲಕ ಚಿತ್ರರಂಗವನ್ನು ಉಳಿಸಿ, ಬೆಳೆಸಬೇಕೆಂದು 'ಭಗೀರಥ' ಚಿತ್ರದ ನಾಯಕ ನಟ ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್(ಜೆಪಿ) ಮನವಿ ಮಾಡಿದರು.

ಆಷಾಢ ಮಾಸದ ಪ್ರಯುಕ್ತ ಜೆ.ಪಿ. ಅಭಿಮಾನಿಗಳ ಬಳಗದ ವತಿಯಿಂದ, 'ಭಗೀರಥ' ಚಿತ್ರ 150 ದಿನಗಳ ಪ್ರದರ್ಶನ ಕಂಡ ಪ್ರಭಾ ಚಿತ್ರಮಂದಿರದ ಬಳಿ ಏರ್ಪಡಿಸಿದ್ದ ಶ್ರೀ ಚಾಮುಂಡೇಶ್ವರಿ ಪೂಜೆ ಹಾಗೂ ಪ್ರಸಾದ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಭಗೀರಥ' ಸಿನಿಮಾ ಗೆಲುವಿಗೆ ಕಾರಣರಾದ ಅಭಿಮಾನಿಗಳಿಗೆ ಧನ್ಯವಾದಗಳು. ನಟರು ಹೊಸಬರು, ಹಳಬರು ಎಂದೆಣಿಸದೆ ಬಿಡುಗಡೆಯಾಗುವ ಎಲ್ಲಾ ಕನ್ನಡ ಚಿತ್ರಗಳನ್ನು ಚಿತ್ರಮಂದಿರಗಳಲ್ಲೇ ವೀಕ್ಷಿಸುವ ಮೂಲಕ ಚಿತ್ರರಂಗವನ್ನು ಉಳಿಸಿದರೆ ಸಾವಿರಾರು ಕುಟುಂಬಗಳ ಜೀವನಕ್ಕೆ ನೆರವಾಗುತ್ತದೆ ಎಂದು ಹೇಳಿದರು.

ನಿರ್ಮಾಪಕ ಶ್ರೀನಿವಾಸ್ ಮಾತನಾಡಿ, 'ಭಗೀರಥ' ಚಿತ್ರದಲ್ಲಿ ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ ಅವರು ಅಮೋಘವಾಗಿ ನಟಿಸಿದ್ದಾರೆ. ಇವರ ಮುಂದಿನ ಎಲ್ಲಾ ಚಿತ್ರಗಳೂ ಗೆಲ್ಲುವ ಮೂಲಕ ಚಿತ್ರರಂಗಕ್ಕೆ ಕೊಡುಗೆ ನೀಡಲಿ ಎಂದು ಆಶಿಸಿದರು.

ಪ್ರಭಾ ಚಿತ್ರಮಂದಿರದ ಅಶೋಕ್ ಮಾತನಾಡಿ, ಕೊರೊನಾ ನಂತರ ಎಲ್ಲಾ ಕ್ಷೇತ್ರಗಳಿಗೂ ಸಾಕಷ್ಟು ಪೆಟ್ಟು ಬಿದ್ದಿದೆ. ಕೊರೊನಾ ನಂತರದ ದಿನಗಳಲ್ಲಿ ಶತದಿನಗಳನ್ನು ಪೂರೈಸಿರುವ ಕೆಲವು ಚಿತ್ರಗಳಲ್ಲಿ 'ಭಗೀರಥ' ಚಿತ್ರವೂ ಒಂದಾಗಿದೆ ಎಂದು ತಿಳಿಸಿದರು.

ನಿರ್ಮಾಪಕ ಚೇತನ್ ಎಸ್.ರಮೇಶ್ ಮಾತನಾಡಿ, 'ಭಗೀರಥ' ಚಿತ್ರವನ್ನು ವೀಕ್ಷಿಸಿ, ಗೆಲ್ಲಿಸಿದ ಅಭಿಮಾನಿ ದೇವರುಗಳಿಗೆ ಕೃತಜ್ಞತೆಗಳು. ಇದೇ ರೀತಿ ಎಲ್ಲಾ ಕನ್ನಡ ಸಿನಿಮಾಗಳನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ಈ ವೇಳೆ ನಿರ್ಮಾಪಕರಾದ ಕೆ.ರಮೇಶ್‌ಗೌಡರು, ಭೈರಪ್ಪಗೌಡರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಮದ್ಯ ವ್ಯರ್ಜನ ಉಚಿತ ಶಿಬಿರ

ಮೈಸೂರು, ಜು. 10- ಸುತ್ತೂರು ಶ್ರೀ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ, ಸಂಗಮ ಪ್ರತಿಷ್ಠಾನ, ಹಾಲಹಳ್ಳಿ ಹಾಗೂ ಗುಂಡ್ಲುಪೇಟೆ ತಾಲೂಕಿನ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 21ನೇ ಉಚಿತ ಮದ್ಯ ವ್ಯರ್ಜನ ಶಿಬಿರವನ್ನು ಜುಲೈ 14 ರಿಂದ 23ರವರೆಗೆ ಗುಂಡ್ಲುಪೇಟೆಯ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಆಯೋಜಿಸಲಾಗಿದೆ.

ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಹೆಸರನ್ನು ನೋಂದಾಯಿಸಿಕೊಳ್ಳುವುದು. ಈ ಸಾಮಾಜಿಕ ಸಮಸ್ಯೆಯ ಪರಿಹಾರದಲ್ಲಿ ಆಸಕ್ತಿಯುಳ್ಳವರು ಸಹ ಮದ್ಯವ್ಯಸನಿಗಳನ್ನು ಕರೆದುಕೊಂಡು ಬಂದು ಶಿಬಿರಕ್ಕೆ ಸೇರಿಸಬಹುದಾಗಿದೆ. ಶಿಬಿರಾರ್ಥಿಗಳು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ಭಾವಚಿತ್ರ ಅಗತ್ಯ ಬಟ್ಟೆ ಹಾಗೂ ಹೊದಿಕೆಗಳನ್ನು ತೆಗೆದುಕೊಂಡು ಬರಬೇಕು.

ಹೆಸರು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಚಿಕ್ಕತುಪ್ಪೂರು ಶ್ರೀಗಳು, ಚುಂಚನಹಳ್ಳಿ ಶ್ರೀಗಳು, ಡಾ. ಎಂ.ಪಿ. ಸೋಮಶೇಖರ್, ಎಸ್. ಬಸವರಾಜು, ಮಂಜುನಾಥ್, ಪಿ. ಮಲ್ಲು, ಮಣಿ ಮತ್ತು ಕೆ. ಮಹದೇವಪ್ಪ ಅವರನ್ನು 9945981872, 9945494612, 9448653897, 9886476142, 9886838810, 9611920299 9972726351 ಮತ್ತು 9902142388 ದೂರವಾಣಿಗಳಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಪರಿಶುದ್ಧತೆ ಖಾತರಿ ಮಾಹಿತಿಯ ಕ್ಯೂಆರ್ ಕೋಡ್‌ವುಳ್ಳ ನಂದಿನಿ ತುಪ್ಪದ ಪ್ಯಾಕೆಟ್ ಬಿಡುಗಡೆ

ದಿನೇ ದಿನೆ ಬೇಡಿಕೆ ಹೆಚ್ಚಿಸಿಕೊಳ್ಳುತ್ತಿರುವ ನಂದಿನಿ ಶುದ್ಧ ತುಪ್ಪ



ಮೈಮುಲ್‌ನ ಕ್ಯೂಆರ್ ಕೋಡ್ ಒಳಗೊಂಡ ನೂತನ ಪ್ಯಾಕೆಟ್‌ನ ನಂದಿನಿ ತುಪ್ಪವನ್ನು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಗುರುವಾರ ಬಿಡುಗಡೆ ಮಾಡಿದರು. ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ಸುರೇಶ್ ನಾಯ್ಕ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಜು.10- ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ(ಮೈಮುಲ್)ದ ಕ್ಯೂಆರ್ ಕೋಡ್ ಒಳಗೊಂಡ ನೂತನ ನಂದಿನಿ ತುಪ್ಪದ ಪ್ಯಾಕೆಟ್‌ಗಳನ್ನು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ(ಕೆಎಂಎಫ್)ದ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಗುರುವಾರ ಬಿಡುಗಡೆ ಮಾಡಿದರು.

ಆಲನಹಳ್ಳಿಯ ಮೈಮುಲ್ ಕಚೇರಿ ಆವರಣದಲ್ಲಿ ನಡೆದ ಸಮಾರಂಭದಲ್ಲಿ ನೂತನ ಉತ್ಪನ್ನವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ನಂದಿನಿ ತುಪ್ಪದ ನೂತನ ಮಾದರಿಯನ್ನು ಇಂದು ಲೋಕಾರ್ಪಣೆಗೊಳಿಸಿದ್ದು, ಪರಿಶುದ್ಧತೆ ಹಾಗೂ ದರದಲ್ಲಿ ಯಾವುದೇ ಬದಲಾವಣೆ ಇಲ್ಲ. ಪ್ಯಾಕೆಟ್ ಮಾತ್ರ ಬದಲಾವಣೆಯಾಗಿದ್ದು, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ತುಪ್ಪದ ಉತ್ಪಾದನೆ ಸಂಬಂಧಿತ ಸಂಪೂರ್ಣ ಮಾಹಿತಿ ಪಡೆಯಬಹುದು. ಏನಾದರೂ ದೂರುಗಳಿದ್ದರೂ ದಾಖಲಿಸಬಹುದು ಎಂದು ತಿಳಿಸಿದರು.

ವಿದೇಶಗಳಿಂದ ಬೇಡಿಕೆ: ರಾಜ್ಯದಿಂದ 2 ಸಾವಿರ ಮೆಟ್ರಿಕ್ ಟನ್ ತುಪ್ಪವನ್ನು ತಿರುಪತಿಯ ಟಿಟಿಡಿಗೆ ಪೂರೈಸಲಾಗಿದೆ. ಇನ್ನೂ 1500 ಮೆಟ್ರಿಕ್ ಟನ್‌ಗೆ ಬೇಡಿಕೆಯಿದ್ದು, ಪೂರೈಕೆಗೆ ಕ್ರಮ ವಹಿಸಲಾಗಿದೆ. ಕೇರಳ, ತಮಿಳುನಾಡಿನಲ್ಲೂ ನಂದಿನಿ ತುಪ್ಪ ಮಾರಾಟ ಮಾಡುತ್ತಿದ್ದೇವೆ. ಹೊರದೇಶಗಳಿಂದಲೂ ಬೇಡಿಕೆ ಬರುತ್ತಿದೆ. ದುಬೈ, ಸೌದಿ ಅರೇಬಿಯಾಗಳಲ್ಲಿ ಈಗಾಗಲೇ ನಂದಿನಿ ತುಪ್ಪ ಮಾರಾಟ ಮಾಡುತ್ತಿದ್ದು, ಕೆಲವೇ ದಿನಗಳಲ್ಲಿ ಆಸ್ಟ್ರೇಲಿಯಾ, ಕೆನಡಾ ದೇಶಗಳಿಗೂ ಪೂರೈಕೆ ಮಾಡಲಾಗುವುದು. ಅಲ್ಲಿ ಆಗಸ್ಟ್‌ನಲ್ಲಿ ನಡೆಯುವ ಫೆಸ್ಟಿವಲ್‌ಗೆ 3 ಸಾವಿರ ಟನ್ ಬೇಡಿಕೆ ಬಂದಿದೆ ಎಂದು ತಿಳಿಸಿದರು.

ಪ್ರಸಾದಕ್ಕೆ ಬಳಕೆ: ಈಗಾಗಲೇ ಚಾಮುಂಡಿಬೆಟ್ಟ ಹಾಗೂ ಮಹದೇಶ್ವರ ಬೆಟ್ಟಕ್ಕೆ ಬೇಡಿಕೆಗೆ ಅನುಗುಣವಾಗಿ ನಂದಿನಿ ತುಪ್ಪ ಪೂರೈಸಲಾಗುತ್ತಿದೆ. ಅಲ್ಲದೆ ಮುಜರಾಯಿ ಇಲಾಖೆಗೆ ಒಳಪಡುವ ಎ ಮತ್ತು ಬಿ ಗ್ರೇಡ್ ದೇವಾಲಯಗಳಲ್ಲಿನ ದಾಸೋಹ ಹಾಗೂ ಪ್ರಸಾದ ತಯಾರಿಕೆಗೆ ನಂದಿನಿ ತುಪ್ಪವನ್ನೇ ಬಳಸಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ದೇವಾಲಯಗಳಿಂದ ಬೇಡಿಕೆ ಸಲ್ಲಿಕೆಯಾದ ಕೂಡಲೇ ಪೂರೈಕೆ ಮಾಡಲಾಗುವುದು ಎಂದರು.

ರಾಜ್ಯದಲ್ಲಿ 1.50 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಇದರಲ್ಲಿ 50 ಲಕ್ಷ ಲೀಟರ್ ನೇರ ಮಾರಾಟವಾಗುತ್ತಿದೆ. ಉಳಿದಿದ್ದರಲ್ಲಿ ವಿವಿಧ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಎಲ್ಲೆಡೆ ಸಮೃದ್ಧಿ ಹಾಲಿಗೆ ಹೆಚ್ಚಿನ ಬೇಡಿಕೆಯಿದೆ. ಇನ್ನೂ ಮಾಲ್ ಸೇರಿ ಇನ್ನಿತರ ಖಾಸಗಿ ಮಾರಾಟ ಕೇಂದ್ರದವರು ತುಪ್ಪ ಸೇರಿದಂತೆ ವಿವಿಧ ಉತ್ಪನ್ನಗಳನ್ನು ಒಕ್ಕೂಟದಿಂದ ನೇರವಾಗಿ ಖರೀದಿಸಿ, ಹೆಚ್ಚು ಮಾರಾಟ ಮಾಡುವುದರಿಂದ ಒಕ್ಕೂಟಕ್ಕೆ ಲಾಭ ಬರುತ್ತಿದೆ ಎಂದು ತಿಳಿಸಿದರು.

ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ಸುರೇಶ್ ನಾಯ್ಕ್, ವಿವಿಧ ಜಿಲ್ಲೆಗಳ ಹಾಲು ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮೈಮುಲ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮೂರನೇ ಆಷಾಢ ಶುಕ್ರವಾರ

ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆಗೆ ಸಕಲ ಸಿದ್ಧತೆ

ಮೈಸೂರು, ಜು.10- ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಮೂರನೇ ಆಷಾಢ ಶುಕ್ರವಾರದ ವಿಶೇಷ ಪೂಜೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಗುರುವಾರ ರಾತ್ರಿ 10 ಗಂಟೆಯಿಂದಲೇ ಚಾಮುಂಡಿಬೆಟ್ಟಕ್ಕೆ ವಾಹನ ಪ್ರವೇಶ ನಿರ್ಬಂಧಿಸಿ, ಬೆಟ್ಟದಲ್ಲಿ ರಾತ್ರಿ ಯಾರೂ ಉಳಿದುಕೊಳ್ಳದಂತೆ ನಿಗಾ ವಹಿಸಲಾಗಿದೆ. ಚಾಮುಂಡೇಶ್ವರಿ ದೇವಾಲಯವನ್ನು ನಾನಾ ಫಲ-ಪುಷ್ಪಗಳಿಂದ ಸಿಂಗರಿಸಲಾಗಿದ್ದು, ದೇವಿಗೆ ಅತ್ಯಾಕರ್ಷಕ ಅಲಂಕಾರದೊಂದಿಗೆ ವಿಶೇಷ ಪೂಜೆ ಸಲ್ಲಿಸಲು ಸಕಲ ತಯಾರಿ ನಡೆದಿದೆ.

ಮೆಟ್ಟಿಲು ಮಾರ್ಗ ಹಾಗೂ ಸಾರಿಗೆ ಬಸ್‌ಗಳಲ್ಲಿ ಬರುವ ಭಕ್ತರು ಗೊಂದಲವಿಲ್ಲದೆ ಸರದಿ ಮೂಲಕ ದೇವಾಲಯಕ್ಕೆ ಪ್ರವೇಶಿಸುವ ವ್ಯವಸ್ಥೆ, 2 ಸಾವಿರ ರೂ. ವಿಶೇಷ ಪ್ರವೇಶ ಟಿಕೆಟ್ ಖರೀದಿಸುವವರ ಸರದಿ, ವಿಐಪಿ ಹಾಗೂ ವಿವಿಐಪಿ ಗಣ್ಯರ ಪ್ರವೇಶಕ್ಕೆ ಮಾಡಿಕೊಂಡಿರುವ ವ್ಯವಸ್ಥೆಯನ್ನು ಪರಿಶೀಲಿಸಿ, ಹೆಚ್ಚುವರಿಯಾಗಿ ಎಲ್ಲೆಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವ ಅಗತ್ಯವಿದೆ ಎಂದು ಅಧಿಕಾರಿಗಳು ಪರಿಶೀಲಿಸಿ, ಕ್ರಮ ವಹಿಸಿದ್ದಾರೆ.

ಮೂರು ದಿನ ನಿರ್ಬಂಧ: ಕಳೆದೆರಡು ವಾರಗಳಂತೆ ಶುಕ್ರವಾರ, ಶನಿವಾರ ಹಾಗೂ ಭಾನುವಾರದಂದು ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ದಿನಗಳಲ್ಲಿ ಲಲಿತಮಹಲ್ ಬಳಿಯ ಮೈದಾನದಿಂದ ಬೆಳಗ್ಗೆ 5ರಿಂದ ರಾತ್ರಿ 8 ಗಂಟೆವರೆಗೂ ಉಚಿತ ಸಾರಿಗೆ ಬಸ್ ವ್ಯವಸ್ಥೆ ಇರಲಿದೆ. ಮೆಟ್ಟಿಲುಗಳ ಮೂಲಕ ಚಾಮುಂಡಿಬೆಟ್ಟ ಹತ್ತುವ ಭಕ್ತರಿಗೆ ಶುಕ್ರವಾರ ಬೆಳಗ್ಗೆ 5ರಿಂದ ಸಂಜೆ 6ರವರೆಗೆ ಅವಕಾಶ ಕಲ್ಪಿಸಲಾಗಿದೆ.



ಸಾಂದರ್ಭಿಕ ಚಿತ್ರ

ಮೊದಲ ಶುಕ್ರವಾರ ಕನಿಷ್ಟ ಮೂಲ ಸೌಕರ್ಯ, ಭದ್ರತೆ, ಸರದಿ ವ್ಯವಸ್ಥೆ ಸೇರಿದಂತೆ ಹಲವು ವಿಚಾರಗಳಲ್ಲಿ ಭಕ್ತರಿಂದ ಅಸಮಾಧಾನ ವ್ಯಕ್ತವಾಗಿತ್ತು. ನಂತರ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಭೇಟಿ ನೀಡಿ, ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದ್ದರು. ನಿನ್ನೆ ಡಿಜಿಐಜಿಪಿ ಡಾ.ಎಂ.ಎ.ಸಲೀಂ ಅವರೂ ಭೇಟಿ ನೀಡಿ, ವಾಹನ ಸಂಚಾರ ಹಾಗೂ ಭದ್ರತಾ ವ್ಯವಸ್ಥೆ ಸಂಬಂಧ ಸೂಕ್ತ ಮಾರ್ಗದರ್ಶನ ನೀಡಿದ್ದರು. ಈ ಹಿನ್ನೆಲೆಯಲ್ಲಿ ಭಕ್ತರಿಗೆ ತೊಂದರೆಯಾದಂತೆ ಪೊಲೀಸರು ಹೆಚ್ಚಿನ ನಿಗಾ ವಹಿಸಿದ್ದಾರೆ.

ವಿವಿಧೆಡೆ ಪೂಜೆ: ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟದಲ್ಲಿ ಮಾತ್ರವಲ್ಲದೆ ಇಡೀ ಮೈಸೂರು ನಗರದಲ್ಲೇ ತಾಯಿ ಚಾಮುಂಡೇಶ್ವರಿಯನ್ನು ಭಕ್ತಿಭಾವದಿಂದ ಆರಾಧಿಸಲಾಗುತ್ತದೆ. ಮೂರನೇ ಶುಕ್ರವಾರವೂ ಆಟೋ ಚಾಲಕರು, ವರ್ತಕರು, ಬೀದಿಬದಿ ವ್ಯಾಪಾರಿಗಳು ಅಲ್ಲಲ್ಲೇ ತಾಯಿ ಚಾಮುಂಡೇಶ್ವರಿಯನ್ನು ಪ್ರತಿಷ್ಠಾಪನೆ ಮಾಡಿ, ಪೂಜೆ ಸಲ್ಲಿಸಿ ಪ್ರಸಾದ ವಿತರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

neem® BOND PLATINUM
PLYWOOD & DOORS
@ Factory Depot Rates
15 Years Replacement Guarantee
BORER & WATER PROOF
S.S.Build Mart, Mysuru
9731591267 / 9901291267

DESIGNED TO MAKE EVERY SPACE BEAUTIFUL
2 BHK HOME INTERIORS @ ₹2.9 LAKHS
HOME SPACE MART
Kushalnagar • Mysuru • Bengaluru
For Site Visit :
✆ 9108923123

RBI-LCE No - UBD.KAN.1614P
ಸ್ಥಾಪನೆ : 1998
ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಆಡಳಿತ ಕಛೇರಿ : ಅರ್ಕನಾಥ ರಸ್ತೆ, ಕೃಷ್ಣರಾಜನಗರ - 571 602, ಮೈಸೂರು ಜಿಲ್ಲೆ. 08223-262312
ಶ್ರೀ ಎಸ್. ನಂಜಪ್ಪನವರು ಮಾಜಿ ಸಚಿವರು ಸಂಸ್ಥಾಪಕ ಅಧ್ಯಕ್ಷರು

ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರ

ಅನುಕೂಲಕರ ವ್ಯವಹಾರಿಕ ವೇಳೆ
ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರ
ಸರಳ ರೀತಿಯ ಸಾಲ ಸೌಲಭ್ಯ

ಅವಧಿ	ಇತರರಿಗೆ	ಹಿರಿಯ ನಾಗರೀಕರಿಗೆ
181-364 ದಿನಗಳು	8.00%	8.50%
1 ವರ್ಷಕ್ಕೆ	8.50%	9.00%
2 ವರ್ಷ & ಮೇಲ್ಪಟ್ಟು	9.00%	9.50%

UNFIXED DEPOSIT FACILITIES AVAILABLE AND NO PRE MATURE PENALTY FOR UNFIXED DEPOSIT
ನವಜ್ಯೋತಿ ಠೇವಣಿ 8 ವರ್ಷಕ್ಕೆ ದ್ವಿಗುಣ
ಹಿರಿಯ ನಾಗರೀಕರಿಗೆ 7 ವರ್ಷ 9 ತಿಂಗಳಲ್ಲಿ ದ್ವಿಗುಣ
ಸಮಯ – ಬೆಳಗ್ಗೆ 9:00 ರಿಂದ 1:00 ಸಂಜೆ – 4:00 ರಿಂದ 7:00 ರವರೆಗೆ
2ನೇ ಶನಿವಾರ ಮತ್ತು 4ನೇ ಶನಿವಾರ ನಮ್ಮ ಎಲ್ಲ ಶಾಖೆಗಳು ತೆರೆದಿರುತ್ತವೆ. ಭಾನುವಾರ ಕೆ.ಆರ್.ನಗರ ಶಾಖೆ ತೆರೆದಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ:
ಕೆ.ಆರ್.ನಗರ : 08223-264312 ಪಿರಿಯಾಪಟ್ಟಣ: 08223-274312
ಹುಣಸೂರು : 08222-253312 ಹೂಟಗಳ್ಳಿ, ಮೈಸೂರು : 0821-244312

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎಸ್ ಹೇಮಚಂದ್ರ (ಬಾಳೆಕಾಯಿ ಮಂಡಿ ಮಾಲೀಕರು)

ಇವರು ದಿನಾಂಕ 01-07-2025ನೇ ಮಂಗಳವಾರ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 12-07-2025ನೇ ಶನಿವಾರ ಬೆಳಗ್ಗೆ 11:00 ಗಂಟೆಗೆ ಮೃತರ ಸ್ವಗೃಹ #264, 7ನೇ ಮೇನ್, ಆಲನಹಳ್ಳಿ ಬಡಾವಣೆ ಮೈಸೂರಿನಲ್ಲಿ ಹಾಗೂ ಹಾಲುತುಪ್ಪ ಕಾರ್ಯವನ್ನು ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ಇಂದ್ರ ಪಿ. ಮತ್ತು ಮಕ್ಕಳು ಕುಟುಂಬವರ್ಗದವರು
ಭೋಜನ : ಮಧ್ಯಾಹ್ನ 1 ಗಂಟೆಗೆ, ಸ್ಥಳ: ಮೃತರ ಸ್ವಗೃಹ

SITES FOR SALE
- 30x40 two adjacent Sites for Sale near Rashtrotthana School
- Located in Prime location of Mysore-Dadadahalli Road
- MUDA Approved & RERA Registered
- Clear documents
- Rs.3,000/- per Sqft (Slightly Negotiable)

For more details Contact:
9742396812 / 8152855628

SITES FOR SALE
Near Nivedithanagar
30x40 North face
40x60 East face
40x56 South face
(Bogadi Village).
Mob: 9945148025

APARTMENT FOR SALE
3BHK, 1800 SQFT
Location: Lakshmipuram (100M From Nanjumalige Circle)
9985851991

G9 projects Designing your Dreams
Vee2 Developers
VAISHNAVI LAYOUT
30 X 40 30 X 50
NEAR RING ROAD RT NAGAR ENTRANCE
HERITAGE CITY
MUDA APPROVED LAYOUT
20X30
Site Value ₹ 20,00,000
RING ROAD, UTTANAHALLI, MYSURU
✆ 8088-707-707

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಕೆಂಪಮ್ಮ

#2738, 1ನೇ ಕ್ರಾಸ್, 3ನೇ ಮೇನ್, ಕೆ.ಜಿ.ಕೊಪ್ಪಲ್, ಮೈಸೂರು ಇಲ್ಲಿ ವಾಸವಾಗಿರುವ ಲೇಟ್ ಶ್ರೀ ವಾಯಿಗೌಡರ ಕುಟುಂಬ ಶ್ರೀ ಬಿ. ಬಸವರಾಜು ಮಾಡುವ ವಿಜ್ಞಾಪನೆಗಳು. ನನ್ನ ಧರ್ಮಪತ್ನಿ ದಿನಾಂಕ 30-06-2025 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 11-07-2025 ಶುಕ್ರವಾರ ಬೆಳಗ್ಗೆ 10.30 ಗಂಟೆಗೆ ಶ್ರೀ ಮರುಳೇಶ್ವರ ದೇವಸ್ಥಾನ, ಶಾಂತಿಧಾಮ, ಕಾವೇರಿ ಶಾಲೆ ಎದುರು, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಭೋಜನ : ಮಧ್ಯಾಹ್ನ : 12.30 ಕ್ಕೆ

ದುಃಖತಪ್ತರು: ಮೃತರ ಪತಿ ಶ್ರೀ ಬಸವರಾಜು, ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು



mysore KALENI SILK INDUSTRY
FACTORY SALE
ಅಪ್ಪಟ ಚಿನ್ನದ ಜರಿಯ ಸೀರೆಗಳು
100% PURE SILK / GOLD ZARI SAREES
UP TO 30% DISCOUNT
Woven on traditional looms exclusively with pure silk from the historic region of Mysore.
KALENI SILK INDUSTRY
#263, Hebbal Industrial Area, Opp. to Annapurna Aahar Hotel, Mysore-570018
9019949145 / 9845817295 / 9019348989

WANTED
B.A., D.Ed. / B.Ed. (English / Social)
SUNANDHA ACADEMY SCHOOL
sunandhaacademyschool@gmail.com
Whatsapp: +91 99007 72235

REQUIRED
For Reputed Hospital in Mysore
1. Female Receptionist (With Knowledge of Basic Computer)
2. Male Receptionist
3. ANM or GNM Staff (Min.1 year Experience)
4. Marketing Executives (Min.1 year Experience)
5. Accountant (Min. 2 years Experience)
6. Insurance Assistance (Min.1 year Experience)
7. Nursing Superintendent (Min. 5 years Experience)
9988797995
7204695666

11-7-2025 ರಿಂದ ಮಳೆ, ಬೆಂಕಿ ಚಿಂತೆ ಬಿಡಿ ವಾಟರ್ ಪ್ರೂಫ್ ಟೆಂಟ್
ಪ್ರಥಮ ಬಾರಿಗೆ ಮಂಡ್ಯದಲ್ಲಿ
ಏಷಿಯಾಸ್ ಬೆಸ್ಟ್ ಅಂಡ್ ಬಿಗ್ಗೆಸ್ಟ್ ವರ್ಲ್ಡ್ ಸರ್ಕಸ್ ಕಾರ್ನಿವಾಲ್
ಗ್ರೇಟ್ ಬಾಂಬೆ ಸರ್ಕಸ್
Opp Sugar Factory, Old MC Road, Mandya



ಪ್ರವೇಶ ದರ: ರೂ 300/-, 200/, 100/-
ಮುಂಗಡ ಬುಕ್ಕಿಂಗ್: ರೂ. 300ಕ್ಕೆ ಡಿಸ್ಟ್ರಿಕ್ಟ್ ಬೈ ಜೊಮ್ಯಾಟೋ
ಸಂಪರ್ಕಿಸಿ: 80759-66829 83683-32381

SITES FOR SALE
40X60 EAST GREEN PARK
Opp. Delhi Public School, Bannur Road
30X40 WEST GOLDEN PALMS
Next R R Wedding Bells, Bannur Road
30X50 EAST SPRING MEADOWS
Behind RBI, Opp Wipro, KRS Road
MOB: 8310839079

NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಕೆ.ಎಂ. ಶಂಕರ್
ಮಾಜಿ ನಗರಪಾಲಿಕೆ ಸದಸ್ಯರು

ಇವರು ದಿನಾಂಕ 01-07-2025ನೇ ಮಂಗಳವಾರ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 12-07-2025ನೇ ಶನಿವಾರ ಬೆಳಗ್ಗೆ 11:00 ಗಂಟೆಗೆ ಶ್ರೀ ಮರುಳೇಶ್ವರ ಶಾಂತಿಧಾಮ ಕಾವೇರಿ ಸ್ಕೂಲ್ ಹತ್ತಿರ, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು
ಮೃತರ ಧರ್ಮಪತ್ನಿ ಶ್ರೀಮತಿ ರುಕ್ಮಿಣಿ ಮತ್ತು ಮಕ್ಕಳು ಭೋಕ್ಕಯ್ಯನವರ ಕುಟುಂಬದವರು,
ಅಣ್ಣ-ತಮ್ಮಂದಿರು ಅಕ್ಕ-ತಂಗಿಯರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಭೋಜನ : ಮಧ್ಯಾಹ್ನ 1 ಗಂಟೆಗೆ ಸ್ಥಳ: ಮರುಳೇಶ್ವರ ಶಾಂತಿ ಧಾಮ

SUZUKI
BEST VALUE
Pre-owned Two Wheelers
NOW OPEN IN KARNATAKA, MYSURU.
Get Reliable Quality at Promising Prices in Your City.
Refurbished by Suzuki Genuine Parts | Certified Vehicles | Up to 1 Year Warranty | Up to 3 Free Services | Hassle-free Documentation | Easy Finance Schemes | Attractive Exchange Value
THE NEW BEST VALUE SHOWROOM IS NOW OPEN IN KARNATAKA, MYSURU.
PHOENIX SUZUKI
JANANI AUTOMOBILES PRIVATE LIMITED
1848/2, Hinkal Village,
Hunsur Road, Mysuru Taluk,
Karnataka - 570017
Mobile No-9742266346/9742263386
SCAN TO VISIT QR CODE



For further details please refer the link: https://www.suzukimotorcycle.co.in/best-value/index
Disclaimer : Images used are for illustration purposes only. Accessories shown in the pictures are not a part of the standard product and may vary from variant to variant. Evaluation time shall be subject to the documentation and availability of the technical staff at best value outlets. Exchange value shall be subject to the condition of the vehicle. Finance scheme and loan approval is at sole discretion of Financer company. 1 year (One) warranty and free services are provided by third party. For more info visit www.suzukimotorcycle.co.in/best-value/index. Terms & Conditions apply.